UNIVERSAL
LIBRARY
OU_200382
UNIVERSAL
LIBRARY

॥ ವಂದೇ ಮಾತರಂ ॥

ಪ್ರತಿ ಎರಡುತಿಂಗಳಿಗೊಮ್ಮೆ ಹೊರಡುವ


# ಭಾರತೀ ಗ್ರಂಥಮಾಲಾ

ಕಟಪಾಡಿ, ದ. ಕ.

ಮಾಲೆ ೧ ಮಣಿ ೪




# ಲೋಪಾಮುದ್ರೆ


ಬರೆದವರು

ಜಿ. ವಾಸುದೇವರಾವ್, ಅಧ್ಯಾಪಕ, ದೇಶೀಯ ವಿದ್ಯಾಶಾಲೆ
ಬೆಂಗಳೂರು ಸಿಟಿ.



ನಿರ್ದೇಶಕ.

ಕೆ. ಬಿ. ಸೀತಾರಾಮ ಧೊರೆಬಲ್ಲಾಳ

ಸಂಪಾದಕ: ಯಂ. ಯಸ್. ಹೆಗ್ಡೆ, ಶಿರ್ವ,

ಪ್ರಕಾಶಕ: ವೈ. ರಾಮಕೃಷ್ಣ ಪುರಾಣಿಕ.

ಬಿಡಿಪ್ರತಿಗೆ ರೂ. 0—4—0

ವಾರ್ಷಿಕ ಚಂದಾ ರೂ. 1—8—0



(ಇದರ ಎಲ್ಲಾ ಹಕ್ಕುಗಳು ಕಾದಿಡಲ್ಪಟ್ಟಿವೆ.)



1 ಮಾರ್ಚಿ 1939

ತುಳುನಾಡ್ ಛಾಪಖಾನೆ, ಉಡುಪಿ.

# ಜಾಹೀರಾತುದಾರರಲ್ಲಿ

ವಾಚಕರ ಸಂಖ್ಯೆಯು ಅತಿ ರಭಸದಿಂದ ಮೊಳೆಯುತ್ತಿರುವುದನ್ನು ಕಂಡು ಜಾಹೀರಾತುಗಳಿಗೆ ನಮ್ಮ ಗ್ರಂಥಮಾಲೆಯೂ ಎಡೆಗೊಡಬೇಕೆಂಬ ಒತ್ತಾಯದಿಂದ ಈ ಸಂಚಿಕೆಯ ಆದಿಯಿಂದ ಜಾಹೀರಾತುಗಳನ್ನು ಪ್ರಕಟಿಸಲು ಆರಂಭಿಸಿರುತ್ತೇವೆ. ಪ್ರಕಟಣೆಯು ಒಂದು ಸುಂದರವಾದ ಸ್ವತಂತ್ರ ಪುಸ್ತಕವಾದುದರಿಂದ ಅದರಲ್ಲಿಯ ಜಾಹೀರಾತು ಅನಂತಕಾಲದ ವರೆಗೆ ಜನರ ಕಣ್ಮುಂದಿರುವುದು.

ಜಾಹೀರಾತುಗಳ ದರ

| ಪ್ರತಿ ಸರ್ತಿಗೆ | ಇಡೀ ಪುಟ | ಅರ್ಧ ಪುಟ | ಕಾಲು ಪುಟ |
|---|---|---|---|
| | ರೂ. ೮ | ರೂ. ೫ | ರೂ. ೩ |

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ—

**ಭಾರತೀ ಗ್ರಂಥಮಾಲಾ, ಕಟಪಾಡಿ, ದ. ಕ.**

1—5—1939 ಕ್ಕೆ

ಹೊರಡುವ ಮುಂದಿನ ಸಂಚಿಕೆ

# "ಅಧರ್ಮವೇ?"

ಎಂಬ ಅತ್ಯಾಧುನಿಕ ಸಾಮಾಜಿಕ ಕಾದಂಬರಿಯನ್ನು

ಓದಲು ಮರೆಯಬೇಡಿರಿ.

# HOSAKOPPA KRISHNA RAO,

Camp: HARIHARPUR T. B.

**HARIHARPUR**

This is to request the Kannada loving public will kindly take into their favourable consideration the troubles taken by the tallented Editor of "Bharathi Granthamala" published once in two months in the well-known Congress village-Katapadi in South Kanara. The matter, the get up etc, of this peace full jurnal is, I am sure, bound to win the appreciation all over Karnatic. The venture deserves public support and encouragement moral as well as financial.

*Hariharpur*
*18-1-39*

**H. Krishna Rao**

# ಹೊಸಕೊಪ್ಪ ಕೃಷ್ಣರಾವ್

ಕೇಂಪ್, ಟ್ರಾವಲರ್ಸ್ ಬಂಗ್ಲೆ, ಹರಿಹರಪುರ.

ದಕ್ಷಿಣ ಕನ್ನಡ ಜಿಲ್ಲೆಯ ಕಟ್ಪಾಡಿಯಲ್ಲಿ ಭಾರತೀ ಗ್ರಂಥ ಮಾಲೆಯ ನೇತೃತ್ವದಲ್ಲಿ ಪ್ರಕಟವಾಗುತ್ತಿರುವ ದ್ವೈಮಾಸಿಕ ಪತ್ರಿಕೆಯು ನನ್ನ ಕೈಸೇರಿರುವುದು. ಪತ್ರಿಕೆಯು ಬಾಹ್ಯಾಂಗ ಮತ್ತು ಅಂತರಂಗಗಳಲ್ಲಿಯೂ ಕೂಡ ಕನ್ನಡಿಗರ ಕಣ್ಮನವನ್ನು ಸೆಳೆಯುವಂತಿದೆ. ಇದರ ಸಂಪಾದಕರ ಧ್ಯೇಯವು ಮತ್ತು ಸಾಹಸವು ಸ್ತುತ್ಯಾರ್ಹವಾದುದು. ಕನ್ನಡ ಭಾಷಾಭಿಮಾನಿಗಳು ಈ ಪತ್ರಿಕೆಯ ಪುರೋಭಿವೃದ್ಧಿಯನ್ನು ತನುಮನಧನಗಳಿಂದಲೂ ಹಾರೈಸಬೇಕಾಗಿ ನನ್ನ ನಮ್ರ ವಿನಂತಿ.

Hariharpur
18—1—'39

(*Sd*) **H. Krishna Rao.**

ಭಾರತೀ ಗ್ರಂಥಮಾಲಾ

ಮಣಿ ೧

# ಬೆಳಕು

ಮಣಿ ೨

# ತಿನಿಸು

ಮಣಿ ೩

# ಪ್ರತೀಕಾರ

ಬೆಲೆ ಪ್ರತಿ ಒಂದರ **0—4—0.**

## — ನಮ್ಮ ಏಜಂಟರುಗಳು —

೧. ಕೆ. ಮುದ್ದು ಶೆಟ್ಟಿ, ಕಟಪಾಡಿ.

೨. ಸಚ್ಚಿದಾನಂದ ಸ್ಟೋರ್ಸ್,
ಕುಂದಾಪುರ, ದ. ಕ.

೩. ಕೆ. ಭೋಜರಾಜ ಶೆಟ್ಟಿ, ಎಪ್ಪೋಲೋ ಸ್ಟ್ರೀಟ್
ಬೊಂಬೇ.

೪. ಕೆ. ರಾಮಕೃಷ್ಣಯ್ಯ, ಮಿತ್ರಸಮಾಜ
ಹುಬ್ಬಳ್ಳಿ.

೫. ಸಿ. ರಾಮರಾವ್, ನ್ಯೂಸ್ ಏಜಂಟ್
ಚಿತಲ್‌ದುರ್ಗ.

**ಯೋಗ್ಯ ಏಜಂಟರುಗಳು ಎಲ್ಲೆಲ್ಲಿಯೂ ಬೇಕಾಗಿದ್ದಾರೆ**

**ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.**

**ಭಾರತೀ ಗ್ರಂಥಮಾಲಾ ಆಫೀಸ್,**
**ಕಟಪಾಡಿ, ದ. ಕ.**

# ಅ ನು ಕ್ರ ಮ ಣಿ ಕೆ


| | | |
|---|---|---|
| ೧. | ಕವೇರದಂಪತಿ | ೧—೩ |
| ೨. | ಮೋಹಿನಿ | ೩—೧೦ |
| ೩. | ಲೋಪಾಮುದ್ರೆ | ೧೦—೧೬ |
| ೪. | ಕಾವೇರಿ | ೧೬—೧೯ |
| ೫. | ಅಗಸ್ತ್ಯ | ೧೯—೨೪ |
| ೬. | ಕಾವೇರಿಯ ಬಾಲ್ಯ | ೨೪—೨೮ |
| ೭. | ಅಗಸ್ತ್ಯನ ತೇಜಸ್ಸು | ೨೮—೩೪ |
| ೮. | ಅಗಸ್ತ್ಯಾಗಮನ | ೩೪—೩೮ |
| ೯. | ಅಗಸ್ತ್ಯ-ಕಾವೇರಿ (ಪ್ರತಿಜ್ಞೆ) | ೩೮—೪೩ |
| ೧೦. | ಕಾವೇರಿಯ ಲಗ್ನ | ೪೪—೪೬ |
| ೧೧. | ಗೃಹಪ್ರವೇಶ | ೪೬—೪೯ |
| ೧೨. | ಕನಕೆಸುಜ್ಯೋತಿ | ೪೯—೫೫ |
| ೧೩. | ವಿಂಧ್ಯಗರ್ವಭಂಗ | ೫೫—೬೩ |
| ೧೪. | ಪರೋಪಕಾರ | ೬೩—೭೨ |
| ೧೫. | ಕನಕಾಸಂಗಮ | ೭೨-೮೭ |
| ೧೬. | ಸತ್ವಪರೀಕ್ಷೆ | ೮೭—೯೪ |
| ೧೭. | ಉಪಸಂಹಾರ | ೯೪—೯೫ |

# ಲೋಪಾಮುದ್ರಾ

## ಪರಿಚ್ಛೇದ ೧

### ಕವೇರದಂಪತಿ

ಪ್ರಥಮ ಕಲ್ಪ. ಆಗ ಸಂಧ್ಯಾಕಾಲ. ರವಿಯು ಪಡುಗಡಲನ್ನು ಸೇರಿದ್ದನು. ನಡುಹರೆಯದ ದಂಪತಿಯರು ತಮ್ಮ ಮನೆಮುಂಗಡೆ ಜಗಲಿಯಲ್ಲಿ ಕುಳಿತು ಮೋಹಸಲ್ಲಾಪದಿಂದ ಮೆರೆಯುತಿದ್ದರು. ದೂರದಲ್ಲಿ ಸಹ್ಯಾಚಲವು ತಲೆಯೆತ್ತಿ ಮಲಗಿದ್ದ ಕಂದು ಬಣ್ಣದ ಹಸುವಿನಂತೆ ಬೆಳದಿಂಗಳಲ್ಲಿ ಕಂಗೊಳಿಸುತಿತ್ತು. ಪುರುಷನ ಹಣೆಯಲ್ಲಿ ಶೋಭಿಸುತಿದ್ದ ಪುಂಡರೀಕ, ದೇಹವನ್ನಲಂಕರಿಸಿದ್ದ ಯಜ್ಞೋಪವೀತ, ಬೆರಳುಗಳನ್ನು ಬಂಧಿಸಿದ್ದ ದರ್ಭೆ, ಪಕ್ಕದಲ್ಲಿ ಜ್ವಲಿಸುತಿದ್ದ ಗೃಹಾಗ್ನಿ, ಮನೆಮುಂಗಡೆಯ ವೃಂದಾವನ ಇತ್ಯಾದಿಗಳು ಬ್ರಾಹ್ಮಣನ ಮನೆಯನ್ನು ಸೂಚಿಸುತಿದ್ದುವು.

ವಿಪ್ರದಂಪತಿಗಳು ಉದಯಿಸುತಿದ್ದ ಚಂದ್ರನನ್ನು ನೋಡಿ, ರವಷ್ಟು ಹೊತ್ತು ಮೌನವಾಗಿ ಕುಳಿತುಬಿಟ್ಟರು ಶಾಂತಿಯು ಆಗ ಎಲ್ಲೆಡೆಗಳಲ್ಲಿಯೂ ಹಬ್ಬುತಿತ್ತು. ಸ್ವಲ್ಪ ಹೊತ್ತು ಆಲೋಚಿಸಿ ಗಂಡುಸು ಒಂದು ನಿಟ್ಟುಸಿರು ಬಿಟ್ಟು—ಪ್ರಿಯೇ 'ನಾಪುತ್ರಸ್ಯ ಗತಿರ್ಲೋಕೇ' ಎಂಬ ವೇದವಾಕ್ಯವು ದಿನದಿನವೂ ನನ್ನ ಹೃದಯವನ್ನು ಚುಚ್ಚುತ್ತಿರುವುದು. ಪೂರ್ವಜನ್ಮದ ಕರ್ಮವು ನಮ್ಮ ಬೆನ್ನುಹತ್ತಿರುವುದು. ಈ ಜನ್ಮದಲ್ಲಿ ಮಾಡಿದ ಪುಣ್ಯಕಾರ್ಯಗಳಿಂದ ಫಲವು ದೊರಕದಂತಾಯಿತು' ಎಂದನು.

ವಿಪ್ರಪತ್ನಿಯಾಗ ತನ್ನ ಪ್ರಿಯನ ಕಡೆ ಚಂದ್ರಬಿಂಬದಂತೆ ಶೋಭಿಸುತಿದ್ದ ಮುಖವನ್ನು ತಿರುಗಿಸಿ—ಪ್ರಿಯಾ! ಇನ್ನೇನು ಮಾಡಲಿರುವುದು?

ಸಕಲ ತೀರ್ಥಯಾತ್ರೆ ಮಾಡಿದುದಾಯಿತು. ಸಕಲ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದುದಾಯಿತು. ಆದರೆ ಸಂತತಿ ಲಾಭವಾಗಲಿಲ್ಲವು. ನಾವು ನಿರ್ಭಾಗ್ಯರು! ಇನ್ನು ನರಕಯಾತನೆಯನ್ನನುಭವಿಸಲು ಈಗಲೇ ಸಿದ್ಧರಾಗಿರುವುದುತ್ತಮವಲ್ಲವೇ?" ಎಂದಳು. ಅದಕ್ಕೆ ವಿಪ್ರನು-"ಮನೋಹರೇ ಆದರೆ ಪ್ರಯತ್ನಗಳನಿನ್ನೂ ಮಾಡಲಿಕ್ಕಿರುವುದು. ಪೂರ್ವದಲ್ಲಿ ಅನೇಕ ರಾಜರೂ, ಮುನಿಗಳೂ ಯಜ್ಞಯಾಗಾದಿಗಳಿಂದ ಸಂತತಿ ಲಾಭವನ್ನು ಪಡೆದಿರುವರು. ಇನ್ನು ಕೆಲವರು ತಪಸ್ಸಿದ್ಧಿಯಿಂದ ಲೋಕೇಶನನ್ನು ಕುರಿತು ತಪಸ್ಸುಮಾಡಿ ತಂತಮ್ಮ ಮನೋಭೀಷ್ಟಗಳನ್ನು ಹೊಂದಿರುವರು" ಎಂದನು.

ಅದಕ್ಕಾ ಸಾರೀಮಣಿ—ಪ್ರಿಯನೇ, ನಾವು ಯೌವನವನ್ನು ಕಳೆದಿರುವೆವು. ಇನ್ನು ತಪಸ್ಸಿನಿಂದ ದೇವನನ್ನೊಲಿಸಿಕೊಂಡರೂ ಮಕ್ಕಳಾಗುವ ಬಗೆ ಹೇಗೆ?"? ಎಂದು ಪ್ರಶ್ನಿಸಿದಳು.

"ಪ್ರಿಯೇ! ಪರಮಾತ್ಮನ ಲೀಲೆಯು ಅಗಾಧವಾಗಿರುವುದು. ಅವ ನಿಚ್ಛಿಸಿದರೆ ಅಸಾಧ್ಯವಾದುದು ಸಾಧ್ಯವಾಗುವುದು. ಅಸಂಭವವಾದುದು ಸಂಭವಿಸುವುದು. ಭಕ್ತರಿಗೊಲಿದು ಅವರ ಮನೋಭೀಷ್ಟವನ್ನು ನೆರವೇರಿಸುವುದೇ ಅವನ ಕರ್ತವ್ಯವಾಗಿದೆ. ಸಹಸ್ರಕಾಲದ ವ್ರತನಿಯಮ ನಿಷ್ಠೆಗಳಿಗಿಂತ ಅವನ ಕರುಣಾರ್ದ್ರ ದೃಷ್ಟಿಯು ಹೊಳಪೇ ನಿಮಿಷಾರ್ಧದಲ್ಲಿ ನಮ್ಮ ಕೋರಿಕೆಗಳನ್ನು ಕೈಗೂಡಿಸಬಲ್ಲುದು. ಮಹಾಮಹಿಮನಾದ ಆದಿಕೇಶವನಿಗೆ ಇವೆಲ್ಲವೂ ಕರತಲಾಮಲಕದಂತೆಯೇ ಸರಿ" ಎಂದನು.

"ಅಹುದು. ಪರಮಾತ್ಮನ ಮಹಿಮೆಯನ್ನು ಬಣ್ಣಿಸಲಸದಳವು. ಹಿಂದೆ ಸಗರನು ತಪಶ್ಶಕ್ತಿಯಿಂದ ಅರವತ್ತು ಸಾವಿರ ಪುತ್ರರನ್ನು ಪಡೆದನೆಂದು ಕೇಳಿರುವೆನು." ಎಂದು ಪತ್ನಿಯು ನುಡಿದಳು.

"ಏಕೆ? ಅಶ್ವಪತಿ ರಾಜನು ಮುದುಕನಾಗಿದ್ದಾಗ ತಪಶ್ಶಕ್ತಿಯಿಂದ ಸಾವಿತ್ರಿಯನ್ನು ಪಡೆದನು. ಆದ್ದರಿಂದ ನಾನೂ ತಪಸ್ಸುಮಾಡಿ ನಮ್ಮ ಮನೋಭೀಷ್ಟವನ್ನು ಕೈಗೂಡಿಸಲು ಪ್ರಯತ್ನಿಸುವೆನು" ಎಂದು ವಿಪ್ರನು ನುಡಿದನು. ಆ ಮಾತನ್ನು ಕೇಳಿ ಅವನ ಸಹಧರ್ಮಿಣಿಯು ಒಡನೆ—"ರಮಣನೇ! ನಾನೂ ನಿನ್ನ ಸಂಗಡ ಬರುವೆನು" ಎಂದೆನಲು ವಿಪ್ರನು

ಸಮ್ಮತಿಸದೆ-"ಸ್ತ್ರೀಯರಿಗೆ ತಪಸ್ಸಸಲ್ಲದು" ಅಲ್ಲದೆ ಕೋಮಲೆಯಾದ ನಿನಗೆ ಅರಣ್ಯವಾಸವು ಭಯಂಕರವಾಗಿ ತೋರಬಹುದು. ನೀನಿಲ್ಲಿಯೇ ಇರು" ಎಂದು ಬುದ್ಧಿವಾದವನ್ನು ಹೇಳಿದನು

ಆದರೆ ಆ ನಾರೀಮಣಿಯು ಸಮ್ಮತಿಸದೆ, "ಪ್ರಿಯನೇ, ನಾನು ನಿನ್ನ ಸಹಧರ್ಮಿಣಿಯು. ನೀನೆಲ್ಲಿಗೆ ಹೋಗುವೆಯೋ ನಾನೂ ಅಲ್ಲಿಗೆ ಬರುವೆನು. ನೀನೆನ್ನೆದುರಿನಲ್ಲಿರದಿದ್ದರೆ ನನಗೆ ಅರಣ್ಯವಾಸದಂತೆ ತೋರುವುದು. ನಾನೂ ಬರುವೆನು" ಎಂದು ಹಠಹಿಡಿದಳು. ವಿಪ್ರನಾಗ ಸಂತೋಷದಿಂದ "ಪ್ರಿಯೇ! ನಿನ್ನಿಷ್ಟದಂತೆಯೇ ಆಗಲಿ. ನಾಳೆ ಪ್ರಾತಃಕಾಲವೇ ನಾವಿಲ್ಲಿಂದ ಹೊರಟು ಆ ಸಹ್ಯಾದ್ರಿಯ ಗುಹೆಯನ್ನು ಸೇರಿ ಯೋಗಾಭ್ಯಾಸಗಳಿಂದಲೂ ನಿಯಮನಿಷ್ಠೆಗಳಿಂದಲೂ ಬಲವಾದ ತಪಸ್ಸನ್ನು ಮಾಡೋಣ. ಅದೋ ಆ ಪ್ರದೇಶವು ಮಹಾ ಪವಿತ್ರವಾದ ಸ್ಥಳವು. ಅಲ್ಲೇ ಸಪ್ತಋಷಿಗಳೂ ವಾಸಮಾಡುತ್ತಿರುವರೆನ್ನುವರು! ಅಲ್ಲಿ ಆಶ್ರಮವನ್ನು ಹೂಡಿ ನಮ್ಮಿಷ್ಟದಂತೆ ನಡೆಯೋಣ" ಎಂದಂದು ಪತ್ನಿಯ ಕಡೆ ನೋಡಿದನು. ಸುಧಾಂಶುವಿನಿಂದ ಆವಳ ಮುಖದ ಸೌಂದರ್ಯವು ಇಮ್ಮಡಿಯಾಯಿತು. ಅವಳ ಅಧರವು ಕೆಂಬಣ್ಣದಿಂದ ಶೋಭಿಸುತಿತ್ತು. ಅವಳ ಕಣ್ಣುಗಳ (ಮಿಂಚಿನ) ಹೊಳಪು ಚಂದ್ರರಶ್ಮಿಯನ್ನು ಧಿಕ್ಕರಿಸುತಿದ್ದುವು. ವಿಪ್ರನಿಗೆ ಶೋಭಾಯಮಾನವಾಗಿ ಮುಗುಳ್ನಗೆಯಿಂದೊಪ್ಪುತಿದ್ದಾ ಮೊಗವು ಕಾಮೋದ್ರೇಕವನ್ನುಂಟುಮಾಡಿತು. ಅವನಾಗ ಪತ್ನಿಯನ್ನಪ್ಪಿ ಚುಂಬನದ ಸುರಿಮಳೆಯನ್ನು ಸುರಿಸಿದನು. ಬಹಳ ಹೊತ್ತಿನವರೆಗೆ ಮೋಹ ಸಲ್ಲಾಪದ ಸುಖದಲ್ಲಿ ಮೆರೆದು ಸಾಯಂಕಾಲದ ಕರ್ಮಗಳನ್ನು ತೀರಿಸಲು ಒಳಗೆ ಹೋದರು. ಮಕ್ಕಳಿಲ್ಲದ ಮನೆಯದು ನಿಶ್ಶಬ್ದವಾದ ಅಂಧಕಾರದಂತೆ ಕಾಂತಿವಿಹೀನವಾಯಿತು.

ಅವರೇ ಕವೇರದಂಪತಿಯರು!

## ಮೋಹಿನಿ

ಆ ಕಾಲದಲ್ಲಿ ಭೂಲೋಕವು ಕ್ಷೋಭರಹಿತವಾಗಿ ಧನಧಾನ್ಯ ಸಮೃದ್ಧಿಯಿಂದ ತುಳುಕುತ್ತಾ, ಸುಖಪ್ರದವಾಗಿತ್ತು. ದೈತ್ಯರು ಮರ್ತ್ಯಲೋಕದಲ್ಲಿಯೂ ದೇವತೆಗಳು ಅಮರ್ತ್ಯಲೋಕದಲ್ಲಿಯೂ ತಂತಮ್ಮ

ಕಾರ್ಯವನ್ನೆಸಗುತ್ತ, ಸಂತೋಷಾತಿಶಯದಿಂದ ಮೆರೆಯುತಿದ್ದರು. ವೈಜಯಂತಿಯು ತುಂಬಿದ ವೈಭವದಿಂದ ವೈಕುಂಠವನ್ನು ಧಿಕ್ಕರಿಸುತ್ತ ದಿವ್ಯ ಪುಣ್ಯಶಾಲಿಗಳಿಂದಲೂ, ದೇವರ್ಷಿಗಳಿಂದಲೂ, ಗಂಧರ್ವ, ಯಕ್ಷ, ರಕ್ಷ, ಕಿನ್ನರ, ಕಿಂಪುರುಷಾದಿ ದೇವತೆಗಳಿಂದಲೂ ಅತ್ಯಾನಂದವನ್ನುಂಟು ಮಾಡುತಿತ್ತು.

ಒಂದು ದಿನ ದೇವೇಂದ್ರನು ಸರ್ವಾಲಂಕಾರಭೂಷಿತನಾಗಿ, ಆನೆಯನ್ನೇರಿ ವೈಜಯಂತಿಯಲ್ಲಿ ದೇವ ಸಮೂಹದೊಡನೆ ಅತ್ಯಾಡಂಬರದಿಂದ ಮೆರವಣಿಗೆ ಹೋಗುತಿದ್ದನು. ಆಗ ತಾಪಸೋತ್ತಮನಾದ ದುರ್ವಾಸ ಮುನಿಯು ಶಿವಪೂಜೆಯನ್ನು ಮುಗಿಸಿ, ಆ ದಾರಿಗಾಗಿಯೇ ನಡೆತಂದು ಅತಿ ವೈಭವದಿಂದ ವ್ಯೆಮರೆತಿದ್ದ ದೇವೇಂದ್ರನನ್ನು ತಡೆದು, ಶಿವಪೂಜಾ ಪ್ರಸಾದವಾದ ಒಂದು ಹೂಮಾಲೆಯನ್ನವನಿಗಿತ್ತನು. ಮದಾಂಧನಾದ ಸುರಪತಿಯು ಅಲಕ್ಷ್ಯದಿಂದ ಅದನ್ನು ತೆಗೆದುಕೊಂಡು ಆನೆಯ ಕುಂಭಸ್ಥಳದ ಮೇಲಿಟ್ಟನು. ಆ ಮಾತಂಗವು ಸೊಂಡಿಲಿನಿಂದದನ್ನೆತ್ತಿ, ಕಾಲಿನಡಿಯಲ್ಲಿಟ್ಟು ಹಾಳು ಮಾಡಿತು. ಅದನ್ನು ದುರ್ವಾಸ ಮುನೀಶ್ವರನು ನೋಡಿ, ಕುಪಿತನಾಗಿ 'ಎಲೋ ದೇವೇಂದ್ರಾ! ಸುರಪತಿಯೆಂದೆಣಿಸಿ ಮದಾಂಧನಾಗಿರುವೆ. ಐಶ್ವರ್ಯಮದದಿಂದ ಈಶ್ವರ ಪ್ರಸಾದವನ್ನ ಲಕ್ಷಿಸಿದೆ. ಲೋಕೇಶನ ದಿವ್ಯ ಪ್ರಸಾದವನ್ನು ಧೂಳಿಗೆ ಸಮನಾಗಿ ಕಂಡೆ. ಸಮಸ್ತ ದೇವತೆಗಳೊಡೆಯನಾದ ನೀನು ರಾಜ್ಯ ಭ್ರಷ್ಟನಾಗು. ನಿನ್ನ ಕಿರೀಟವು ದೈತ್ಯರ ಪಾದದಡಿಯಲ್ಲಿ ಬಿದ್ದು ಧೂಳಿಮಯವಾಗಲಿ. ನಿನ್ನ ಸಂಪತ್ತೆಲ್ಲವೂ ಕ್ಷಯವಾಗಲಿ'' ಎಂದು ಶಪಿಸಿ ತನ್ನಾಶ್ರಮದ ಕಡೆ ನಡೆದನು.

ಋಷಿಯ ಶಾಪವು ಒಡನೆ ಜೇರೂರಿತು; ಅಗ್ನಿಜ್ವಾಲೆಯಂತೆ ಇಂದ್ರನ ವೈಭವವನ್ನು ಸುಟ್ಟು ಭಸ್ಮಮಾಡಿತು. ದೈತ್ಯರು ಪ್ರಬಲರಾಗಿ ಮೂರು ಲೋಕಗಳನ್ನು ವಶಮಾಡಿಕೊಂಡರು. ದೇವತೆಗಳನ್ನು ದೇವಲೋಕದಿಂದ ಹೊರಡಿಸಿ ತಾವೇ ಸ್ವರ್ಗಲೋಕವನ್ನಾಳಲಾರಂಭಿಸಿದರು. ಸ್ಥಾನಭ್ರಷ್ಟರಾಗಿ ದೇವತೆಗಳು ಭಿಕ್ಷುಕರಂತಲೆದಾಡಿದರು. ದೇವೇಂದ್ರನು ಇಂದ್ರ ಪದವಿಯನ್ನು ಕಳಕೊಂಡನು. ಯಜ್ಞ ಹೋಮ ಯಾಗಾದಿ

ಕರ್ಮಗಳು ನಿಂತವು. ದೇವತೆಗಳಿಗೆ ಹವಿರ್ಭಾಗವು ತಪ್ಪಿಪದಾಗಿ ಅವರೆಲ್ಲಾ ಕ್ಷೀಣರಾದರು. ಸ್ವರ್ಗ ಮರ್ತ್ಯ ಪಾತಾಳ ಲೋಕಗಳು ಕಾಂತಿಗುಂದಿದವು. ದಾನವರು ಯುದ್ಧದಲ್ಲಿ ದೇವತೆಗಳಲ್ಲನೇಕರನ್ನು ಕೊಂದರು. ಸ್ವರ್ಗವಾಸಿಯರ ಸಂಖ್ಯೆಯು ಕಮ್ಮಿಯಾಯಿತು. ದಾನವಾಧಿಪತಿಯಾದ ಬಲಿಯು ತ್ರಿಲೋಕ ವೀರನೆಂದೆಣಿಸಿಕೊಂಡನು.

ಆಗ ಅಳಿದುಳಿದ ದೇವತೆಗಳು ಒಟ್ಟುಗೂಡಿ, ದೇವೇಂದ್ರನೊಡನೆ ಬ್ರಹ್ಮನ ಮುಂದೆ ತಮ್ಮ ದುರ್ದಶೆಯನ್ನು ಹೇಳಿಕೊಂಡರು. ಆದರೆ ವಿರಿಂಚಿಯು ಅವರ ದುರ್ದಶೆ ನಿವಾರಣಕ್ಕೆ ತಕ್ಕುಪಾಯ ಕಾಣದೆ, ವಿಷ್ಣು ಲೋಕಕ್ಕೆ ಅವರನ್ನೆಲ್ಲಾ ಕರೆದೊಯ್ದು ಆದಿ ಮೂರ್ತಿಯಾದ ಶ್ರೀಮನ್ನಾರಾಯಣನ ಮುಂದೆ ದೂರು ಹೇಳಿಕೊಂಡರು. ದಯಾರ್ದ್ರ ಹೃದಯನಾದ ಪರಮಾತ್ಮನು ಅವರನ್ನೆಲ್ಲಾ ಸಂತೈಸಿ, "ದೇವತೆಗಳೇ! ನಿಮ್ಮ ದುರ್ದಶೆಗೆ ನೀವೇ ಕಾರಣರಾದಿರಿ. ಈ ದೈತ್ಯರಿಂದ ತಪ್ಪಿಸಿಕೊಳ್ಳಬೇಕಾದರೆ ನೀವು ಅಮೃತವನ್ನು ಸಂಪಾದಿಸಿಕೊಳ್ಳಬೇಕು. ಆದರದನ್ನು ಪಡೆಯಲು ನಿಮ್ಮಿಂದಾಗದು. ಬಲಾಢ್ಯರಾದ ದೈತ್ಯರ ಸಹಾಯವೂ ನಿಮಗಗತ್ಯ. ಆದ್ದರಿಂದ ನೀವೀಗ ದೈತ್ಯರ ಸಂಗಡ ಸಂಧಿ ಮಾಡಿಕೊಂಡು, ಮುಂದೆ ಅಮೃತವನ್ನು ಸಂಪಾದಿಸಲು ತಕ್ಕ ಹಂಚಿಕೆ ಮಾಡಬೇಕು" ಎಂದು ಹೇಳಿದನು. ದೇವತೆಗಳೆಲ್ಲರೂ ಸಂತೋಷಭರಿತರಾಗಿ ಅಮೃತವನ್ನು ಹೇಗೆ ಸಂಪಾದಿಸಿಕೊಳ್ಳಬಹುದೆಂದು ಕೇಳಲು ಪರಮಾತ್ಮನು ಅವರು ನಡೆಸಬೇಕಾದ ಕಾರ್ಯಕ್ರಮವನ್ನು ತಿಳಿಸಿ ತಾನೂ ಸಹಾಯ ಮಾಡುವೆನೆಂದು ವಾಗ್ದಾನವಿತ್ತು ಅವರನ್ನೆಲ್ಲಾ ಕಳುಹಿಸಿಕೊಟ್ಟನು.

ದೇವತೆಗಳು ನಿಜವಾಸಸ್ಥಾನಕ್ಕೆ ಹಿಂದಿರುಗಿದರು. ದೇವೇಂದ್ರನು ಬಲಿಚಕ್ರವರ್ತಿಯ ಸಂಗಡ ಸಂಧಿಮಾಡಿಕೊಂಡನು. ದಾನವರು ದೇವತೆಗಳು ಸ್ನೇಹದಿಂದ ಸುಖವಾಗಿ ಕಾಲಕಳೆಯುತ್ತಿದ್ದರು. ಆದರೆ ದೇವಲೋಕವನ್ನು ಪುನಃ ಸಂಪಾದಿಸಿಕೊಳ್ಳಲು ತಕ್ಕ ಉಪಾಯವನ್ನು ಮನಸ್ಸಿನಲ್ಲಾಲೋಚಿಸಿ ಹರಿಯ ಮಾತಿನಂತೆ ಸುಮ್ಮನಿದ್ದರು. ದೇವದಾನವರು ಶಾಂತಿಯಿಂದಿರುತಿರಲು, ಒಂದು ದಿನ ದೇವೇಂದ್ರನು ಅಮೃತದ ಮಹತ್ವವನ್ನು ತುಂಬಿದ ದಾನವ ಸಭೆಯಲ್ಲಿ ಬಲಿಯ ಮುಂದೆ ವಿವರಿಸಿ,

ಆ ಅಮೃತವನ್ನು ಪಡೆಯುವ ರೀತಿಯನ್ನು ಹೇಳಿದನು ದಾನವರೆಲ್ಲಾ ದೇವೇಂದ್ರನ ಮಾತನ್ನು ಕೇಳಿ ಹರ್ಷಿತರಾಗಿ, ಚಿರಂಜೀವಿಗಳಾಗಲು ಹವಣಿಸಿ, ಅಮೃತವನ್ನು ಕುಡಿಯಲೇಬೇಕೆಂದು ನಿರ್ಣಯಿಸಿದರು. ಕೂಡಲೆ ಓಷಧಿ ಮೂಲಿಕೆಗಳನ್ನೂ ಗರಿಕೆಗಳನ್ನೂ ಬಗೆಬಗೆಯ ಗಿಡಬಳ್ಳಿಗಳನ್ನೂ ದೇವತೆಗಳ ಮಾತಿನಂತೆ ಕ್ಷೀರಸಾಗರದಲ್ಲಿ ತುಂಬಿದರು. ಮಂದರ ಗಿರಿಯನ್ನು ವಿಷ್ಣುವಿನ ಸಹಾಯದಿಂದ ಕಿತ್ತುತಂದು ಪಾಲ್ಗಡಲಿನಲ್ಲಿ ಕಡಗೋಲಾಗಿ ಉಪಯೋಗಿಸಲು ಹಾಕಿದರು. ವಾಸುಕಿಗೂ ಅಮೃತದಲ್ಲಿ ಪಾಲುಕೊಡಲೊಪ್ಪಿ ಅವನನ್ನು ಕರತಂದು, ಮಂದರಪರ್ವತಕ್ಕೆ ಸುತ್ತಿದರು. ಅಷ್ಟರಲ್ಲಿ ಮಂದರಪರ್ವತವು ನೀರಿನಲ್ಲಿ ಮುಳುಗಿ ಹೋಗುತಿದ್ದುದನ್ನು ನೋಡಿ ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಲಾತನು ಕೂರ್ಮಾವತಾರವನ್ನೆತ್ತಿ ಅದರಡಿಗೆ ಬೆಂಗೊಟ್ಟು, ಮೇಲೆತ್ತಿ ಪುನಃ ಅದು ಮುಳುಗದಂತೆ ಅದರಡಿಯಲ್ಲಿಯೇ ನೆಲಸಿದನು. ಉಪಾಯದಿಂದ ದಾನವರು ವಾಸುಕಿಯ ತಲೆಯನ್ನು ಹಿಡಿಯುವಂತೆ ಮಾಡಿ ದೇವತೆಗಳೆಲ್ಲಾ ಬಾಲವನ್ನು ಹಿಡಿದು ಕ್ಷೀರಸಾಗರವನ್ನು ಮಥನ ಮಾಡಲಾರಂಭಿಸಿದರು.

ಇಕ್ಕಡೆಯವರೂ ಶಕ್ತಿ ಮೀರಿ ಬಹುಕಾಲದ ವರೆಗೆ ಕ್ಷೀರಸಾಗರವನ್ನು ಮಥಿಸಿದರೂ ಅಮೃತವೇ ಹುಟ್ಟಲಿಲ್ಲ. ಆದರೂ ತಮ್ಮ ಪ್ರಯತ್ನವನ್ನು ಬಿಡದೆ ಕಡೆಯಲಾರಂಭಿಸಿವರು. ದೈತ್ಯರ ಬಲ ಕುಗ್ಗಿತು. ದೇವತೆಗಳ ಹೆಮ್ಮೆ ಬಗ್ಗಿತು. ಅದನ್ನು ಭಗವಂತನಾದ ವಿಷ್ಣುವು ನೋಡಿ, ಅಜಿತನೆಂಬ ನಾಮದಿಂದ ಪುರುಷಾಕಾರ ಜನ್ಮವನ್ನೆತ್ತಿ, ದೇವತೆಗಳೊಡಗೂಡಿ ಸಾಗರವನ್ನು ಕಡೆಯಲಾರಂಭಿಸಿದನು. ಮಥನ ವೇಗದಿಂದಾಗ ಜಲಚರಗಳು ತತ್ತಳಿಸಲಾರಂಭಿಸಿದುವು, ಕ್ಷೀರವು ಬುದಬುದನೆ ನೊರೆಯನ್ನು ಕಾರಿತು. ಆಗ ಹಾಲಾಹಲವೆಂಬ ವಿಷವು ಉದ್ಭವವಾಯಿತು. ಆ ವಿಷದ ಬೇಗೆಯಿಂದ ಮೂಲೋಕಗಳು ಬೆಂದು ಕಂಗಾಲಾದುವು. ದೇವತೆಗಳಿಗೆಲ್ಲಾ ಶ್ವಾಸ ಕಟ್ಟಿದಂತಾಯಿತು. ದೈತ್ಯರು ಮೂರ್ಛಾಭರಿತರಾದರು. ಅದರ ಜ್ವಾಲೆಯ ತಾಪವನ್ನು ಸಹಿಸಲಾರದೆ ದೇವತೆಗಳು ಈಶ್ವರನ ಮರೆಹೊಕ್ಕರು. ಪರೋಪಕಾರಕ್ಕಾಗಿ ಅದನ್ನೆತ್ತಿ ಕುಡಿದುಬಿಟ್ಟನು. ಆಗ ಪಕ್ಕದಲ್ಲಿಯೇ ಕುಳಿತಿದ್ದ ಪಾರ್ವತೀದೇವಿಯು ವಿಷವು

ಹೊಟ್ಟೆಗೆ ಹೋದರೆ ಅನರ್ಥವಾಗುವುದೆಂದೆಣಿಸಿ, ತನ್ನ ಪತಿಯ ಮೆಟ್ರಿಯನ್ನು ಒತ್ತಿ ಹಿಡಿಯಲು ಆ ಹಾಲಾಹಲವು ಅಲ್ಲಿಯೇ ನೆಲಸಿತು; ಅವನ ಕಂಠವು ನೀಲಬಣ್ಣವಾಯಿತು. ಅಂದಿನಿಂದ ಈಶ್ವರನಿಗೆ ನೀಲಕಂಧರನೆಂದು ಹೆಸರಾಯಿತು

ರುದ್ರನು ವಿಷವನ್ನುಂಡ ಕೂಡಲೆ ಸಮಾಧಾನಚಿತ್ತರಾಗಿ ದೇವ ದಾನವರು ಪುನಃ ಎಂದಿನಂತೆ ಸಮುದ್ರಮಥನಮಾಡಿದರು. ಆಗ ಕಾಮಧೇನು, ಕಲ್ಪವೃಕ್ಷ, ಪುರುಷಾಮೃಗ, ಉಚ್ಚೈಃಶ್ರವಸ್ಸು, ಐರಾವತ, ಕೌಸ್ತುಭ ಮಣಿ, ಪಾರಿಜಾತ, ಅಪ್ಸರ ಸ್ತ್ರೀಯರು, ಲಕ್ಷ್ಮೀದೇವಿ, ಚಂದ್ರ, ವಾರುಣಿಯರು ಉದ್ಭವಿಸಿದರು. ಬ್ರಹ್ಮಾದಿಗಳಾದ ಋಷಿಗಳು ಕಾಮಧೇನುವನ್ನು ಸ್ವೀಕರಿಸಿದರು. ಉಚ್ಚೈಶ್ರವಸ್ಸೆಂಬ ಕುದುರೆಯನ್ನು ಬಲಿಯು ತೆಗೆದುಕೊಂಡನು. ಐರಾವತವನ್ನು ಇಂದ್ರನೆತ್ತಿಕೊಂಡನು. ಕೌಸ್ತುಭ ಮಣಿಯನ್ನು ವಿಷ್ಣುವು ತನ್ನೆದೆಗೆ ಅಲಂಕಾರವಾಗಿ ಪರಿಗ್ರಹಿಸಿದನು. ಚಂದ್ರನನ್ನು ವಿಷದ ಜ್ವಾಲೆ ಶಮನಮಾಡಿಕೊಳ್ಳಲು ಈಶ್ವರನು ಶಿರದಲ್ಲಿ ಧರಿಸಿದನು. ಪಾರಿಜಾತ, ಕಲ್ಪತರು, ಪುರುಷಾಮೃಗಗಳನ್ನು ದೇವತೆಗಳು ತೆಗೆದುಕೊಂಡರು. ಅಪ್ಸರ ಸ್ತ್ರೀಯರು ಇಂದ್ರನ ವಶರಾದರು. ಲಕ್ಷ್ಮೀದೇವಿಯು ಭಗವಂತನಾದ ವಿಷ್ಣುವಿಗೆ ಒಲಿದು ಅವನ ವಕ್ಷಃಸ್ಥಲದಲ್ಲಿ ನೆಲಸಿದಳು. ಸುರಾಭಿಮಾನಿ ದೇವತೆಯಾದ ವಾರುಣಿಯನ್ನು ದಾನವರು ಸ್ವೀಕರಿಸಿದರು.

ಅನಂತರ ದೇವ ದಾನವರು ಅತ್ಯುತ್ಸಾಹದಿಂದ ಕಡೆಯಲುಪಕ್ರಮಿಸಿದರು. ಆಗ ದಿವ್ಯ ತೇಜೋಭರಿತನಾಗಿ, ಸರ್ವಾಲಂಕಾರ ಭೂಷಿತನಾಗಿ, ನವ ಯೌವನ ಕಾಂತಿಯಿಂದ ಹೊಳೆಯುತ್ತ, ಔಷಧಿಯರಸನಾದ ಧನ್ವಂತರಿಯು ಅಮೃತ ಕಲಶವನ್ನು ಕರಗಳಲ್ಲಿ ಹಿಡಿದು ಸಮುದ್ರಮಧ್ಯದಲ್ಲಿ ಮೈದೋರಿದನು. ಅವನನ್ನು ಕಂಡಕೂಡಲೆ, ದೇವ ದಾನವರು ಜಯಘೋಷವನ್ನು ಮಾಡಿದರು. ವಾಸುಕಿಯನ್ನು ಬಿಟ್ಟರು. ಆನಂದಾತಿಶಯದಿಂದ ಕುಣಿದಾಡಿದರು. ದೈತ್ಯರಲ್ಲಿ ಕೆಲವರು ಓಡಿಹೋಗಿ ಧನ್ವಂತರಿಯ ಕೈಯಿಂದ ಅಮೃತಕಲಶವನ್ನು ಕಿತ್ತುಕೊಂಡು ಕಾಲಿಗೆ ಬುದ್ಧಿ ಹೇಳಿದರು ಮಿಕ್ಕವರು ಅವರನ್ನು ಹಿಂಬಾಲಿಸಿದರು. ಆದರೆ ದೇವತೆಗಳು

ಮಾತ್ರ ಚಿತ್ರದ ಗೊಂಬೆಗಳಂತೆ ಸುಮ್ಮನಾಗಿಬಿಟ್ಟರು. ತಮ್ಮ ಬೆವರು ಸುರಿಸಿ ಸಂಪಾದಿಸಿದ ವಸ್ತುವಿನಲ್ಲಿ ಪಾಲು ಸಿಗದಿದ್ದುದನ್ನು ನೋಡಿ, ವ್ಯಸನ ಭರಿತರಾದರು. ಅವರ ಮುಖವು ಚಪ್ಪಗಾಯಿತು. ತಮ್ಮ ಕಷ್ಟವು ಪ್ರಯೋಜನಕ್ಕೆ ಬಾರದ್ದನ್ನು ನೋಡಿ ಮರುಗಿ, ಶ್ರೀ ಹರಿಗೆ ಮೊರೆಯಿಟ್ಟರು. ಅವನು ಒಡನೆ ವೈದೋರಿ ಅವರನ್ನೆಲ್ಲಾ ಸಂತೈಸಿ ಅಮೃತಕಲಶವನ್ನು ತಂದುಕೊಡುವೆನೆಂದು ವಾಗ್ದಾನಮಾಡಿ ಅಂತರ್ಧಾನನಾದನು.

ಇತ್ತ ಸ್ವಾರ್ಥಪರರಾದ ದೈತ್ಯರಲ್ಲಿ ಅನರ್ಥಕ್ಕೆಡೆಯಾಯಿತು. ಪರಸ್ಪರ ದ್ವೇಷಾಸೂಯೆಗಳು ಬೆಳೆದು ಒಬ್ಬರ ಕೈಯಿಂದ ಇನ್ನೊಬ್ಬರಂತೆ ಅಮೃತ ಗಡಿಗೆಯನ್ನು ಕಿತ್ತುಕೊಂಡು ಹೊಡೆದಾಡಲಾರಂಭಿಸಿದರು. ಶಕ್ತಿ ಪ್ರಯೋಗದಿಂದ ಕೆಲವರು, ಯುಕ್ತಿ ಪ್ರಯೋಗದಿಂದ ಕೆಲವರು ಅಮರ್ದ ಗಡಿಗೆಯನ್ನು ಕಸುಕೊಳ್ಳುತ್ತ ದೊಡ್ಡ ಕೋಲಾಹಲವನ್ನೆಬ್ಬಿಸಿದರು. ಕೈಲಾಗದ ದೇವತೆಗಳು ಉಪಾಯಕಾಣದೆ, ಪರಮಾತ್ಮನನ್ನೇ ಸ್ಮರಿಸುತ್ತಾ ಮರಗಳಂತೆ ನಿಂತುಬಿಟ್ಟರು.

ಆಗ ಏನೋ ಕಾರಣದಿಂದ ಒಮ್ಮಿಂದೊಮ್ಮೆಗೇ ದೈತ್ಯ ಸಮೂಹದ ಕೋಲಾಹಲವು ತಣ್ಣಗಾಯ್ತು. ಎಲ್ಲರ ದೃಷ್ಟಿಯು ಪೂರ್ವ ದಿಕ್ಕಿಗೆ ತಿರುಗಿತು. ಅದಾರೋ ಓರ್ವ ಬಾಲೆಯು ಅಲ್ಲುದಿಸಿದಂತೆ ತೋರಿತು. ಅದಾವ ರೂಪ! ಅದಾವ ಲಾವಣ್ಯ! ಅದಾವ ಮೋಜು! ಅದಾವ ಅಂದ! ಜಗವನ್ನೇ ಮೋಹ ಬೆರಗುಮಾಡುವ ರೂಪ! ಹೃದಯವನ್ನಾಕರ್ಷಿಸುವ ಲಾವಣ್ಯ! ಮುನಿಗಳನ್ನೇ ಬೆರಗುಮಾಡುವ ಮೋಜು! ಲಕ್ಷ್ಮಿಯನ್ನು ಮೀರಿದ ಸೌಂದರ್ಯ! ಎಲ್ಲರ ಮನಸ್ಸು ಅವಳಲ್ಲೇ ನೆಟ್ಟಿತು! ಎಲ್ಲರ ದೃಷ್ಟಿಯೂ ಅವಳಲ್ಲೇ ಸೇರಿತು; ಎಲ್ಲರ ಹೃದಯವೂ ಅವಳಲ್ಲೇ ಲೀನವಾಯಿತು. ವಯಸ್ಸೋ ಅಲ್ಪ; ಆದರೂ ವಯಸ್ಸು ಮೀರಿದ ದೇಹ; ದೇಹವೋ ಒಳ್ಳೆ; ಆದರೂ ಪಂಕ್ತಿಮೀರಿದ ವಿಲಾಸ: ಅಪ್ಸರ ಸ್ತ್ರೀಯರನ್ನೂ ಧಿಕ್ಕರಿಸುವ ಮೋಹನ ಹಾಸ. ತನ್ನ ಅಂಗಚೇಷ್ಟೆಗಳಿಂದ ದೇವ ದಾನವ ಸಮೂಹವನ್ನೆಲ್ಲಾ ಮರುಳುಮಾಡಿದಳು.

ಯುವತೀಮಣಿಯು ಮಂದಗಮನೆಯಾಗಿ ತನ್ನ ಸೆರಗನ್ನು ಬೀಸುತ್ತ ಕುಂಭವಂತೆ ಉರುಟಾಗಿದ್ದ ಕುಚಗಳನ್ನು ಮುಲುಕಿಸುತ್ತ, ದೈತ್ಯರ

ಮುಂದೆ ನಿಂತಳು. ಅವಳ ಸಂದರ್ಶನಮಾತ್ರದಿಂದೇ ದೈತ್ಯರು ಅಂತಃ ಕಲಹವನ್ನು ಮರೆತರು; ಅಮೃತಕಲಶ ವಿಚಾರ ತೊರೆದರು; ಕಾಮ ವಿಕಾರಗೊಂಡು ಅವಳ ಸುತ್ತುಗಟ್ಟಿದರು. ಕೆಲವರು ಅವಳನ್ನು ಹೊಗಳಿದರು; ಕೆಲವರು ಅವಳನ್ನು ಸ್ಪರ್ಶಿಸಿದರು; ಇನ್ನು ಕೆಲವರು ಅವಳ ಅಂಗ ವಿಲಾಸಗಳನ್ನು ನೋಡಿ ಮೈಮರೆತರು; ಮತ್ತೆ ಕೆಲವರು ಸಮೀಪ ಬಂದು ಅವಳ ಪೂರ್ವೋತ್ತರಗಳನ್ನು ವಿಚಾರಿಸಿದರು. ಬಾಲೆಯು ತನ್ನ ಅಂದ ಚೆಂದ ಸೌಶೀಲ್ಯಾದಿ ಗುಣಗಳಿಂದ ದೈತ್ಯರ ಮನಸ್ಸನ್ನೊಲಿಸಿಕೊಂಡಳು. ಆ ಸೌಂದರ್ಯ ಮೂರ್ತಿ, ಆ ಮೋಹನ ರೂಪ ಅವರಿಗೆ ತಮ್ಮ ಪಾಲಿನ ದೇವತೆಯಂತೆ ತೋರಿದಳು. ತಮ್ಮ ಕಥೆಯನ್ನೆಲ್ಲಾ ಅವಳಿಗೆ ಮರೆ ಮಾಚದೆ ತಿಳಿಸಿ, ಮಧ್ಯಸ್ಥಿಕೆಯನ್ನು ಮಾಡಿ ತಮ್ಮ ಅಂತಃಕಲಹವನ್ನು ತೀರಿಸಿಕೊಡಬೇಕೆಂದು ದೈತ್ಯರು ಕೇಳಿಕೊಂಡರು. ದೇವತೆಗಳಿಗಾಗ ನವ ಚೈತನ್ಯದ ಕಳೆಯು ತೋಚಿತು.

ಆ ಮೋಹನರೂಪಿಯಾದ ಬಾಲೆಯು ಅವರ ವೃತ್ತಾಂತವನ್ನೆಲ್ಲಾ ಕೇಳಿ ನಸುನಕ್ಕು, ಪ್ರೇಮವನ್ನು ತೋರುವಂತೆ ಸಮಯೋಚಿತವಾದ ಕುಟಿಲೋಕ್ತಿಗಳನ್ನಾಡಿ ಅವರ ಮನಸ್ಸನ್ನು ಸಂಪೂರ್ಣವಾಗಿ ಒಲಿಸಿಕೊಂಡು, ಮಂದಹಾಸದಿಂದ, ಮೆಲ್ನುಡಿಯಿಂದ, "ಸ್ತ್ರೀಯರು ಸ್ವಾಭಾವಿಕವಾಗಿ ಚಂಚಲೆಯರು. ಅವರ ಸ್ನೇಹವನ್ನು ಬೆಳೆಸ ಪ್ರಯತ್ನಿಸುವುದು ಯುಕ್ತವಲ್ಲ"ವೆಂದು ಲಜ್ಜೆಯಿಂದ ಶಿರಬಾಗಿಸಿದಂತೆ ನಟಿಸುತ್ತಾ, ಅಂಗುಷ್ಠದಿಂದ ನೆಲವನ್ನು ಕೊರೆಯುತ್ತಾ ನುಡಿದಳು. ಆದರೆ ಸಂಪೂರ್ಣವಾಗಿ ಕಾಮವಿಕಾರಗೊಂಡ ದೈತ್ಯರು ತಮ್ಮ ಕೈಯಲ್ಲಿದ್ದ ಅಮೃತ ಗಡಿಗೆಯನ್ನು ಒತ್ತಾಯದಿಂದ ಅವಳ ಕೈಯಲ್ಲಿಟ್ಟು, ಅವಳಲ್ಲಿ ತಮ್ಮ ಭರವಸೆಯನ್ನು ತೋರಿ ನ್ಯಾಯ ರೀತಿಯಿಂದ ಅಮೃತವನ್ನು ಎಲ್ಲರಿಗೂ ಹಂಚಿಕೊಡುವಂತೆ ಬೇಡಿಕೊಂಡರು. ಆಗ ಬಾಲೆಯು—'ಎಲೈ ದಾನವರೇ ಅಮೃತವನ್ನು ಹಂಚಿಕೊಡಲು ನನ್ನಿಂದಭ್ಯಂತರವಿಲ್ಲ. ಆದರೆ ಹಂಚುವಾಗ ನ್ಯಾಯಾನ್ಯಾಯಗಳು ಪಕ್ಷಪಾತಾದಿಗಳು ಕಂಡುಬಂದರೂ ನೀವು ತಟಸ್ಥರಾಗಿರಬೇಕು. 'ಹಾಗಾದರೆ ಮಾತ್ರ ನಾನೀ ಕೆಲಸಕ್ಕೆ ಕೈಹಾಕಲೊಡಂಬಡುವೆನು" ಎಂದಳು. ದೈತ್ಯರು ಅವಳ ಮಾತಿನ ಗೂಢಾರ್ಥವನ್ನರಿಯದೆ ಸಮ್ಮತವನ್ನಿತ್ತರು.

ಅನಂತರ ಸುರಾಸುರರು ಅವಳ ಮಾತಿನಂತೆ ಆ ಇರುಳು ಉಪವಾಸ ವಿದ್ದು ಮರುದಿನ ಪ್ರಾತಃಕಾಲ ನಿತ್ಯಕರ್ಮಾದಿಗಳನ್ನು ಮುಗಿಸಿ, ಅಮೃತ ಹಂಚಲು ಗೊತ್ತುಮಾಡಿದ್ದ ಸ್ಥಳಕ್ಕೆ ಬಂದು ಆ ಸ್ಥಳವನ್ನು ಶುದ್ಧೀಕರಿಸಿ ದರ್ಭಾಸನರಾಗಿ ಮಂಡಿಸಿದರು ಆಗ ಆ ಬಾಲೆಯು ಅಮೃತಕಲಶವನ್ನು ಹಿಡಿದು ಸಭೆಯನ್ನು ಪ್ರವೇಶಮಾಡಿದಳು. ಅವಳ ಮಾತಿನಂತೆ ದೇವ ದಾನವರು ಬೇರೆ ಬೇರೆ ಒತ್ತಟ್ಟಿಗೆ ಕುಳಿತುಕೊಂಡರು. ಅವಳು ತನ್ನ ಅಪ್ರಮೇಯವಾದ ಸೌಂದರ್ಯದಿಂದ ದೈತರನ್ನು ಬೆರಗುಗೊಳಿಸಿ, ಸುರೆ ಯನ್ನು ಅವರಿಗಿಕ್ಕಿ ಅಮೃತವನ್ನು ದೇವತೆಗಳಿಗೆ ಹಂಚಿದಳು. ಆದರೆ ರಾಹು ಕೇತು ಎಂಬೀರ್ವರು ರಾಕ್ಷಸರು ದೇವತೆಗಳಂತೆ ಅವರ ಪಂಕ್ತಿ ಯಲ್ಲಿ ಕುಳಿತಿದ್ದರು. ಅಮೃತವನ್ನು ಬಡಿಸಿದೊಡನೆಯೇ ಅವರದನ್ನೆತ್ತಿ ಬಾಯಲ್ಲಿಟ್ಟರು. ಇದನ್ನು ನೋಡುತಿದ್ದ ಸೂರ್ಯ ಚಂದ್ರರು ಕಣ್ಸನ್ನೆ ಮಾಡಿ ವಿಷ್ಣುವಿಗೆ ತಿಳಿಸಲಾ ಅವನು ಚಕ್ರಾಯುಧವನ್ನು ಕಳುಹಿಸಿದನು. ಅದು ಆ ರಾಕ್ಷಸರ ಶಿರವನ್ನರಿಯಿತು. ಆದರೆ ಅಮೃತವು ಅವರ ಬಾಯ ಲ್ಲಿದ್ದುದರಿಂದ ಮುಂಡ ಭಾಗವು ಮಾತ್ರ ಕ್ಷಯವಾಗಿ, ರುಂಡ ಭಾಗವು ಜೀವ ಕಳೆಯಿಂದುಳಿಯಿತು. ಬ್ರಹ್ಮ ಅವನ್ನು ನಭೋಮಂಡಲದಲ್ಲಿ ನವಗ್ರಹಗಳ ಮಧ್ಯೆ ಸೇರಿಸಿದನು

ದೇವತೆಗಳು ಅಮೃತ ಪಾನದಿಂದ ಚಿರಂಜೀವಿಗಳಾದರು. ರಾಕ್ಷಸರು ಸುರೆಯನ್ನು ಕುಡಿದು ಮದೋನ್ಮತ್ತರಾದರು. ತಂತಮ್ಮೊಳಗೆ ಕಲಹ ತೆಗೆದು ಬಡಿದಾಡಿಕೊಂಡಿದುದಲ್ಲದೆ, ಸಮಯವನ್ನೇ ಕಾಯುತಿದ್ದ ದೇವತೆ ಗಳನ್ನೆದುರಿಸಲು ಅವರು ಸುಲಭವಾಗಿ ದೈತ್ಯರನ್ನೆಲ್ಲಾ ನಾಶಮಾಡಿದರು. ಕಳೆದುಹೋಗಿದ್ದ ತಮ್ಮ ಯಶಸ್ಸನ್ನು ಸಂಪಾದಿಸಿ, ದೇವಲೋಕವನ್ನು ವಶಮಾಡಿಕೊಂಡರು.

ಬಾಲೆಯಾದರೋ ಆ ಸ್ಥಳವನ್ನು ಬಿಟ್ಟು ನಡೆದಳು. ಅವಳೇ ಮೋಹಿನಿ! ಜಗನ್ಮೋಹಿನಿ! ವಿಷ್ಣು ಲಕ್ಷ್ಮೀ ಅಂಶಸಂಭೂತೆಯಾದ ಜಗನ್ಮೋಹಿನಿ!!

## ಲೋಪಾಮುದ್ರೆ

ಜಗನ್ಮೋಹಿನಿಯು ಬಿಡುಗಣ್ಣರಿಗಮರ್ದವನುಣಿಸಿ ತಾನು ಸಗ್ಗ ಲೋಕಾಭಿಮುಖಳಾದಳು. ದೇವಾಂಶಸಂಭೂತೆಯಾದಾ ತರುಣಿಯು

ಬರೇ ಹನ್ನೆರಡು ವರ್ಷ ಪ್ರಾಯದವಳಾಗಿದ್ದರೂ ಅವಳ ಸೌಂದರ್ಯವು ಅನುಪಮೇಯವಾಗಿದ್ದಿತು. ಆದರೂ ಸುಶೀಲೆಯಾದ್ದರಿಂದ ಯಾರ ಕೈಗೂ ಸಿಕ್ಕದೆ ಪ್ರಕೃತಿಯ ಸೌಂದರ್ಯವನ್ನು ನೋಡುತ್ತಾ ಆನಂದಪಡುತ್ತಾ ವೈಕುಂಠದ ಕಡೆ ನಡೆದಳು. ಆಗ ಹಾದಿಯಲ್ಲಿ ಮಿತ್ತುವನ್ನು ಸದೆದ ಲೋಕೇಶನಾದ ರುದ್ರನು ತನ್ನ ಸಹಧರ್ಮಿಣಿಯೊಡನೆ ಭಕುತಾದಿಗಳನ್ನು ಕಾಪಾಡುತ್ತಾ ಪ್ರಮಥಗಣದೊಡನೆ ವಿಹರಿಸುತ್ತಾ ಇರುವುದನ್ನು ದೂರದಿಂದ ಕಂಡಳು. ಆ ಕೈಲಾಸವಾಸಿಯನ್ನು ನೋಡಿ ಆತನಿಗೆ ನಮಸ್ಕರಿಸಿ ಮುಂದುವರಿಯಬೇಕೆಂದಿಚ್ಛಿಸಿ ಕೈಲಾಸದ ಕಡೆ ನಡೆದಳು.

ಪಾರ್ವತಿಯೊಡನಿದ್ದ ರುದ್ರನು ಮೋಹಿನಿಯನ್ನು ಕಂಡು ಬೆಚ್ಚಿಬಿದ್ದನು. ಅವಳ ದೇಹಪಟುತ್ವ, ಮಂದಗತಿ, ಹಂಸದಂಪತಿಯಂತೆ ಒಂದನ್ನೊಂದು ಓಸರಿಸಿ ಓಲಾಡುತಿದ್ದ ಆ ಕುಚದ್ವಯ, ಸಿಂಹದಂತೆ ಇಕ್ಕಟ್ಟಾದ ಜಘನ. ಬಳ್ಳಿಯಂತೆ ಬಳಕುತಿದ್ದ ದೇಹ, ಪೂರ್ಣಚಂದ್ರ ಸೊಬಗನ್ನು ಮೀರಿದ್ದ ಮೊಗದಂದ ಇತ್ಯಾದಿಗಳನ್ನು ನೋಡಿ ಪಾರ್ವತೀಲೋಲನಾದ ಈಶ್ವರನು ಮನಸೋತನು ತನ್ನ ಅರ್ಧಾಂಗಿಯನ್ನು ತೊಡೆಯಿಂದ ಕೆಳಗಿಳಿಸಿ, ಎದ್ದುನಿಂತು ಆ ಬಾಲೆಯನ್ನು ನೋಡುತ್ತಾ, ಗಿರಿಯ ಮೆಟ್ಟಲುಗಳನ್ನಿಳಿದನು. ಭುವನಮಾತೆಯಾದ ಹಿಮವಂತೆಯು ಪಕ್ಕದಲ್ಲಿದ್ದರೂ ಜಟಾಧಾರಿಗೊಮ್ಮೊಂದೊಮ್ಮೆಗೆ ಕಾಮೋದ್ರೇಕವಾಗಿ ಅವನ ಮನಸ್ಸು ಚಂಚಲವಾಯಿತು. ಅವನು ಪಾರ್ವತಿಯನ್ನು ಉಪೇಕ್ಷಿಸಿದನು; ಪ್ರಮಥಗಣವನ್ನು ಮರೆತನು; ಜಗನ್ಮೋಹಿನಿಯನ್ನು ಹಿಂಬಾಲಿಸಿದನು. ಜಗದಂಬೆಯು ತನ್ನ ಪತಿಯ ಕಾಮವಿಕಾರವನ್ನು ತಿಳಿದು, ಹುಸಿನಗುತ್ತ ಪ್ರಮಥರಿಗೆ ಕಣ್ಸನ್ನೆಮಾಡಿ ಅಲ್ಲಿಯೇ ನಿಂತಳು. ಯಾರೂ ಮಾತಾಡದಂತಾದರು.

ಮೋಹಿನಿಯು ಕೈಲಾಸವನ್ನು ನೋಡಿ ಬೆರಗಾದಳು; ರುದ್ರನನ್ನು ಕಂಡು ಅವನಿಗೆ ಪೂಜ್ಯಭಾವವನ್ನು ತೋರಿದಳು. ಅವಳ ನಡೆಯು ಇನ್ನಷ್ಟು ಮಂದವಾಯಿತು. ಅವಳ ಮುಖವು ವಿಕಾಸವಾಗಿ ಮನೋಹರವಾಯಿತು. ಆದರೆ ಸ್ವಾಭಾವಿಕವಾದ ಅವಳ ಕುಡಿನೋಟದ ಕಾಂತಿಯು ವಿದ್ಯುಲ್ಲತೆಯಂತೆ ಈಶ್ವರನ ಹೃದಯವನ್ನು ಸೀಳಿತು. ಮೋಹಿನಿಯೂ

ದರೋ ಪೂಜ್ಯಭಾವದಿಂದಲೇ ರುದ್ರನನ್ನು ಕಂಡು, ಅವನನ್ನು ಸ್ತುತಿಸಿ, ದೂರದಿಂದಲೇ ನಮಸ್ಕರಿಸಿ ಮುಂದೆ ಸಾಗಿದಳು. ಈಶ್ವರನು ಉಪಾಯ ಗಾಣದೆ ಅವಳನ್ನು ಹಿಂಬಾಲಿಸಿದನು. ಆದರವಳು ಭೀತಿಗೊಂಡು ಬೆದರಿದ ಹುಲ್ಲೆಯಂತೆ ಓಡಲಾರಂಭಿಸಿದಳು. ಆಗ ಅವಳ ಸೀರೆಯ ಸೆರಗು ಸಡಲಿ ಜಾರಿತು; ಬಟ್ಟಾಕಾರದ ನಿತಂಬಗಳು ಶುಭ್ರವಾದ ದಂತದ ಬಣ್ಣದಿಂದೊಪ್ಪುತ್ತ ಚಕ್ರವಾಕ ದಂಪತಿಗಳಂತೆ ಕ್ರೀಡಿಸಿದುವು. ಮಹೇಶ್ವರನದ ನೋಡಿ ಸಂಪೂರ್ಣವಾಗಿ ಕಾಮುಹತಿಗೊಳಗಾದನು. ಕಾಮುನನ್ನೇ ದಹಿಸಿ ಧ್ವಂಸಮಾಡಿದ್ದ ರುದ್ರನಿಂದು ಹೇಯುವಾಗಿ ವರ್ತಿಸ ಲಾರಂಭಿಸಿದನು.

ಮೋಹಿನಿಯು ಈಶ್ವರನ ನಡತೆಯನ್ನು ನೋಡಿ ವಿಷಾದಪಟ್ಟು ಹಿಂದಿರುಗಿ ನೋಡುತ್ತಾ ನೋಡುತ್ತಾ ಓಡಿದಳು. ಓಡಿ ಓಡಿ ಅವಳ ಕಾಲುಗಳು ಸೋತವು. ಬೆವರು ಕಿತ್ತು ತೆಳ್ಳಗಾದ ಸೀರೆಯು ದೇಹಕ್ಕಂಟಿ ಕೊಂಡಿತು. ಆಗ ಅವಳ ಅಂಗಗಳೆಲ್ಲವೂ ಸ್ವಾಭಾವಿಕವಾಗಿದ್ದಂತೆಯೇ ತೋರಿದುವು. ಅಷ್ಟರಲ್ಲಿ ದೇವತೆಗಳ ಪುಷ್ಪವನವು ಕಾಣಿಸಿತು. ಮೋಹಿನಿಯು ಬಳ್ಳಿಗಿಡಗಳ ಮಧ್ಯೆನುಗ್ಗಿ ಈಶ್ವರನಿಗೆ ಕಾಣದಾದಳು. ಈಶ್ವರನು ಅವಳನ್ನರಸುತ್ತಾ ಮುಂದೆ ನಡೆದನು. ಮೋಹಿನಿಯದನ್ನು ನೋಡಿ, ಪುಷ್ಪವಾಟಿಕೆಯ ಒಂದು ಆಸನದಲ್ಲಿ ಕುಳಿತು, ಮೈಯನ್ನು ತಂಗಾಳಿಗೊಡ್ಡಿ, ದಣುವಾರಿಸಿಕೊಂಡಳು.

ಅಷ್ಟರಲ್ಲಿ ದೇವರ್ಷಿಯಾದ ನಾರದನು ಆ ದಾರಿಗಾಗಿ ಬರುತಿದ್ದನು. ಪುಷ್ಪಗಳನ್ನು ಹೆಕ್ಕಲು ಹೂದೋಟವನ್ನು ಹೊಕ್ಕು ಆಗ ಅರ್ಧನಿವಾಣ ದಿಂದೊಪ್ಪುತಿದ್ದ ಕನ್ನಿಕೆಯನ್ನು ಕಂಡು, ಅವಳ ಅಂಗಮಾರ್ದವಕ್ಕೆ ಮರುಳಾಗಿ ಲತಾಮಂಟಪವನ್ನು ಸೇರಿ ಮೋಹಿನಿಯ ಮುಂದೆ ನಿಂತನು. ಆ ನಾರೀಮಣಿಗೆ ದಿಗ್ಭ್ರಮೆಯಾಯಿತು. ಸಿಂಹದ ಬಾಯಿಂದ ತಪ್ಪಿಸಿ ಕೊಂಡು ಬಂದು ಮೊಸಳೆಯ ಹಲ್ಲುಗಳಿಗೆ ಸಿಕ್ಕಿದಂತಾಯಿತು.

ನಾರದನ ಮುಖವನ್ನೊಮ್ಮೆ ಓರೆಗಣ್ಣಿನಿಂದ ನೋಡಿ, ಜಾರಿ ಹೋದ ಸೆರಗನ್ನು ಸೆಳದು ಮೋಹಿನಿಯು ಎದ್ದು ನಿಂತಳು. ಆದರೆ ಕಾಮಾತುರನಾಗಿ ಸಮೀಪಕ್ಕೆ ಬರುತ್ತಿದ್ದ ರಿಸಿಯ ಮನೋವ್ಯಾಪಾರ

ಗಳನ್ನು ತಿಳಿಯದೆ, ಬಾಲೆಯು ಒಡನೆ ಎದ್ದು ನಮಸ್ಕರಿಸಿ, "ಮುನಿ ವರ್ಯರೇ, ತಮ್ಮ ಪೂರ್ವೋತ್ತರಗಳನ್ನು ದಯವಿಟ್ಟು ಅರುಹಬೇಕು" ಎಂದು ಕೇಳಿಕೊಂಡಳು. ದೇವಮುನಿಯೂ ಮೃದುವಾಣಿಯನ್ನು ಕೇಳಿ ಮಂದಸ್ಮಿತನಾಗಿ, "ರಮಣಿಯೇ! ನಾನು ದೇವರಿಸಿಯು. ಶ್ರೀವಿಷ್ಣುವಿನ ಭಕುತಮಣಿಯೆಂದೆಣಿಸಿದ ನಾರದನೇ ನಾನು. ನಿನ್ನ ರೂಪುರೇಖಾದಿ ಅಂಗಸೌಂದರ್ಯಕ್ಕೆ ನಾನು ಮನಸೋತಿರುವೆನು. ಜಿತೇಂದ್ರಿಯನಾದರೂ ನಿನ್ನ ರೂಪವು ನನ್ನನ್ನು ಮರಳುಮಾಡಿರುವುದು. ಸುಂದರಿಯೇ ನಿನ್ನ ಅಂಗಸಂಗಾದಿ ಚೇಷ್ಟೆಗಳಿಂದ ನನ್ನನ್ನು ಸಂತೋಷಪಡಿಸು. ನನ್ನನ್ನು ವರಿಸಿ ನನ್ನ ಸಂಗಡಲೇ ಹೊರಡು" ಎಂದು ಬೇಡಿಕೊಂಡನು.

ಮೋಹಿನಿಯು ಮುನಿಯ ಮಾತುಗಳನ್ನು ಕೇಳಿ ನಸುನಗುತ್ತಾ, ಉಪಾಯಾಂತರದಿಂದ ಅವನ ಕೈಯಿಂದ ತಪ್ಪಿಸಿಕೊಳ್ಳಲೆಣಿಸಿ, ಎಲೈ ದೇವರಿಸಿಯೇ ನಿನ್ನ ಸಂದರ್ಶನದಿಂದ ನಾನು ಧನ್ಯಳಾದೆನು. ನಾನು ಏನೂ ಅರಿಯದ ಬಾಲಿಕೆಯು. ಈಶ್ವರನೂ ಏನೋ ಎಣಿಕೆಯಿಂದ ಅಬಲೆಯಾದ ನನ್ನನ್ನು ಹಿಂಬಾಲಿಸಿ ಬರುತ್ತಿರುವಂತೆ ತೋರುವುದು. ಆ ದೇವಾಧೀಶನಾದ ರುದ್ರನ ಕೈಯಿಂದ ತಪ್ಪಿಸಿಕೊಳ್ಳಲು ಅಬಲೆಯಾದ ನನಗೆ ಅಸಾಧ್ಯವು. ಅವನು ಹಿಂಬಾಲಿಸಿದುದರಿಂದ ನಾನು ಬೆದರಿ ಬೆಚ್ಚಿ ಹೋಗಿರುವೆನು ದೇವ ಮುನಿಯಾದ ನಿನಗೆ ಅವನನ್ನು ಸಮಾಧಾನ ಪಡಿಸಲು ಸಾಧ್ಯವಿರಬಹುದು. ಆದ್ದರಿಂದ ಅವನ ಕೈಯಿಂದೊಮ್ಮೆ ಪಾರಾಗುವಂತೆ ಮಾಡಿದರೆ ನಿನ್ನ ಸಂಗಡವೇ ಬರುವೆನು" ಎಂದು ಹೇಳಿದಳು. ನಾರದಮುನಿಯು ಅವಳ ಮಾತುಗಳನ್ನು ಕೇಳಿ ಆನಂದಾತಿಶಯದಿಂದ ನಲಿದು– 'ನೀನೇ ಒಂದು ಉಪಾಯವನ್ನು ಹೂಡು' ಎಂದನು. ಆಗಲಾ ಬಾಲೆಯು— 'ಇದೋ ನಾನೀ ಉತ್ತರೀಯವನ್ನು ಇಲ್ಲಿಯೇ ಬಿಟ್ಟು ಹೋಗುವೆನು. ಇದನ್ನು ಕಂಡು ಅವನಿಲ್ಲಿಗೆ ಬಾರದಿರಲಾರನು. ಆಗ ನೀನು ತಕ್ಕ ಸಮಾಧಾನೋಕ್ತಿಗಳಿಂದ ಅವನನ್ನು ತೃಪ್ತಿಪಡಿಸಿ ಕಳುಹಿಸಿಬಿಡು. ನಾನದೋ ಆ ಲತಾಮಂಟಪದ ಬಳಿ ಹೂ ಹೆಕ್ಕುತ್ತಿರುವೆನು' ಎಂದು ಹೇಳಿ ತನ್ನ ಉತ್ತರೀಯವನ್ನು ಅಲ್ಲಿಯೇ

ಬಿಟ್ಟು ಪುಷ್ಪ ಲತೆಗಳ ಮಧ್ಯೆ ನುಸುಳಿ, ಇನ್ನೊಂದು ಲತಾಮಂಟಪ ವನ್ನು ಸೇರಿದಳು.

ಇತ್ತ ಈಶ್ವರನು ಮೋಹಿನಿಯನ್ನು ಅರಸುತ್ತಾ ಬರಲು ನಾರದರಿಸಿಯು ಕುಳಿತಿದ್ದ ಶಿಲಾಸನದಲ್ಲಿ ಮೋಹಿನಿಯ ಉತ್ತರೀಯವನ್ನು ಕಂಡು ಅಲ್ಲಿಗೆ ಓಡಿ ಬಂದನು. ಕಾಮಾತುರದಿಂದ ಕೋಪೋದ್ರೇಕವಾಗಿ ರುದ್ರನು ಅತಿ ಭೀಕರ ಮೂರ್ತಿಯನ್ನು ತಾಳಿ ಬರಲು, ನಾರದನು ಅವನ ಸ್ಥಿತಿಯನ್ನು ಕಂಡು, ಮರುಕಗೊಂಡು, ಅವನನ್ನು ಸಂತೈಸಲು ತಕ್ಕ ಹಿತೋಕ್ತಿಗಳನ್ನು ಮನಸ್ಸಿನಲ್ಲಿಯೇ ಆಲೋಚಿಸಹತ್ತಿದನು. ಆಗ ಕಾಮಪರವಶನಾದ ರುದ್ರನು ಬಂದೇ ಬಂದನು. ಕಾಮೋದ್ವೇಗದಿಂದ ಪರಾಪರಗಳನ್ನಾಲೋಚಿಸದೆ ನಾರದನೇ ಮೋಹಿನಿಯೆಂದು ಸಿಕ್ಕಿದೆ, ಸಿಕ್ಕಿದೆ,' ಎಂದು ಕೂಗುತ್ತಾ ದೇವರಿಸಿಯನ್ನು ತನ್ನ ಬಾಹುಗಳಿಂದ ಬಿಗಿಯಾಗಿ ಅಪ್ಪಿಕೊಂಡನು. ನಾರದನಾದರೋ ಈಶ್ವರನ ವರ್ತನೆಯನ್ನು ನೋಡಿ ದಿಗ್ಭ್ರಾಂತನಾಗಿ, ಬಾಯ್ದೆರೆಯದೆ ಮಿಟಮಿಟನೆ ನೋಡಲಾರಂಭಿಸಿದನು. ಈಶ್ವರನಿಗಾದರೋ ಜಡ ದೇಹವನ್ನಪ್ಪಿದರಿಂದೊಮ್ಮಿಂದೊಮ್ಮಿಗೆ ಜ್ಞಾನವು ಹೊಳೆಯಿತು. ಒಡನೆ ತನ್ನ ಅಸಹ್ಯವಾದ ವರ್ತನೆಗೆ ಮನನೊಂದು ರಿಸಿಯ ಕ್ಷಮಾಪಣೆಯನ್ನು ಬೇಡಿ ಕೈಲಾಸಕ್ಕೆ ಹಿಂದಿರುಗಿ ಕಿಲಕಿಲನೆ ನಗುತ್ತಾ ನಿಂತಿದ್ದ ಪಾರ್ವತಿಯನ್ನು ಸೇರಿ, ತನ್ನ ಮುಖವನ್ನು ಅವಳ ಸೆರಗಿನಿಂದ ಮುಚ್ಚಿಕೊಂಡನು. ತನಗಾದ ಪರಾಭವವನ್ನರಿತು, ಕಾಮೇಚ್ಛೆಯನ್ನು ತೊರೆದು ವಿಷ್ಣುವಿನ ನಾಮವನ್ನು ಸ್ಮರಿಸುತ್ತಾ ನಾರದನು ಮುಂದೆ ನಡೆದನು.

ಮೋಹಿನಿಯು ಅತ್ತ ಲತಾಮಂಟಪವನ್ನು ಸೇರಿದ ನಂತರ ಬೆಚ್ಚಿದ ಜಿಂಕೆಯು ಮರಿಯಂತೆ ತಬ್ಬಿಬ್ಬಾಗಿ ಓಡುತ್ತಾ ಹೋಗಿ, ಒಂದು ಗುಹೆಯನ್ನು ಸೇರಿ ಸ್ವಲ್ಪ ವಿಶ್ರಮಿಸಿಕೊಂಡಳು. ಅಲ್ಲಿಯೇ ಬಹಳ ಹೊತ್ತು ಕುಳಿತು ನಾರದನು ವಿಷ್ಣುನಾಮ ಸಂಕೀರ್ತನ ಮಾಡುತ್ತಾ ಮುಂದೆ ಹೋಗುತ್ತಿದ್ದುದನ್ನು ಕೇಳಿ, ದೂರದಿಂದ ಹಿಂಬಾಲಿಸಿದಳು ನಾರದನು ನೆಟ್ಟಗೆ ವೈಕುಂಠದ ಕಡೆ ನಡೆದನು. ಮೋಹಿನಿಯೂ ವೈಕುಂಠವನ್ನು ಸೇರಿದಳು. ಅಲ್ಲಿ ನಾರಾಯಣನು ಶ್ರೀದೇವಿಯೊಡನೆ ಅವಳ ಬರವನ್ನೇ

ಕಾದಿದ್ದನು. ಅವಳನ್ನು ಕಂಡೊಡನೆಯೇ ವಿಷ್ಣುವು— 'ಮಗಳೇ! ದೇವತೆಗಳಿಗೆ ಹಾಲುಣಿಸಿ ಮಹಾ ಶ್ರೇಷ್ಠವಾದ ಕಾರ್ಯವನ್ನು ಎಸಗಿದೆ. ನಿನ್ನ ನಾಮವು ಚಿರಸ್ಥಾಯಿಯಾಗಿ ನಿಲ್ಲುವದು. ಬಾ. ವಿಶ್ರಮಿಸು' ಎಂದೆಂದು ಒಳಗೆ ಕರದೊಯ್ದನು. ಲಕ್ಷ್ಮಿಯು ಅವಳನ್ನಪ್ಪಿ, ತಲೆಯನ್ನಾಘ್ರಾಣಿಸಿ, — "ಮಗಳೇ! ನಮಗೆಲ್ಲಾ ಅತಿಶಯವಾದ ಕೀರ್ತಿಯನ್ನು ತಂದಿರುವೆ. ನೀನು ಸುಖಿಯಾಗಿ ಬಾಳು" ಎಂದು ಹರಸಿದಳು. ಆಮೇಲೆ ವಿಷ್ಣುವು— 'ಪುತ್ರಿಯೇ ನಿನ್ನಿಂದ ಭೂಲೋಕದಲ್ಲಿ ಅತ್ಯಂತ ಪಾವನವಾದ ಕಾರ್ಯಗಳು ಜರುಗಬೇಕಾಗಿವೆ. ಆದ್ದರಿಂದ ನಿನ್ನನ್ನು ಬ್ರಹ್ಮನಿಗೆ ದತ್ತ ಪುತ್ರಿಯಾಗಿ ಕೊಡಲಿಚ್ಛಿಸಿರುವೆನು' ಎಂದನು. ಮೋಹಿನಿಯು ಆ ಮಾತಿಗೆ— 'ಪಿತನೇ! ನಿನ್ನಿಚ್ಛೆಯಂತೆ ನಡಕೊಳ್ಳಲು ಸಿದ್ಧಳಿರುವೆನು' ಎಂದೆನಲು, ಮುರಾರಿಯು ಬ್ರಹ್ಮನನ್ನು ಕರೆಯಿಸಿಕೊಂಡು "ಕಮಲಾಸನನೆ! ಇದೋ ಈಕೆಯು ನಿಜಾಂಶ ಸಂಭೂತೆಯು. ದೈತ್ಯರನ್ನು ಮರುಳುಗೊಳಿಸಿದ ಮೋಹಿನಿಯು. ಹಿಂದೆ ನನ್ನಂಶ ಸಂಭೂತೆಯನ್ನು ಪುತ್ರಿಯಾಗಿ ಕೋರಿರುವೆ. ಆದ್ದರಿಂದ ಈಕೆಯನ್ನು ನೀನು ದತ್ತಪುತ್ರಿಯಾಗಿ ಸ್ವೀಕರಿಸು. ಈಕೆಯಿಂದ ನಿನಗತಿಶಯವಾದ ಶ್ರೇಯಸ್ಸುಂಟಾಗುವುದಲ್ಲದೆ ಈಕೆಯೂ ಭುವನ ಶ್ಲಾಘನೀಯಳಾಗುವಳು. ಇವಳನ್ನು ಸ್ವೀಕರಿಸು" ಎಂದನು.

ಬ್ರಹ್ಮನು ಅತ್ಯಂತಾದರದಿಂದ ಮೋಹಿನಿಯನ್ನು ಸ್ವೀಕರಿಸಿ,ಭಗವಂತನಿಗಭಿವಂದಿಸಿ, ತನ್ನ ಪುರವನ್ನು ಸೇರಿ ವಾಣಿಗವಳನ್ನಿತ್ತನು. ಸರಸತಿಯು ಬಾಲೆಯ ಸೌಂದರ್ಯವನ್ನು ನೋಡಿ ಬೆರಗಾಗಿ, ಅವಳಿಗೆ ಮುದ್ದಿಟ್ಟು ಉಪಚರಿಸಿ ಶುಭದಿನದಲ್ಲಿ ಲೋಪಾಮುದ್ರೆಯೆಂದು ನಾಮಕರಣವನ್ನು ಮಾಡಿಸಿದಳು ಬ್ರಹ್ಮನಿಂದಲೇ ವೇದ ಶಾಸ್ತ್ರಾಭ್ಯಾಸ ಮಾಡಿಸಿದಳು. ಲೋಪಾಮುದ್ರೆಯು ಬ್ರಹ್ಮಲೋಕದಲ್ಲಿ ದಿನೇ ದಿನೇ ಪ್ರವರ್ಧಮಾನಳಾಗುತ್ತಾ ಬಂದಳು.

ಒಂದು ದಿನ ಅಜನು ಲೋಪಾಮುದ್ರೆಯನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು- "ಪುತ್ರಿಯೇ! ನಿನ್ನಿಂದ ನಾನು ಧನ್ಯನಾದೆನು. ಆದರೆ ನಿನ್ನಿಂದ ಭೂಲೋಕದಲ್ಲಿ ಶ್ರೇಯಸ್ಕರ ಕಾರ್ಯವೊಂದು ಜರಗ

ಬೇಕಾಗಿದೆ. ಲಕ್ಷಾನುಲಕ್ಷ ಜೀವಿಗಳ ಉದ್ಧರಣೆಯು ನಿನ್ನಿಂದಾಗ ಬೇಕಾಗಿದೆ" ಎಂದನು. ಆದಕ್ಕೆ ಕುವರಿಯು ನಗುತ್ತಾ "ಪಿತನೇ! ನಾನೂ ಲೋಕೋಪಕಾರಿಯಾಗಿ ಮಹಾಯಶಸ್ಸನ್ನು ಪಡೆಯಬೇಕೆಂದು ನಿರ್ಧರಿಸುವೆನು. ನೀನಿಚ್ಛಿಸಿದಂತೆ ನಾನು ಮಾಡಲು ಸಿದ್ಧಳಿರುವೆನು" ಎಂದಳು. ಬ್ರಹ್ಮನಾ ಮಾತನ್ನು ಕೇಳಿ ಸಂತೋಷಪಟ್ಟು, ಮಗಳೇ! ನಿನ್ನಿಚ್ಛೆಯು ನೆರವೇರಲು ಬಹಳ ಸಮಯವಿರದು. ನೀನು ಭೂಲೋಕಕ್ಕೆ ಹೋಗಿ ಜೀವಿಸಬೇಕಾದ ಸಂದರ್ಭವು ಒದಗುವುದು. ಆದಕ್ಕೆ ನೀನು ಸಿದ್ಧಳಾಗಿರಬೇಕು" ಎಂದನು. ಲೋಪಾಮುದ್ರೆಯೂ ಮಾತಿಗೆ ಸಮ್ಮತಿಸಿ ಎಂದಿನಂತೆ ಶಾಸ್ತ್ರಾಭ್ಯಾಸದಲ್ಲಿ ನಿರತಳಾದಳು.

## ಕಾವೇರಿ

ದಕ್ಷಿಣ ಪಥದ ಪಡುಗರೆ; ಪಡುಗರೆಯಲ್ಲಿ ಸಹ್ಯಾಚಲ; ಸಹ್ಯಾಚಲದಲ್ಲಿ ಗಗನವನ್ನು ಚುಂಬಿಸುವ ಗಿರಿಗಳು; ಆ ಗಿರಿಗಳಲ್ಲಿ ಜಗತ್ಪ್ರಸಿದ್ಧವಾದ ಬ್ರಹ್ಮಗಿರಿ; ಆ ಬ್ರಹ್ಮಗಿರಿಯ ಮೂಡ ಜರಿಯಲ್ಲೊಂದು ನಿಬಿಡವಾದ ಅರಣ್ಯ; ಆ ಅರಣ್ಯದ ಮಧ್ಯದಲ್ಲೊಂದು ಋಷ್ಯಾಶ್ರಮ. ಆ ಆಶ್ರಮದಲ್ಲಿ ಮುನಿದಂಪತಿಗಳು.

ಆ ಮುನಿದಂಪತಿಗಳು ಬ್ರಹ್ಮನನ್ನು ಕುರಿತು ಸಂತಾನಾಪೇಕ್ಷೆಗಾಗಿ ತಪಸ್ಸುಮಾಡುತ್ತಿದ್ದರು. ಅನೇಕ ವರ್ಷಗಳಿಂದ ತಪಸ್ಸುಮಾಡುತಿದ್ದುದರಿಂದ ಅವರ ದೇಹವು ಕೃಶವಾಗಿ ಶುಷ್ಕಕಾಷ್ಠದಂತಿತ್ತು. ಅವರ ಮುಖದೊಗಲು ಜೋಲುಬಿದ್ದಿತ್ತು. ಕಣ್ಣುಗಳು ಹುಬ್ಬುಗಳಡಿಯಲ್ಲಿ ಹೂತು ಹೋಗಿದ್ದುವು. ಅವರ ಕೂದಲು ಹಿಮವಂತನಂತೆ ಬಿಳುಪೇರಿತ್ತು. ಅವರ ದೇಹವನ್ನು ಹುತ್ತವು ಮುಚ್ಚಿತ್ತು. ಉಗ್ರ ತಪಸ್ಸಿನ ಬೇಗೆಯು ಬ್ರಹ್ಮಲೋಕವನ್ನು ತಲಪಿತು. ಈರೇಳು ಲೋಕಗಳು ಬೆಂದು ಬೆಂಡಾಗಿ ಹೋಗಿದ್ದುವು.

ಆಗ ಸೃಷ್ಟಿಕರ್ತನಾದ ಬ್ರಹ್ಮನು ಜನರಳಲನ್ನು ಮರೆಮಾಡಲು ಲೋಪಾಮುದ್ರೆಯೊಡನೆ ಅಲ್ಲಿಗೈತಂದು, ಗಂಭೀರವಾಣಿಯಿಂದ, ಎಲೈ ಮುನಿದಂಪತಿಯರೆ! ನಿಮ್ಮ ತಪಸ್ಸಿಗೆ ಮೆಚ್ಚಿದೆನು. ನಿಮ್ಮ ಮನೋಭೀಷ್ಟ

ವನ್ನು ತಿಳಿಸಿರಿ" ಎಂದು ಹೇಳಿದನು ಬ್ರಹ್ಮವಾಣಿಯನ್ನು ಕೇಳಿದ ಕೂಡಲೆ ಆ ಮುನಿದಂಪತಿಗಳು ಕಣ್ತೆರೆದು ನೋಡಿದರು. ತಮ್ಮನ್ನಾವರಿಸಿದ್ದ ಹುತ್ತವು ಒಡೆದು ಚೂರುಚೂರಾಯಿತು. ಅವರು ಕಮಲಾಸನನನ್ನು ಕಂಡು ಹರ್ಷಾನ್ವಿತರಾಗಿ, ಅವನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಬಹುವಿಧವಾಗಿ ಸ್ತುತಿಸಿ-"ನಮಗೆ ಸಂತಾನ ಭಿಕ್ಷೆಯನ್ನೀಡು" ಎಂದರು.

ಕಮಲೋದ್ಭವನಾಗ ಮುಗುಳು ನಗೆಯಿಂದ-"ಎಲೈ ವಿಪ್ರದಂಪತಿಗಳೇ! ನಿಮ್ಮ ಹಿಂದಿನ ಜನ್ಮದೋಷದಿಂದ ಔರಸಪುತ್ರನನ್ನು ಪಡೆಯುವ ಅದೃಷ್ಟವು ನಿಮಗೀ ಜನ್ಮದಲ್ಲಿ ಲಭಿಸದು. ನೀವೀರ್ವರೂ ಯೌವನವನ್ನು ಕಳೆದು ಮುಪ್ಪಾಗಿರುವಿರಿ. ನಿಮ್ಮ ದೇಹವೂ ಕ್ಷೀಣವಾಗಿರುವುದು.

ಅಲ್ಲದೆ ಸಪ್ತಮ ಧಾತುವಾದ ರೇತಶ್ಶಕ್ತಿಯು ನಿಮ್ಮಲ್ಲಿಲ್ಲ ಯೌವನವನ್ನು ಕಳಕೊಂಡಿರುವ ನಿಮಗೆ ಸಂತತಿಯೆಂತುಂಟಾಗುವುದು? ಆದರೆ ನಿಮ್ಮ ತಪಸ್ಸಿಗೆ ಮೆಚ್ಚಿರುವೆನು. ನಿಮ್ಮ ಕಷ್ಟವು ವ್ಯರ್ಥವಾಗಬಾರದೆಂದೆಣಿಸಿ ಇಲ್ಲಿಗೆ ನಾನು ಬಂದಿರುವೆನು. ಇಗೋ, ಈಕೆಯು ನನ್ನ ದತ್ತಪುತ್ರಿಯು. ಇವಳನ್ನು ನಿಮಗೀಯುವೆನು. ನಿಮಗೆ ಮಗಳಾಗಿ ಈಕೆಯು ನಿಮ್ಮ ವಂಶವನ್ನು ಬೆಳಗಿಸುವಳು. ಔರಸಪುತ್ರನಿಂದುಂಟಾಗುವ ಪುಣ್ಯವು ಈಕೆಯಿಂದ ನಿಮಗೆ ಲಭಿಸುವುದು" ಎಂದನು. ಮುನಿದಂಪತಿಗಳು ಬ್ರಹ್ಮನ ಮಾತನ್ನು ಕೇಳಿ ಸೌಂದರ್ಯ ಸೌಶೀಲ್ಯಾದಿ ಗುಣಗಳಿಂದೊಪ್ಪುತಿದ್ದ ಲೋಪಾಮುದ್ರೆಯನ್ನು ನೋಡಿ ಆನಂದಪರವಶರಾದರು. ಕನ್ಯೆಯೆಂದುಪೇಕ್ಷಿಸಿ ಸುಮ್ಮಗಿರಲಾಗಾ ಬ್ರಹ್ಮನು "ಮುನಿವರ್ಯರೇ! ಕನ್ಯೆಯೆಂದಿವಳನ್ನು ಉಪೇಕ್ಷಿಸಬೇಡಿ. ಈಕೆಯನ್ನು ನೀವು ದತ್ತಪುತ್ರಿಯನ್ನಾಗಿ ಸ್ವೀಕರಿಸಿದರೆ ಪುತ್ರಸಂಪತ್ತಿನಿಂದ ಲಭಿಸಬಹುದಾದ ಪುಣ್ಯವೆಲ್ಲವೂ ನಿಮಗೆ ಈಕೆಯಿಂದುಂಟಾಗುವುದು ನಾರಿಯರೇ ಲೋಕದಲ್ಲಿ ಶ್ರೇಷ್ಠರು ಮಹಾ ಪ್ರಸಿದ್ಧ ಪುರುಷರೂ, ಪುಣ್ಯಾತ್ಮರೂ, ದೇವ ದೇವೋತ್ತಮರೂ, ಋಷಿಗಳೂ ಹೆಂಗುಸರ ಬಸಿರಿನಿಂದಲೇ ಬಂದಿರುವರು ಸಪ್ತಮಾತೃಕೆಯರಿಂದಲೇ ಮೋಕ್ಷವೂ ಕಾರ್ಯಸಿದ್ಧಿಯೂ ಉಂಟಾಗುವುದು. ಕನ್ಯಾಮಹಿಮೆಯನ್ನು ವರ್ಣಿಸಲು ಆದಿಶೇಷನಿಂದಲೂ ಅಸಾಧ್ಯವು ಈಕೆಯನ್ನು ನೀವು

ಸ್ವೀಕರಿಸಿರಿ ನಿಮ್ಮ ವಂಶಕ್ಕೆ ಮಹತ್ತರವಾದ ಕೀರ್ತಿಯನ್ನು ತರುವಳು" ಎಂದನು. ಅನಂತರ ಆವನು ಲೋಪಾಮುದ್ರೆಯನ್ನು ಸಂಬೋಧಿಸಿ- "ಪುತ್ರಿಯೇ, ನೀನೀ ದಂಪತಿಗಳಿಗೆ ಮಗಳಾಗು ನೀನಿಳೆಯಲ್ಲಿ ಮಹಾ ಶ್ರೇಯಸ್ಕರವಾದ ಕಾರ್ಯವನ್ನೆಸಗಿ ಸರ್ವರಿಗೂ ಅತ್ಯಂತ ಕೀರ್ತಿಯನ್ನು ತರುವವಳಾಗು" ಎಂದು ಹೇಳಿದನು.

ಲೋಪಾಮುದ್ರೆಯಾಗ, "ಪಿತನೇ! ತಿರೆಯಲ್ಲಿ ನಾನು ಮಾಡ ಬೇಕಾದ ಕಾರ್ಯವಾವುದು? ನನ್ನನ್ನೇಕೆ ಈ ಮುನಿದಂಪತಿಗಳಿಗೆ ದತ್ತ ಪುತ್ರಿಯಾಗಿ ಕೊಡುತ್ತಿರುವೆ?" ಎಂದು ಪ್ರಶ್ನಿಸಿದಳು. ಹಿರಣ್ಯಗರ್ಭ ನದಕ್ಕೆ—"ಎಲೈ, ಲೋಪಾಮುದ್ರೆಯೇ! ನೀನು ನನಗೆ ಮಗಳಾಗಿದ್ದರೂ ಲಕ್ಷ್ಮೀವಿಷ್ಣು ಅಂಶ ಸಂಭೂತೆಯು. ನೀನೇ ಭಗವತಿ, ನೀನೇ ಜಗ ನ್ಮೋಹಿನಿ, ನೀನೇ ಅಯೋನಿಜೆ, ನೀನೇ ಲೋಕಮಾತೆ. ದೇವತೆ ಗಳಿಗೆ ಅಮೃತವನುಣಿಸಿ ಅವರನ್ನು ಪೊರೆದಂತೆಯೇ ಭೂಲೋಕ ದಲ್ಲಿಯೂ ಮಾನವರ ಪಾಪರಾಶಿಗಳನ್ನು ಸುಟ್ಟು ಬೂದಿಮಾಡಿ ಅವರಿಗೆ ಜೀವನವನ್ನೆರೆಯುವುದು ನಿನ್ನ ಕರ್ತವ್ಯವು ಹಾಗೆ ಮಾಡಿದರೆ ನೀನು ಜೀವಕೋಟಿಯನ್ನೆಲ್ಲಾ ಸಂತೋಷಪಡಿಸುವೆ, ನೀನು ಗಂಗೆಗಿಂತಲೂ ಪಾವನಳೆಂದೆಣಿಸಿ ಕಲ್ಪಾಂತದ ವರೆಗೆ ಚಿರಂಜೀವಿಯಾಗಿ ಬಾಳುವೆ. ನೀನೀ ಕವೇರಋಷಿಗೆ ಮಗಳಾಗಿ, ಅವರನ್ನೊಲಿಸಿಕೊಂಡು, ಸಕಲ ವೇದ ಶಾಸ್ತ್ರಗಳನ್ನರಿತು, ಮಹಾ ವಿಖ್ಯಾತೆಯಾಗಿ ನಾರೀ ವೃಂದಕ್ಕೆಲ್ಲಾ ಬೈತಲೆ ಮಣಿಯಾಗು" ಎಂದು ಹರಸಿ ಸತ್ಯಲೋಕಕ್ಕೆ ತೆರಳಿದನು.

ಇತ್ತ ಮುನಿದಂಪತಿಗಳು ಲೋಪಾಮುದ್ರೆಯನ್ನು ತಮ್ಮಾಶ್ರಮಕ್ಕೆ ಕರದೊಯ್ದು ಬಹು ಪ್ರೀತಿಯಿಂದ ಸಾಕಿಕೊಂಡಿದ್ದರು. ಲೋಪಾ ಮುದ್ರೆಯು ಆ ದಂಪತಿಗಳಗೆ ಔರಸ ಪುತ್ರಿಗಿಂತಲೂ ಮೀರಿದ ವಿನಯ ದಿಂದಲೂ, ವಿಧೇಯತೆಯಿಂದಲೂ ನಡೆಕೊಂಡು ಅವರ ಪ್ರೀತಿಗೆ ಪಾತ್ರ ಳಾದಳು. ಆವಳ ಸದ್ಗುಣಗಳನ್ನು ನೋಡಿ ನೆರೆಹೊರೆಯ ಋಷಿಪತ್ನಿ ಯರೂ ಆವಳನ್ನು ಪೂಜ್ಯಭಾವದಿಂದ ಕಾಣುತಿದ್ದರು. ದೇವಾಂಶ ಸಂಭೂತೆಯಾದ ಲೋಪಾಮುದ್ರೆಯು ತಮ್ಮೊಡನಿದ್ದುದರಿಂದ ಆ ದಂಪತಿಗಳ ಮನೆಯು ಲಕ್ಷ್ಮೀ ನಿವಾಸದಂತೆ ಬೆಳಗಿತು. ಆ ರಿಸಿಯು

ಮಹದೈಶ್ವರ್ಯವಂತನಾಗಿ ಅನೇಕ ಯಜ್ಞ ಯಾಗಾದಿಗಳನ್ನು ಮಾಡಿ ಅನಂತವಾದ ಕೀರ್ತಿಯನ್ನೂ, ಅಪಾರವಾದ ಪುಣ್ಯವನ್ನೂ ಸಂಪಾದಿಸಿದನು. ಲೋಪಾಮುದ್ರೆಗೆ ಅನೇಕ ವಿದ್ಯೆಗಳನ್ನು ಕಲಿಸಿದನು ಆಕೆಯನ್ನು ಹೆಚ್ಚಾದ ಪ್ರೀತಿಯಿಂದ ಕಂಡನು. ಆ ದಂಪತಿಗಳೇ ಕವೇರ ದಂಪತಿಗಳು. ಕವೇರನ ಪುತ್ರಿಯಾದ್ದರಿಂದ ಲೋಪಾಮುದ್ರೆಯನ್ನು ನೆರೆಹೊರೆಯವರೆಲ್ಲಾ ಕಾವೇರಿ ಎಂದು ಕರೆದರು ಆ ನಾಮವೇ ಅವಳಿಗೆ ಅನ್ವರ್ಥವಾಗಿ ಹೋಯಿತು.

## ಅಗಸ್ತ್ಯ

ಕಾಶಿ ವಿಶ್ವನಾಥನ ಕಾಶಿ. ಚಿನ್ನದ ಗೋಪುರಗಳಿಂದೊಪ್ಪುತಿದ್ದ ಕಾಶಿ. ವೈಜಯಂತಿಯ ಸೊಬಗನ್ನು ಧಿಕ್ಕರಿಸುತಿದ್ದ ಕಾಶಿ ಮನ್ಮಥನನ್ನು ಮರುಳುಮಾಡುವಂಥ ನಾರೀಮಣಿಗಳಿಂದ ಮೆರೆಯುತಿದ್ದ ಕಾಶಿ. ಕುಬೇರನ ಐಶ್ವರ್ಯವನ್ನೂ ವೈಭವವನ್ನೂ ಮೀರಿ ಬೆಡಗಿನಿಂದ ಕಂಗೊಳಿಸುತಿದ್ದ ಕಾಶಿ. ಬಡತನದಿಂದ ನರಳದೆ, ನಿತ್ಯತೃಪ್ತರಾಗಿ, ಸತ್ಯಸಂಧರಿಂದ ಅಲಂಕೃತವಾಗಿದ್ದ ಕಾಶಿ.

ಅಲ್ಲದೊಂದು ಬೀಡು; ಕುಂಬಾರನ ಬೀಡು; ನಿತ್ಯವೂ ಬೆವರನ್ನು ಸುರಿಸುತ್ತ ಬ್ರಹ್ಮನಂತೆ ಮಡಕೆಗಳನ್ನು ಮಾಡುತ್ತಾ ಕುತಂತ್ರಗಳನ್ನರಿಯದ ಕುಲಾಲದಂಪತಿಯರ ವಾಸಗೃಹ. ಕುಂಬಾರನು ದಿನಗೆಲಸದಿಂದ ಬಾಲ್ಯವನ್ನು ಕಳೆದು, ಸಾಕಷ್ಟು ಹಣವನ್ನು ಕೂಡ ಹಾಕಿ ಶ್ರೀಮಂತನಾಗಿದ್ದನು. ಅವನ ಮನೆಯು ಸಿರಿಯ ವಾಸಸ್ಥಾನವಾಗಿಯೂ, ದಾನಧರ್ಮಾದಿ ಸತ್ಕರ್ಮಗಳ ನೆಲೆಯಾಗಿಯೂ ಇದ್ದಿತು. ಆದರೆ ಗುಹೆಗಳು ಹೇಗೆ ಕತ್ತಲಾಗಿರುತ್ತವೋ ಹಾಗೆಯೇ ಆ ಮಕ್ಕಳಿಲ್ಲದ ಮನೆಯು ಕಳೆಗುಂದಿ ಅಂಧಕಾರಮಯವಾಗಿತ್ತು. ಆ ಕುಂಬಾರ ದಂಪತಿಗಳು ಈ ಕೊರತೆಯನ್ನು ಮನಸ್ಸಿಗೆ ಹಚ್ಚಿಕೊಂಡು ನಿತ್ಯವೂ ಕೊರಗುತಿದ್ದರು. ಅವರು ಶ್ರೀಮಂತರಾಗಿದ್ದರೂ ಮಕ್ಕಳಿಲ್ಲದ ಯಾತನೆಯಿಂದ ನರಳುತಿದ್ದರು

ಅಂದು ಪ್ರಾತಃಕಾಲ ಸಮಯ. ಸೂರ್ಯನು ಅರುಣಾಚಲವನ್ನೇರಿ ಇಣಿಕಿ ನೋಡುತಿದ್ದನು. ಆಗ ಕುಂಬಾರತಿಯು ನೀರು ತರಲು ಬಾವಿಯ

ಕಡೆ ಹೊರಟಳು. ಆ ಪ್ರದೇಶವೆಲ್ಲಾ ಸುಗಂಧಮಯವಾಗಿತ್ತು. ಆ ಸುಗಂಧದ ಮೂಲಸ್ಥಾನವನ್ನು ಹುಡುಕಲು ಅತ್ತಿತ್ತ ನೋಡಿದಳು. ಆಗ ಅಂತರಿಕ್ಷಮಾರ್ಗದಲ್ಲಿ ಓರ್ವ ತರುಣೀಮಣಿಯು ವೇಗವಾಗಿ ನಡೆದು ಹೋಗುತಿದ್ದಳು. ತುಂಬಿದ ಗರ್ಭವತಿಯಾಗಿದ್ದರೂ ಅವಳ ನಡೆಯು ಮಂದಗತಿಯನ್ನು ಮೀರಿದ್ದಿತು. ಆಗ ತೇಜೋವಂತನಾದ ಪುರುಷನೋರ್ವನು ಅವಳನ್ನು ಹಿಂಬಾಲಿಸಿ ಬರುತಿದ್ದನು. ಅವನ ವಿಲಾಸದ ನಡೆ, ಕಣ್ಣು ಕುಕ್ಕುತಿದ್ದ ಪ್ರಭೆ; ತೀಕ್ಷ್ಣ ದೃಷ್ಟಿಯನ್ನು ನೋಡಿ ಕುಲಾಲ ಪತ್ನಿಯು ಬೆದರಿ ಒಂದು ಮರದಡಿಯಲ್ಲಿ ಅಡಗಿಕೊಂಡಳು. ಅವನಾ ಮುಂದುವರಿದ ನಾರೀಮಣಿಯನ್ನು ಸಂಬೋಧಿಸಿ—"ಎಲೌ ಊರ್ವಶಿ! ಏಕೀ ರೀತಿಯಲ್ಲಿ ಕೋಪಿಸಿಕೊಂಡು ಹೋಗುತ್ತಿರುವೆ? ನಾನೇನಪರಾಧವನ್ನು ಮಾಡಿದೆ? ನಿನ್ನನ್ನು ಬಿಟ್ಟು ನಾನು ಅರೆಗಳಿಗೆಯಾದರೂ ನಿಲ್ಲಲಾರೆನು. ತಡೆ ತಡೆ, ಮಿತ್ರನೆಂಬ ನಾಮವನ್ನು ಪಡೆದಂತೆಯೇ ಮಿತ್ರನಾಗಿಯೇ ನಾನೂ ಚಿರಕಾಲ ನಿನ್ನ ಬಳಿಯಲ್ಲಿರುವೆನು" ಎಂದನು. ಆದಕ್ಕಾ ರಮಣಿಯು—"ಮಿತ್ರಾ ಇಷ್ಟು ದಿನ ನಿನ್ನ ಸಂಗಡ ಸಂತೋಷಸಲ್ಲಾಪಗಳಿಂದ ಕಾಲ ಕಳೆದುದೇ ಹೆಚ್ಚೆಂಬೆನಬೇಕು. ನಾನಿನ್ನು ದೇವೇಂದ್ರನ ಸಭೆಗೆ ಹೋಗುವೆನು. ಇಂದಿಗೆನ್ನ ಶಾಪವು ತೀರಿತು. ಸುಮ್ಮನೆ ಭ್ರಮೆಯಿಂದ ನನ್ನನ್ನು ಹಿಂಬಾಲಿಸಬೇಡ" ಎಂದಳು.

ಅಷ್ಟರಲ್ಲಿ ಇನ್ನೋರ್ವ ಪುರುಷನು ಪಕ್ಕದ ಅರಣ್ಯದಿಂದ ಫಕ್ಕನೆ ಹೊರಬಿದ್ದು—"ಎಲೌ ಊರ್ವಶಿಯೇ, ನನ್ನನ್ನು ವರಿಸಿ, ವಂಚಿಸಿ ಈಗ ಮಿತ್ರನ ಸಂಗಡ ಓಲಾಡುತ್ತಾ ಹೋಗುತ್ತಿರುವೆ. ನಿನ್ನ ಜನ್ಮಕ್ಕೆ ಧಿಕ್ಕಾರವಿರಲಿ. ನೀನು ಪುರೂರವಪತ್ನಿಯಾಗಿ ನರಲೋಕದಲ್ಲಿಯೇ ಬಹುಕಾಲವಿರು" ಎಂದು ಕೋಪಾಟೋಪದಿಂದ ನುಡಿದನು. ಆ ರಮಣಿಯಾಗ ಬೆದರಿದ ಹುಲ್ಲೆಯಂತೆ ನಡುಗುತ್ತಾ ಆ ಪುರುಷನ ಬಳಿಗೆ ಬಂದು "ವರುಣನೇ ನನ್ನ ತಪ್ಪನ್ನು ಕ್ಷಮಿಸಬೇಕು" ಎಂದು ಅಡ್ಡಬಿದ್ದು ಬೇಡಿಕೊಂಡಳು. ಆದಕ್ಕೆ ವರುಣನು "ಅಪ್ಸರೆಯೇ ನೀನು ಕೆಲವು ಕಾಲ ಪುರೂರವನ ಮಡದಿಯಾಗಿದ್ದು ಅನಂತರ ಸ್ವರ್ಗ ಲೋಕವನ್ನು ಸೇರುವೆ" ಎಂದಂದು ಹೊರಟುಹೋದನು. ಊರ್ವಶಿಯು ಚಿಂತಾಭರದಿಂದ

ಮೆಲ್ಲ ನಡಿಯುತ್ತಾ ಮುಂದೆ ನಡೆದಳು. ಅಷ್ಟರಲ್ಲಿ ಮಿತ್ರನು ಕಾಲಿಗೆ ಬುದ್ಧಿ ಹೇಳಿದನು.

ಆಮೇಲೆ ಕುಂಬಾರಿತಿಯು ನೀರನೆತ್ತಿಕೊಂಡು ಮನೆಕಡೆ ಹೊರಟಳು. ಅವಳ ಮನಸ್ಸಿನಲ್ಲಿ ಆ ಊರ್ವಶಿಯ ರಮಣೀಯವಾದ ಮುಖವೂ, ಸೋಗುಗೊಂಡ ಬಸಿರೂ ನೆಲೆಯಾಗಿ ನಿಂತವು. ಅವಳು ಮನೆಯನ್ನು ಸೇರಿ ತಂದ ನೀರನ್ನು ಮೂಲೆಯಲ್ಲಿರಿಸಿ ತನ್ನ ಕೆಲಸಗಳಿಗೆ ಕೈಹಚ್ಚಿದಳು. ಆದರೆ ಕೆಲಸವಮಾಡಲು ಅವಳ ಮನಸೊಪ್ಪಲಿಲ್ಲ. ಮಕ್ಕಳಿಲ್ಲದ ಸಂತಾಪದಿಂದ ಬೆಂದು, ನೊಂದು, ಸುಮ್ಮನೆ ಮನೆಜಗುಲಿಯ ಮೇಲೆ ಕುಳಿತುಬಿಟ್ಟಳು. ಗರ್ಭವತಿಯಾಗಿದ್ದ ಊರ್ವಶಿಯ ದೃಶ್ಯವು ಅವಳ ಮುಂಗಡೆ ನಲಿದಾಡಿ ಅವಳ ಮನೋಭ್ರಮೆಯನ್ನು ಹೆಚ್ಚಿಸುತ್ತಲಿತ್ತು. ಬಗೆಬಗೆಯ ಆಲೋಚನೆಗಳು ಅವಳ ಮನಸ್ಸಿನಲ್ಲಿ ಹೊಳೆದವು. ಅವಳ ಮುಖವು ಖಿನ್ನವಾಯಿತು. ಕಣ್ಣೀರು ಧಾರೆಯಾಗಿ ಸುರಿಯಿತು. ಕುಂಬಾರನು ಮಡದಿಯ ಮುಖವನ್ನು ನೋಡಿ, ತನ್ನ ಕೆಲಸವನ್ನು ಬಿಟ್ಟು ಅವಳ ಪಕ್ಕದಲ್ಲಿಯೇ ಕುಳಿತು ವಿಚಾರಿಸತೊಡಗಿದನು. ಆದರೆ ನಾರೀಮಣಿಯು ಏನನ್ನೂ ಉಸುರದೆ ಕಣ್ಣೀರು ಸುರಿಸಿದಳು—"ಕಾಂತ! ನಮಗೀ ಜನ್ಮದಲ್ಲಿ ಸಂತತಿಲಾಭವಿಲ್ಲದಾಯಿತೇ? ನಾವು ಪಾಪಿಗಳಲ್ಲವೆ" ಎಂದೆನುತ್ತಾ ಅಳತೊಡಗಿದಳು. ಅವಳ ಅಳುವಿಕೆಯನ್ನು ನೋಡಿ ಕುಂಬಾರನಿಗೂ ಕಂಠವುಮ್ಮಳಿಸಿತು. ಅವನೂ ಚಿಂತಾಮಗ್ನನಾದನು.

ಆಗ ಮನೆಯೊಳಗಿಂದ ಮಗುವಿನ ರೋದನವು ಕೇಳಿಸಿತು. ಅವರ ಕಿವಿಗಳು ನೆಟ್ಟಗಾದವು. ಆದರೆ ತಮ್ಮ ಮನಸ್ಸಿನಾಲೋಚನೆಗಳೇ ಆ ರೀತಿ ಪರಿಣಮಿಸಿ ಕಲ್ಪನಾತರಂಗವನ್ನುದ್ರೇಕಿಸಿರಬಹುದೆಂದೆಣಿಸಿ ಅಲ್ಲಿಯೇ ಕುಳಿತುಬಿಟ್ಟರು. ಪುನಃ ಮಗುವು ಚೀರಿ ಅಳುತಿದ್ದಂತೆ ಕೇಳಿಸಿತು. ಇಬ್ಬರೂ ಮನೋದ್ವೇಗದಿಂದ ರೋದನವನ್ನಾಲಿಸಿ ಮನೆಯೊಳಗೆ ಹೋದರು. ಅವರ ಹೃದಯವು ಡಬ, ಡಬ ಬಡಿಯಲು ಆರಂಭಿಸಿತು. ಇಬ್ಬರೂ ಉಸಿರೆಳೆದು ಮುಂದೆ ನಡೆದರು. ಆ ರೋದನದ ಶಬ್ದವು ನೀರ ಮಡಿಕೆಯೊಳಗಿಂದ ಹೊರಬೀಳುತಿದ್ದಂತೆ ಕೇಳಿಸಿತು. ಆ ಕುಂಬಾರನ ಪತ್ನಿಯು ನೀರಿನ ಮಡಿಕೆಯೊಳಗೆ ಇಣಿಕಿ ನೋಡಿದಳು. ಕೂಡಲೇ ಅವಳ

ಕಣ್ಣುಗಳು ಅರಳಿದವು, ಅವಳ ಮುಖವು ಆನಂದದಿಂದ ತುಳುಕಿತು. ಒಡನೆ ಆವಳ ಕೈಗಳನ್ನು ಚಾಚಿ, ನೀರೊಳಗಿಂದ ಒಂದು ಮಗುವನ್ನು ಎತ್ತಿಕೊಂಡಳು. ಆ ಮುದ್ದುಮುದ್ದಾದ ಮುಖ, ಕೋಮಲವಾದ ಶರೀರ ವನ್ನು ನೋಡಿ ಅವಳು ಆಶ್ಚರ್ಯಭರಿತಳಾದಳು. ಆನಂದಪರವಶದಿಂದ ಅವಳು ಪುಳಕಾಂಕಿತಳಾದಳು. ಕುಂಬಾರನು ಉತ್ಸಾಹದಿಂದ ನಲಿದಾಡಿ ದನು. ಕುಲದೇವತೆಯನ್ನು ಸ್ಮರಿಸಿ ಕೊಂಡಾಡಿದನು. ಮಗುವನ್ನೆತ್ತಿ ಮುದ್ದಾಡಿದನು. ಆಗ–"ಎಲೈ ಕುಂಬಾರನೇ! ಆ ಮಗುವು ಮಿತ್ರ ವರುಣರಿಗೆ ಊರ್ವಶಿಯಲ್ಲಿ ಹುಟ್ಟಿರುವದು. ಆತನು ಸಾಕ್ಷಾತ್ ರುದ್ರನ ಅಂಶನು. ಆತನಿಂದಲೇ ಲೋಕೋದ್ಧಾರದ ಮಹಾಕಾರ್ಯಗಳು ಜರುಗ ಲಿಕ್ಕಿರುವವು. ಆದ್ದರಿಂದ ಅಪುತ್ರವಂತನಾದ ನೀನು ಅವನನ್ನು ಹಿತದಿಂದ ಸಾಕು" ಎಂಬ ಆಕಾಶವಾಣಿಯು ಕೇಳಿಸಿತು.

ಕುಲಾಲದಂಪತಿಗಳು ಆ ವಾಣಿಯನ್ನು ಕೇಳಿ, ತಮ್ಮ ಕುಲದೇವತೆ ಯನ್ನು ಹೊಗಳಿ, ಹೊಗಳಿ ನಲಿದರು. ಒಡನೆ ಕ್ಷೀರವನ್ನುಣಿಸಿ, ಮೃದುವಾದ ಹಾಸಿಗೆಯಲ್ಲಿ ಮಲಗಿಸಿ ತೊಟ್ಟಿಲಲ್ಲಿಟ್ಟು ಜೋಗುಳ ಹಾಡಿ ದರು. ಅವರ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಮಗುವು ದಿನೇ ದಿನೇ ಪ್ರವರ್ಧಮಾನವಾಗುತ್ತ ಬಂತು. ಕುಂಬಾರನು ಅದಕ್ಕೆ ಅನ್ನ ಪ್ರಾಶನ, ನಾಮಕರಣಾದಿ ಉತ್ಸವಗಳನ್ನು ಜರಗಿಸಿ, ಅತಿಥಿಗಳನ್ನು ಉಚಿತವಾದ ಉಡುಗೊರೆಗಳಿಂದಲೂ, ಧನಕನಕಾದಿ ದಕ್ಷಿಣೆಯಿಂದಲೂ ತೃಪ್ತಿಗೊಳಿಸಿದನು. ಅಗಸ್ತ್ಯನೆಂಬ ನಾಮದಿಂದ ಆ ಮಗುವು ಕುಲಾಲ ದಂಪತಿಗಳ ಮನಸ್ಸನ್ನು ಸಂತೋಷಪಡಿಸಿತು.

ಮಗುವು ದಿನದಿನಕ್ಕೆ ಬೆಳೆದು ಶೈಶವಾವಸ್ಥೆಯನ್ನು ಕಳೆದು ಬಾಲ್ಯಾ ವಸ್ಥೆಯನ್ನು ಹೊಂದಿತು. ಕುಂಬಾರನೊಂದು ಶುಭದಿನ ಅಕ್ಷರಾಭ್ಯಾಸ ಮಾಡಿಸಿ, ವಿದ್ಯಾಭ್ಯಾಸಕ್ಕೆ ತಕ್ಕ ಯೋಗ್ಯ ಗುರುವನ್ನೇರ್ಪಡಿಸಿದನು. ಅಗಸ್ತ್ಯನು ಕೊಂಚ ಸಮಯದಲ್ಲಿ ಸಕಲ ವೇದಶಾಸ್ತ್ರ ಪುರಾಣಾದಿ ಗ್ರಂಥಗಳನ್ನು ಪಠಿಸಿ ಬ್ರಹ್ಮನಂತೆ ಮೇಧಾವಿಯಾದನು. ತನ್ನ ಜ್ಞಾನ ದಿಂದ ಎಲ್ಲಾ ವಿದ್ವಾಂಸರ ಹೆಮ್ಮೆಯನ್ನು ಮುರಿದನು.

ಒಂದು ದಿನ ಅಗಸ್ತ್ಯನು ತನ್ನ ತಾಯ್ತಂದೆಗಳ ಮುಂದೆ ಕೈಮುಗಿದು

ನಿಂತು–"ನಾನಿನ್ನು ಸನ್ಯಾಸವನ್ನು ಸ್ವೀಕರಿಸಿ ರುದ್ರನನ್ನು ಕುರಿತು ತಪಸ್ಸುಮಾಡಲು ಹೋಗಬೇಕೆಂದಿರುವೆನು. ಆದ್ದರಿಂದ ತಮ್ಮ ಆಶೀರ್ವಾದವನ್ನು ಬಯಸಿರುವೆನು. ತಮ್ಮ ಕೀರ್ತಿಯನ್ನೂ, ಹೆಸರನ್ನೂ ಅಚಂದ್ರಾರ್ಕವಾಗಿ ಮಾಡಬೇಕೆಂದಿರುವುದೇ ನನ್ನ ಉದ್ದೇಶವಾಗಿರುವುದು. ಆದ್ದರಿಂದ ನನಗೆ ಅಡ್ಡಿಮಾಡಬಾರದು" ಎಂದು ಅಡ್ಡಬಿದ್ದು ಕೇಳಿಕೊಂಡನು. ಆ ದಂಪತಿಗಳು ತಮ್ಮ ಪುತ್ರನಿಗೆ ತಕ್ಕ ಹೆಣ್ಣನ್ನು ಗೊತ್ತು ಹಚ್ಚಿ ವಿವಾಹಮಾಡಬೇಕೆಂದು ಆಲೋಚಿಸುತ್ತಿರಲು, ಇಂಥಾ ಸಂಘಟನೆಯುಂಟಾದುದನ್ನು ನೋಡಿ ವ್ಯಸನಭರಿತರಾದರು. ಆದರೆ ಲೋಕೋಪಕಾರಕ್ಕಾಗಿ ಹೊರಡಲು ಟೊಂಕಕಟ್ಟಿದ್ದ ಮಗನನ್ನು ನೋಡಿ, ಅವನ ನಿರ್ಧಾರವನ್ನು ತಪ್ಪಿಸಲಶಕ್ತರಾಗಲು, ಅವನನ್ನು ಅಪ್ಪಿ, ಮುದ್ದಿಕ್ಕಿ, "ನಿನ್ನಿಷ್ಟದಂತೆ ಮಾಡಬಹುದು" ಎಂದು ಹೇಳಿ ಕಾಡಿಗೆ ಕಳುಹಿಸಿಕೊಟ್ಟರು.

ಅಗಸ್ತ್ಯನು ತಾಯ್ತಂದೆಗಳ ಆಶೀರ್ವಾದವನ್ನು ಕೈಕೊಂಡು ಹಿಮಾಲಯದ ತಪ್ಪಲು ಪ್ರದೇಶವನ್ನು ಸೇರಿ ಒಂದಾನೊಂದು ಗವಿಯಲ್ಲಿ ವಾಸಮಾಡಿ, ಯೋಗಾಭ್ಯಾಸದಲ್ಲಿ ನಿರತನು. ನಿದ್ರಾಹಾರಗಳನ್ನು ತೊರೆದು ಬ್ರಹ್ಮನನ್ನು ಕುರಿತು ಏಕಾಗ್ರಚಿತ್ತನಾಗಿ ತಪಸ್ಸುಮಾಡಿದನು. ಆಗ ಬ್ರಹ್ಮನು ಪ್ರತ್ಯಕ್ಷನಾಗಿ, ಅವನನ್ನು ಹರಸಿ, ಸಪ್ತ ತೀರ್ಥಗಳಿಂದ ತುಂಬಿದ ಕಮಂಡಲವನ್ನರ್ಪಿಸಿ ಹೊರಟುಹೋದನು. ಅನಂತರ ಅಗಸ್ತ್ಯನು ಮಹಾರುದ್ರನನ್ನು ಕುರಿತು ಉಗ್ರತಪಸ್ಸನ್ನು ಕೈಕೊಂಡನು. ಅವನ ತಪಸ್ಸಿನ ಬೇಗೆಯು ಭೂಮಂಡಲವನ್ನೆಲ್ಲ ವ್ಯಾಪಿಸಿ, ಸತ್ಯಲೋಕ ದೇವಲೋಕಗಳನ್ನು ನುಗ್ಗಿ ಅಲ್ಲಿಯ ನಿವಾಸಿಕರ ಉಸಿರುಕಟ್ಟಿಸಿತು. ಆಗ ದೇವತೆಗಳು ಬ್ರಹ್ಮನೊಡನೆ ಕೈಲಾಸಗಿರಿಗೆ ಹೋಗಿ ಮಹಾರುದ್ರನನ್ನು ಕಂಡು ಭೂಲೋಕದ ಪರಿಸ್ಥಿತಿಯನ್ನು ವರ್ಣಿಸಿ, ತಮ್ಮ ಕಷ್ಟವನ್ನು ನಿವಾರಣೆ ಮಾಡಬೇಕೆಂದು ಬೇಡಿಕೊಂಡರು ಈಶ್ವರನು ಭಕ್ತರಿಗೆ ಅಭಯವಚನವನ್ನಿತ್ತು ಹಿಮಾಲಯದ ತಪ್ಪಲನ್ನು ಸೇರಿ ಅಗಸ್ತ್ಯನ ಮುಂದೆ ನಿಂತನು. ಆಗಲಾ ಸಹಸ್ರಭಾನುವಿನ ತೇಜವು ಒಮ್ಮೆಯೇ ತನ್ನನ್ನು ಮುತ್ತಿದಂತಾಗಲು ಮುನಿಯು ಕಣ್ದೆರೆದು ಮಂದಹಾಸದಿಂದ ನಗುತ್ತಾ ನಿಂತಿದ್ದ

ಉಮಾಮಹೇಶ್ವರನನ್ನು ಕಂಡು ಅವನ ಪಾದಗಳಿಗೆರಗಿ, ಶಾಸ್ತ್ರೋಕ್ತವಾಗಿ ಸ್ತುತಿಸುತ್ತ ಪೂಜೆಗೈದನು. ಈಶ್ವರನಾಗ "ಎಲೈ ಅಗಸ್ತ್ಯನೇ! ನಿನ್ನ ತಪಸ್ಸಿಗೆ ಮೆಚ್ಚಿದೆನು. ಇಚ್ಛಿಸಿದ ವಸ್ತುವನ್ನು ಕೊಡುವೆನು. ವರವನ್ನು ಬೇಡು" ಎಂದೆನಲು ಮುನಿಯು "ಎಲೈ ದೇವದೇವನೇ! ಕಾಲರುದ್ರನೇ! ನನಗೆ ಯೋಗಸಿದ್ಧಿಯನ್ನು ಕರುಣಿಸು. ನಮ್ಮ ವೇದಧರ್ಮವನ್ನು ಇಡೀ ಜಗತ್ತಿನಲ್ಲಿ ಹರಡಬೇಕೆಂಬ ಮಹದಾಕಾಂಕ್ಷೆಯು ನನ್ನನ್ನು ತುಂಬಿರುವುದು. ಆದ್ದರಿಂದ ನನ್ನ ಮನೋಭೀಷ್ಟವು ನೆರವೇರುವಂತೆ ವರವನ್ನು ದಯಪಾಲಿಸು." ಎಂದು ಅಡ್ಡಬಿದ್ದು ಬೇಡಿಕೊಂಡನು ಈಶ್ವರನು "ನಿನ್ನಿಚ್ಛೆಯಂತೆಯೇ ಆಗಲಿ ನೀನು ಭೂಲೋಕದಲ್ಲೆಲ್ಲಾ ಲಿಂಗವನ್ನು ಸ್ಥಾಪಿಸಿ, ಪುಣ್ಯಕ್ಷೇತ್ರಗಳನ್ನುಂಟುಮಾಡು. ನನ್ನ ನಿಜಾಂಶನಾದ ನೀನು ಇಚ್ಛಿಸಿದ ಕಾರ್ಯವು ನೆರವೇರಲಿ'' ಎಂದು ಹರಸಿ ಅಂತರ್ಧಾನವನ್ನೈದಿದನು. ಅಗಸ್ತ್ಯನು ಸಂತೋಷದಿಂದುಬ್ಬಿ ಕಾಶಿಗೆ ಹೋಗಿ ವಿಶ್ವನಾಥನ ಸಾನ್ನಿಧ್ಯದಲ್ಲಿಯೇ ಆಶ್ರಮವನ್ನು ಹೂಡಿ, ಅನೇಕ ಮಂದಿ ಶಿಷ್ಯರನ್ನು ನೆರಹಿ, ವೇದಧರ್ಮವನ್ನು ಹರಡಿಸಲು ಬೇಕಾದ ಉಪಾಯಗಳನ್ನು ಕಲ್ಪಿಸಿದನು. ಅನಂತರ ಶಿಷ್ಯಗಣದೊಡನೆ ಭೂಮಂಡಲವನ್ನೆಲ್ಲಾ ಸುತ್ತುತ್ತಾ, ಈಶ್ವರಲಿಂಗವನ್ನು ಸ್ಥಾಪಿಸುತ್ತಾ ವೇದಧರ್ಮವನ್ನು ಬೆಳಗಿಸ ಹತ್ತಿದನು. ಅವನ ಕೀರ್ತಿಯು ಅಷ್ಟದಿಕ್ಕುಗಳನ್ನೂ ದಾಟಿ, ಎಲ್ಲಾ ಲೋಕಗಳಲ್ಲಿಯೂ ಹಬ್ಬಿತು. ಅನೇಕಾನೇಕ ಋಷಿವರ್ಯರು ಅವನ ಶಿಷ್ಯರಾದರು.

## ಕಾವೇರಿಯ ಬಾಲ್ಯ

ಕಾವೇರಿಯು ದಿನೇ ದಿನೇ ವೇದಾಶ್ರಮದಲ್ಲಿ ಶುಕ್ಲಪಕ್ಷದ ಚಂದ್ರನಂತೆ ಪ್ರವರ್ಧಮಾನಳಾಗುತ್ತಾ ಬಂದಳು. ಅವಳ ದೇಹವು ನವಯೌವನದಿಂದ ತುಂಬಿ ವನವಾಸಿಗಳಾದ ಸನ್ಯಾಸಿಗಳನ್ನೇ ಮರುಳುಮಾಡುವಂತಿತ್ತು. ತಾವರೆಹೂವಿನಂತೆ ಬಟ್ಟಾಕಾರದ ಮುಖ, ಚಂಪಕಹೂವಿನಂತೆ ಚೂಪಾದ ನಾಸಿಕ, ತೊಂಡೆಹಣ್ಣಿನಂತೆ ಕೆಂಪಾದ ತುಟಿಗಳು, ಭ್ರಮರಗಳಂತೆ ಕಪ್ಪಾದ ಕೂದಲು, ತಾವರೆಸಳುಗಳಂತೆ ಕೋಮಲವಾದ

ಕೈಬೆರಳುಗಳು ಭೂಲೋಕವನ್ನೇ ಮೋಹಿಸುವಂತಿದ್ದವು. ಆದರೂ ಕಾವೇರಿಯು ಗರ್ವಪಡದೆ, ಕವೇರಪತ್ನಿಯನ್ನು ಮಾತೆಯಂತೆ ಪೂಜಿಸುತ್ತಾ, ಮಾತಾಪಿತೃಸೇವೆಯಲ್ಲಿಯೇ ನಿರತಳಾಗಿದ್ದಳು.

ಕವೇರನು ಅವಳನ್ನು ಅತ್ಯಂತಾದರದಿಂದ ನೋಡುತ್ತಿದ್ದನು. ದತ್ತಪುತ್ರಿಯಾಗಿದ್ದರೂ ಔರಸಪುತ್ರಿಯ ಮೇಲಿನ ವ್ಯಾಮೋಹಕ್ಕಿಂತಲೂ ಮಿತಿಮೀರಿದ್ದ ಪ್ರೀತಿಯನ್ನು ತೋರಿಸುತ್ತಿದ್ದನು. ಕಾವೇರಿಯೂ ಔರಸಪುತ್ರಿಯಂತೆ ನಡಕೊಳ್ಳುತ್ತಿದ್ದಳು. ಅವಳಿಗೆ ವೇದಾಧ್ಯಯನ ಮಾಡಿಸಿ ಸಕಲ ಶಾಸ್ತ್ರಗಳನ್ನೂ ಕಲಿಸಿದನು. ಅಲ್ಲದೆ ವಸಿಷ್ಠನನ್ನು ಕರೆತಂದು ಉಪನಿಷತ್ತುಗಳನ್ನೂ ಷಡಂಗ, ಷಡ್ಭಾಷೆ, ಷಡ್ದರ್ಶನಗಳನ್ನೂ ಹೇಳಿಸಿದನು. ಕಾವೇರಿಯು ಮಹಾ ಚತುರೆಯಾಗಿದ್ದುದರಿಂದ ಸಕಲ ಶಾಸ್ತ್ರಗಳ ತಿರುಳನ್ನು ಶೀಘ್ರದಲ್ಲಿಯೇ ಕಲಿತು ಮಹಾ ವಿದ್ವಾಂಸೆಯಾದಳು. ತರ್ಕಶಾಸ್ತ್ರದಲ್ಲಿಯೂ ಮಹಾನೈಪುಣ್ಯವನ್ನು ಪಡೆದು ಅಪ್ರತಿಮವಾದ ಯಶಸ್ಸನ್ನು ಪಡೆದಳು. ಗಾರ್ಗಿ, ಮೈತ್ರೇಯಿ, ಕಾತ್ಯಾಯಿನಿಯರೂ, ಯಾಜ್ಞವಲ್ಕ್ಯ, ಸನತ್ಕುಮಾರ, ಶಾಂಡಿಲ್ಯಾದಿ ಋಷಿಗಳೂ ಅವಳ ಸರ್ವತೋಮುಖವಾದ ಪಾಂಡಿತ್ಯವನ್ನು ನೋಡಿ ಬೆರಗಾಗಿ ಹೋದರು.

ಒಂದು ದಿನ ಕಾವೇರಿಯು ತನ್ನ ಪಿತನನ್ನು ಎಂದಿನಂತೆ ಅನೇಕ ವಿಧದ ತರ್ಕಶಾಸ್ತ್ರಗಳಿಂದ ಹುರಿದುಂಬಿಸಿ, ಕಾಡಿಗೆ ಹೋಗಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಲು ಅಪ್ಪಣೆಕೊಡಬೇಕೆಂದು ಕೇಳಿಕೊಂಡಳು. ಅದಕ್ಕೆ ಕವೇರನು ಪರಿಪರಿಯಾಗಿ ಚಿಂತಿಸಿ, 'ಮಗಳೆ! ನೀನು ಇನ್ನೂ ಚಿಕ್ಕವಳು. ತಪಸ್ಸು ನಿನಗೆ ಸಲ್ಲದು. ತಕ್ಕ ವರನನ್ನು ಪಡೆದು ಸಂಸಾರಿಯಾಗಿ ನೀನು ಬಾಳಬೇಕೆಂಬುದೇ ನನ್ನ ಕೋರಿಕೆ. ನಿನ್ನ ಮುದ್ದುಮಕ್ಕಳನ್ನು ಆಡಿಸಿ ಆನಂದಾತಿಶಯದಿಂದ ಮುಳುಗಲು ಎಂದು ಸುಯೋಗವು ಬರುವುದೋ ಎಂದು ಕಾದಿರುವೆನು!' ಎಂದನು.

ಕಾವೇರಿಯು ಪಿತನ ಮಾತನ್ನು ಕೇಳಿ, "ಪಿತನೇ, ಭೂಲೋಕದಲ್ಲಿ ಸಕಲ ಜೀವರಾಶಿಗಳ ಔನ್ನತ್ಯಕ್ಕೆ ನನ್ನ ಕಾಯವನ್ನು ಧಾರೆಯೆರೆಯಬೇಕೆಂದು ನಾನು ನಿಶ್ಚಯಿಸಿದ್ದೇನೆ. ಆದ್ದರಿಂದ ತಪಃಫಲದಿಂದ ನನ್ನಿಷ್ಟಸಿದ್ಧಮಾಡಿಕೊಳ್ಳುವೆನು" ಎಂದಳು.

ಆಗಲಾ ಕವೇರನು "ನನ್ನ ಮುದ್ದಿನ ಅರಗಿಳಿಯೆ! ನಿನ್ನನ್ನು ಪಡೆಯಲು ಅನೇಕಾನೇಕ ಕಷ್ಟಗಳಿಗೆರವಾಗಿರುವೆವು. ನಮ್ಮ ದೇಹವನ್ನು ತಪಸ್ಸಿನಿಂದ ಸವೆದು, ವೃದ್ಧಾಪ್ಯದಲ್ಲಿ ನಿನ್ನನ್ನು ಪಡೆದೆವು. ನಿನ್ನನ್ನು ಬಿಟ್ಟು ಒಂದುಗಳಿಗೆಯಾದರೂ ಇರಲೊಲ್ಲೆವು" ಎಂದನು. ಮತ್ತಾ ಕಾವೇರಿ ಪಿತನನ್ನು ಹಿತಭಾಷಣದಿಂದ ಸಂತೈಸಿ, ಮಾತೆಯು ಕಾಲುಗಳಿಗೆರಗಿ ಆವಳ ಸಮ್ಮತಿಯನ್ನು ಪಡೆದು, ಕವೇರನಿಂದ ಬೀಳ್ಕೊಟ್ಟವಳಾಗಿ ಮುಂದೆ ನಡೆದು, ವಸಿಷ್ಠಮುನಿಯಿಂದ ಉಪದೇಶವನ್ನು ಸ್ವೀಕರಿಸಿ, ಘೋರಾರಣ್ಯವನ್ನೈದಿ ಬ್ರಹ್ಮನನ್ನು ಕುರಿತು ತಪಸ್ಸುಮಾಡಲಾರಂಭಿಸಿದಳು. ಮೊತ್ತಮೊದಲು, ಹಣ್ಣುಹಂಪಲು ಗಡ್ಡೆಗೆಣಸುಗಳಿಂದ ಹಸಿವನ್ನಡಗಿಸುತ್ತಾ, ಕೆಲವು ದಿನ ಕಳೆದನಂತರ ಎಲೆಗಳನ್ನು ತಿನ್ನುತ್ತಾ ನೀರನ್ನು ಕುಡಿಯುತ್ತಾ ಇದ್ದು ಕಡೆಗೆ ಬರೇ ವಾಯುವನ್ನು ಮಾತ್ರ ಸೇವಿಸಹತ್ತಿದಳು.

ಇಂದ್ರಿಯನಿಗ್ರಹವನ್ನು ಮಾಡಿ, ಯೋಗಾಭ್ಯಾಸದಿಂದ ಉಸಿರನ್ನು ತಡೆದು, (ಎಚ್ಚರ, ಜಾಗರ, ಸ್ವಪ್ನಾವಸ್ಥೆಗಳನ್ನು ದಾಟಿ ಸುಷುಪ್ತಿಯನ್ನು ಕಳೆದು) ಹೃದಯವನ್ನು ಕದಲಿಸಿ ಅಂತರ್ಜ್ಯೋತಿಯನ್ನು ಬೆಳಗಿಸಿ, ಕುಂಭಕಾವಸ್ಥೆಯಲ್ಲಿಯೇ ನಾಡಿಗಳೆಲ್ಲವನ್ನೂ ಬಿಗಿ ಹಿಡಿದು ಘೋರ ತಪಸ್ಸನ್ನಾಚರಿಸಿದಳು. ಕೆಲವು ಸಾರಿ ಎರಡು ಕಾಲುಗಳಲ್ಲಿಯೂ, ಇನ್ನು ಕೆಲವು ಸಾರಿ ಒಂದು ಕಾಲಿನಲ್ಲಿಯೂ, ಅಂತ್ಯದಲ್ಲಿ ಒಂದೇ ಕಾಲಿನಲ್ಲಿ ನಿಂತು ತಪಸ್ಸನ್ನು ಮಾಡಲಾ, ತಪೋಜ್ವಾಲೆಯು ಮೂಲೋಕಗಳನ್ನು ತುಂಬಿತು. ಮಾನವರೂ, ದೇವತೆಗಳೂ, ಮೃಗಪಕ್ಷ್ಯಾದಿಗಳೂ ನಿಶ್ಚೇಷ್ಟಿತರಾದರು. ಆಗಲಾ ಇಂದ್ರನು ಬ್ರಹ್ಮನ ಆಸ್ಥಾನಕ್ಕೆ ಹೋಗಿ ಸಂಭವಿಸಿದ ಕಷ್ಟ ಪರಂಪರೆಗಳನ್ನು ಅರುಹಿಕೊಳ್ಳಲಾ, ಬ್ರಹ್ಮನು ಒಡನೆ ಮಯೂರವಾಹನನಾಗಿ, ಕಾವೇರಿಯ ತಪೋವನಕ್ಕೆ ಬಂದು ಆವಳ ಮುಂದೆ ನಿಂತು "ಮಗಳೇ, ನಿನ್ನ ತಪಸ್ಸಿಗೆ ಮೆಚ್ಚಿದೆನು, ಎದ್ದೇಳು! ನೀನೀ ರೀತಿಯಲ್ಲಿ ಏಕಾಗ್ರಚಿತ್ತದಿಂದ ತಪಸ್ಸು ಮಾಡುವುದರ ಉದ್ದೇಶವೇನು? ಒಡನೆ ಅರುಹು" ಎಂದು ಕೇಳಲಾ ಕವೇರತನಯೆಯು ತಕ್ಷಣವೇ ಕಣ್ದೆರೆದಳು. ಮುಂದೆ ನಿಂತಿದ್ದ ಸಾಕ್ಷಾತ್ ಬ್ರಹ್ಮನನ್ನೇ ಕಂಡು, ಅನೇಕ ವಿಧವಾಗಿ

ಪೂಜಿಸಿ "ಎಲೈ ಪಿತನೇ! ನಿನ್ನ ದರ್ಶನದಿಂದ ನಾನಿಂದು ಪಾವನಳಾವೆನು. ನಾನೀ ಮಾನವ ಜೀವರಾಶಿಗೆ ಹಿತಕಾರಿಯಾಗಿ ನನ್ನ ಭವಿಷ್ಯತ್ತನ್ನು ಅವರ ಪಾಪನಾಶಕ್ಕೆ, ಸಂಕಟಪರಿಹಾರಕ್ಕಾಗಿಯೇ ಕಳೆಯಬೇಕೆಂದು ಉದ್ದೇಶ ಪಟ್ಟಿರುವೆನು. ನಾನು ತೊರೆಯಾಗಿ ಇಡೀ ಭೂಲೋಕದ ಜೀವರಾಶಿಗೆ ಉಪಕಾರ ಮಾಡಬೇಕೆಂದಿರುವೆನು. ಆದ್ದರಿಂದ ಇಚ್ಛೆ ಬಂದಾಗ ಹೊಳೆ ಯಾಗಿಹರಿದುಹೋಗುವಂತೆ ನನಗೆ ವರವನ್ನು ಕರುಣಿಸು. ಅಲ್ಲದೆ ನನ್ನ ಜಲದಲ್ಲಿ ಸಪ್ತತೀರ್ಥಗಳು ನೆಲಸಿ, ಮಾನವರ ಪಾಪವನ್ನೆಲ್ಲಾ ತೊಳೆದು ನಾಶ ಮಾಡುವಂಥ ಶಕ್ತಿಯನ್ನು ನನಗೆ ದಯಪಾಲಿಸು" ಎಂದು ದೈನ್ಯ ದಿಂದ ಕೇಳಿಕೊಂಡಳು. ಅದಕ್ಕೆ ಬ್ರಹ್ಮನು ಸಂತೋಷದಿಂದ "ಮಗಳೇ! ನಿನ್ನಿಚ್ಛೆಯಂತಾಗಲಿ. ಅಲ್ಲದೆ, ನಿನ್ನಿಷ್ಟ ಬಂದಾಗ ನೀನು ಜಲಶರೀರೆ ಯಾಗಿಯೂ, ಮನುಷ್ಯಶರೀರೆಯಾಗಿಯೂ ಪರಿವರ್ತಿಸುವೆ. ನಿನಗಿಷ್ಟ ವಿದ್ದರೆ ವಿಷ್ಣುವನ್ನೂ ಈಶ್ವರನನ್ನೂ ಪ್ರಾರ್ಥಿಸಿ ಅವರ ನೆರವನ್ನೂ ಬೇಡು. ಇಲ್ಲವೇ ಸ್ವಸ್ಥಚಿತ್ತಳಾಗಿ ಹಿಂದಿರುಗು" ಎಂದು ಹೇಳಿ ಕಾವೇರಿಯನ್ನು ಹರಸಿ ಅಂತರ್ಧಾನವನ್ನೈದಿದನು.

ಮತ್ತೆ ಕಾವೇರಿಯು ಹಿಂದಿರುಗದೆ ಪುನಃ ಘೋರವಾದ ತಪಸ್ಸಿನಿಂದ ವಿಷ್ಣುವನ್ನೂ ಈಶ್ವರನನ್ನೂ ಮೆಚ್ಚಿಸಿ, ತಾನು ಹೊಳೆಯಾಗಿ ಹರಿಯು ವಾಗ ಸಹಾಯವನ್ನು ಮಾಡಬೇಕೆಂದೂ, ತನ್ನ ಜಲವನ್ನು ಪುಣ್ಯತಮ ವನ್ನಾಗಿ ಮಾಡಬೇಕೆಂದೂ ಕೇಳಿಕೊಂಡಳು. ಅವರು ಹಾಗೆಯೇ ಆಗ ಲೆಂದು ಹರಸಿ ಸ್ವಸ್ಥಾನಕ್ಕೆ ತೆರಳಿದರು. ಕಾವೇರಿಯು ಅನಂತರ, ಅಗ್ನಿ ಯಲ್ಲಿ ಕಾಸಿದ ಚಿನ್ನದಂತೆ ಶೋಭಿಸುತ್ತ ತನ್ನ ಸಾಕು ತಂದೆಯಾಶ್ರಮಕ್ಕೆ ನಡೆದಳು. ಆ ಮುನಿವರ್ಯನು ಮಗಳನ್ನು ಅತಿ ವಿನಯದಿಂದ ಕರೆ ದೊಯ್ದು, ತೊಡೆಯ ಮೇಲೆ ಕುಳ್ಳಿರಿಸಿ, ನಡೆದ ವಿಚಾರಗಳನ್ನೆಲ್ಲಾ ಕೇಳಿ ತಿಳಿದು, ಹರ್ಷ ಪುಳಕಾಂಕಿತನಾಗಿ ಆನಂದ ಸಾಗರದಲ್ಲಿ ಓಲಾಡಿದನು. ಅವನ ಸತಿಯೂ ಸಂತಸದ ಗಡಲಿನಲ್ಲಿ ಮುಳುಗಿ ಪಾರವನ್ನು ಕಾಣದೆ ನಲಿದಾಡಿದಳು. ಕವೇರನು ಅವಳನ್ನೇ ಬ್ರಹ್ಮಗಿರಿಶಿಖರದಲ್ಲಿ ನೆಲಸಿದ್ದ ಸಪ್ತಋಷಿಗಳಾಶ್ರಮಕ್ಕೆ ಕರೆದೊಯ್ದು ಅವಳ ಪರಿಚಯವನ್ನು ಮಾಡಿ ದನು. ಕಾವೇರಿಯು ತನ್ನ ವಾಕ್ಚಾತುರ್ಯದಿಂದಲೂ ಅತಿಶಯವಾದ

ಜ್ಞಾನದಿಂದಲೂ, ಮುನಿವರ್ಯರನ್ನು ಸಂತೋಷಗೊಳಿಸಿ ಅಧಿಕವಾದ ಸನ್ಮಾನಕ್ಕೊಳಗಾದಳು. ಅವಳ ವಿದ್ಯಾಖ್ಯಾತಿಯು ದಿಗಂತವಿಶ್ರಾಂತ ವಾಯಿತು

## ಅಗಸ್ತ್ಯನ ತೇಜಸ್ಸು

ಸೂರ್ಯನಂತೆ ತೇಜೋವಂತನಾದ ಅಗಸ್ತ್ಯನು ವೇದಧರ್ಮವನ್ನು ಬೋಧಿಸುತ್ತ ಆರ್ಯಾವರ್ತವನ್ನೆಲ್ಲಾ ತಿರಿದು ಈಶ್ವರ ಲಿಂಗಗಳನ್ನು ಸ್ಥಾಪಿಸಿ ಮಹಾ ಯಶೋವಂತನಾದನು. ಅವನ ಪ್ರಭಾವದಿಂದ ಲೋಕ ದಲ್ಲಿ ಸುಖಶಾಂತಿಯು ನೆಲೆಗೊಂಡವು; ಪುಣ್ಯಕ್ಷೇತ್ರಗಳು ಅಲ್ಲಲ್ಲಿ ತಲೆ ದೋರ್ದವು. ಅವನ ಉತ್ಸಾಹವು ಜನರೆಲ್ಲರನ್ನೂ ವೇದಧರ್ಮಪರಾ ಯಣರನ್ನಾಗಿ ಮಾಡಿತು. ಇಂತಿರಲು ಒಂದು ದಿನ ಈಶ್ವರನು ಅವನಿಗೆ ಪ್ರತ್ಯಕ್ಷನಾಗಿ "ಎಲೈ ಮುನಿವರ್ಯನೇ! ಆರ್ಯಾವರ್ತದ ತೆಂಕು ದಿಕ್ಕಿನಲ್ಲಿ ದಂಡಕಾರಣ್ಯವೆಂಬ ಪ್ರದೇಶವಿದೆ. ನಿಬಿಡವಾದ ಆ ಅರಣ್ಯವು ಮನುಷ್ಯ ರಿಗೆ ಅಭೇದ್ಯ. ಅಲ್ಲಿ ನಿನ್ನ ಖ್ಯಾತಿಯನ್ನು ಮೆರೆಯಿಸು. ಹಿಂದೆ ಯಾರೂ ಆ ಅರಣ್ಯವನ್ನು ಪ್ರವೇಶಿಸಿರುವುದಿಲ್ಲ. ಆ ಪ್ರದೇಶವನ್ನೆಲ್ಲಾ ಪುಣ್ಯ ಕ್ಷೇತ್ರವನ್ನಾಗಿ ಮಾಡುವ ಭಾರವು ನಿನ್ನ ಮೇಲೆ ಬಿದ್ದಿದೆ" ಎಂದು ಹೇಳಿ ಅಂತರ್ಹಿತನಾದನು.

ಆರ್ಯಧರ್ಮಪ್ರದೀಪನಾದ ಅಗಸ್ತ್ಯನು ಒಡನೆ ತನ್ನ ಶಿಷ್ಯಸಮೂ ಹದೊಡನೆ ಹೊರಟು, ದಂಡಕಾರಣ್ಯವನ್ನು ಹೊಕ್ಕು ವಸತಿಯನ್ನು ಕಲ್ಪಿಸಿ, ಆಶ್ರಮವನ್ನು ಹೂಡಿ, ದಸ್ಯುಗಳೆಂದು ಕರೆಯಲ್ಪಡುತ್ತಿದ್ದ ಕಾಡು ಜನರನ್ನೂ ಅಸುರರನ್ನೂ ತನ್ನ ಧರ್ಮಕ್ಕೆ ಸೇರಿಸಿಕೊಂಡನು. ಷಡ್ಭಾಷಾ ಪ್ರವೀಣನಾಗಿದ್ದುದರಿಂದ ಹೊಸಹೊಸ ಭಾಷೆಗಳನ್ನು ಕಲ್ಪಿಸಿ ಆ ಭಾಷೆ ಗಳಲ್ಲೇ ಧರ್ಮವನ್ನು ಪ್ರಚುರಪಡಿಸಿದನು. ಆಂಧ್ರ, ಉರಿಯ ಮುಂತಾದ ಭಾಷೆಗಳಲ್ಲಿ ವೇದಶಾಸ್ತ್ರವನ್ನು ಸಾರಿ ದಕ್ಷಿಣಪಥದ ನಾಗರಿ ಕತೆಗೆ ಉಪ್ಪು ಹಾಕಿದನು. ಇದನ್ನು ಕಂಡು ಇನ್ನೂ ಅನೇಕ ಋಷಿಗಳು ತಮ್ಮ ಶಿಷ್ಯರೊಡನೆ ದಂಡಕಾರಣ್ಯದಲ್ಲಿ ನೆಲಸಿ ಧರ್ಮಪ್ರಚಾರದಲ್ಲಿ ನಿರತ ರಾದರು.

ಆದರೆ ಈ ಧರ್ಮವು ದಂಡಕಾರಣ್ಯದಲ್ಲಿ ನೆಲೆಗೊಂಡಿದ್ದ ಅಸುರರೆಂಬ ನಿವಾಸಿಗಳಿಗೆ ಸರಿ ಹೋಗಲಿಲ್ಲ. ತಮ್ಮ ರಾಜ್ಯವನ್ನು ಆಕ್ರಮಿಸಿದುದಲ್ಲದೆ ತಮ್ಮ ಧರ್ಮವನ್ನು ಕೆಡಿಸಿ ವೇದಧರ್ಮವನ್ನು ಹಬ್ಬಿಸುತ್ತಲಿದ್ದ ಆಗಸ್ತ್ಯನನ್ನೂ ಅವನ ಶಿಷ್ಯರನ್ನೂ ನೋಡಿ, ಸಿಟ್ಟುಗೊಂಡು ಅನೇಕಾನೇಕ ತೊಂದರೆಗಳನ್ನು ಕಲ್ಪಿಸಿದರು. ಋಷಿಗಳಾಶ್ರಮದ ವೇದಿಕೆಗೆ ನೀರೆರೆದು ಆಶ್ರಮವನ್ನು ಕಿತ್ತೆಸೆದು, ಶಿಷ್ಯರ ಸದೆಬಡಿದು, ಮುನಿಗಳನ್ನು ಹಿಂಸಿಸಿ ನಾನಾ ವಿಧವಾಗಿ ಕಾಡಿದರು. ಆದ್ದರಿಂದ ದಿಗಿಲುಗೊಂಡ ಮುನಿಗಳನೇಕರು ಬೆನ್ನೋರಿಸಿ ಉತ್ತರ ದಿಕ್ಕಿಗೆ ಓಡಿಹೋದರು. ಆದರೆ ಆಗಸ್ತ್ಯನು ಮಾತ್ರ ಅಲ್ಲಿಯೇ ಉಳಿದು ಎಲ್ಲಾ ಕಷ್ಟಗಳನ್ನನುಭವಿಸುತ್ತಾ ತನ್ನ ಉದ್ದೇಶವನ್ನು ಕೊನೆಗೊಳಿಸಿಯೇ ಹೋಗಬೇಕೆಂದು ಹಠಹಿಡಿದನು.

ಆಗ ಅಸುರರ ಮುಖಂಡರಾದ ವಾತಾಪಿ ಇಲ್ವಾಲ ಎಂಬೀರ್ವ ಸಹೋದರರು ಬ್ರಾಹ್ಮಣರಿಗೂ, ವೇದಧರ್ಮಾವಲಂಬಿಗಳಿಗೂ ಕಂಟಕರಾಗಿ ಪರಿಣಮಿಸಿದರು. ಋಷ್ಯಾಶ್ರಮಗಳನ್ನು ನಾಶಮಾಡುವುದಲ್ಲದೆ ಋಷಿಗಳನ್ನೇ ಹಿಂಸಿಸಿ ಕೊಲ್ಲಲಾರಂಭಿಸಿದರು. ಅವರೂ ಶಿವೋಪಾಸಕರಾಗಿದ್ದುದರಿಂದ ಶಿವನನ್ನು ಆರಾಧಿಸಿ, ಮಹಾ ತಪಸ್ಸನ್ನು ಗೈದು, ಇಷ್ಟಸಿದ್ಧಿಯನ್ನು ಮಾಡಿಕೊಂಡಿದ್ದರು. ಹೆದರಿಕೆಯಿಂದ ತಲೆತಪ್ಪಿಸಿಕೊಂಡು ಅಲೆಯುತ್ತಿದ್ದ ಬ್ರಾಹ್ಮಣರನ್ನು ವಿನಯದಿಂದ ಭೋಜನಕ್ಕೆ ಕರೆಯಿಸಿಕೊಂಡು ಅವರನ್ನು ಹಿಂಸಿಸುತ್ತಿದ್ದರು. ಅವರಲ್ಲಿ ಹಿರಿಯನಾದ ಇಲ್ವಾಲನು ತನ್ನ ಸಹೋದರನಾದ ವಾತಾಪಿಯನ್ನು ಮೇಕೆಯನ್ನಾಗಿ ಮಾಡಿ ಕಡಿದು ಅವನ ಮಾಂಸವನ್ನು ಪಕ್ವಮಾಡಿ ಬಂದ ಅತಿಥಿಗಳಿಗೆ ಬಡಿಸಿ ಊಟವಾದ ನಂತರ 'ವಾತಾಪಿಯೇ ಬಾ' ಎಂದು ಕೂಗುವನು. ಆಗ ವಾತಾಪಿಯು ಆ ಬ್ರಾಹ್ಮಣರ ಹೊಟ್ಟೆಯನ್ನು ಸೀಳಿ ಹೊರ ಬೀಳುತ್ತಿದ್ದನು. ಹೀಗೆ ವೇದಧರ್ಮಾವಲಂಬಿಗಳ ಹೊಟ್ಟೆಯನ್ನು ಸೀಳಿ ಹಿಂಸಿಸುವುದೇ ಅವರಿಬ್ಬರ ಕೆಲಸವಾಗಿತ್ತು. ಆದ್ದರಿಂದ ಅವರ ಹೆಸರನ್ನುಚ್ಚರಿಸಿದರೆ ಎಲ್ಲಾ ಋಷಿಗಳು ದಿಗಿಲು ಬೀಳುತ್ತಿದ್ದರು. ಎಲ್ಲರೂ ತಂತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡಂತೆ ಬಹು ಎಚ್ಚರದಿಂದಿರುತ್ತಿದ್ದರು.

ಅವರು ಯಾವಾಗ ಬಂದು ತಮ್ಮನ್ನು ಹಿಂಸಿಸುವರೋ ಎಂದು ತುದಿಗಾಲಿನಲ್ಲಿ ನಿಂತು ನೋಡುತ್ತಲಿದ್ದರು.

ಅನೇಕ ರಿಸಿಗಳು ಉತ್ತರದೇಶಕ್ಕೆ ಕಾಲ್ತೆಗೆಯಲು ಅಗಸ್ತ್ಯನು ಭೀತಿಪಡದೆ, ಉಳಿದವರನ್ನು ತನ್ನ ಪಕ್ಕದಲ್ಲಿಯೇ ಇರಿಸಿಕೊಂಡು ಉಪಾಯಾಂತರದಿಂದ ವಾತಾಪಿ ಇಲ್ವಲರ ಕೈಯಿಂದ ತಪ್ಪಿಸಿಕೊಳ್ಳುತ್ತಾ ಕಾಲಕಳೆದನು. ಸಮೀಪದಲ್ಲಿದ್ದ ನಿವಾಸಿಗಳನ್ನು ಒಟ್ಟುಸೇರಿಸಿ ತತ್ವಜ್ಞಾನವನ್ನುಪದೇಶಿಸಿದನು. ಅವನ ಪ್ರಭಾವದಿಂದ ದಂಡಕಾರಣ್ಯವು ದೇವಲೋಕ ಸಮಾನವಾಯಿತು. ಇಂತಿರಲೊಂದು ದಿನ, ಮುನಿವರ್ಯರು ನಿಜಾಶ್ರಮದಲ್ಲಿ ಶಿಷ್ಯವರ್ಗದವರಿಗೆ ತತ್ವಬೋಧನೆಯನ್ನು ಮಾಡುತ್ತಾ ಕುಳಿತಿದ್ದರು. ಆಗ ಈರ್ವರು ಪುರುಷರು ತಲೆದೋರಿ, ರಿಸಿಗೆ ಮಣಿದು ಕೈಮುಗಿದು ನಿಂತುಕೊಂಡರು. ಅಗಸ್ತ್ಯನು ದಿವ್ಯ ಜ್ಞಾನದೃಷ್ಟಿಯಿಂದ ಅವರ ಪೂರ್ವೋತ್ತರಗಳನ್ನು ತಿಳಿದು-"ನೀವಾರು? ನೀವು ಬಂದ ಕಾರಣವೇನು'' ಎಂದು ಪ್ರಶ್ನಿಸಿದನು. ಆಗಲಾ ಪುರುಷರು-"ನಾವಿಬ್ಬರು ಸಹೋದರರು. ನಮ್ಮ ತನುವನ್ನು ಯಾವಾಗಲೂ ಋಷಿಸೇವೆಯಲ್ಲಿಯೇ ಕಳೆದಿರುವೆವು. ಬ್ರಾಹ್ಮಣೋತ್ತಮರ ಸೇವೆಯೆಂದರೆ ನಮಗೆ ಶ್ರೇಯೋದಾಯಕವು ನಮ್ಮ ಹೆಸರು ಇಲ್ವಲ ಮತ್ತು ವಾತಾಪಿ. ಆದ್ದರಿಂದ ತಮ್ಮ ದಿವ್ಯ ಪಾದಸೇವೆಮಾಡಿ ತಮ್ಮನ್ನು ನೋಡಿ ಹೋಗಲು ಬಂದಿರುವೆವು" ಎಂದರು.

ಇಲ್ವಲ ಮತ್ತು ವಾತಾಪಿಯ ಹೆಸರನ್ನು ಕೇಳಿ ಅಲ್ಲಿ ನೆರೆದಿದ್ದ ಶಿಷ್ಯಮಂಡಲಿಯು ನಿಶ್ಚೇಷ್ಟಿತವಾಯಿತು. ಸಾವು ಸನ್ನಿಹಿತವಾಯಿತೆಂದು ಒಬ್ಬರ ಮುಖವನ್ನೊಬ್ಬರು ನೋಡಿದರು. ಆಗ ಅಗಸ್ತ್ಯನು ಸಂಕೇತದಿಂದ ಭೀತಿಪಡೆಯದಿರುವಂತೆ ತಿಳುಹಿ ಅತಿಥಿಗಳನ್ನು ಕುಳ್ಳಿರಲು ಹೇಳಿ ಅವರನ್ನು ಯೋಗ್ಯರೀತಿಯಲ್ಲುಪಚರಿಸಿ, ತತ್ವಬೋಧಪರಾಯಣನಾದನು. ಅವರಿಬ್ಬರೂ ಪುರಾಣೇತಿಹಾಸ ಕಥಾಶ್ರವಣದಲ್ಲಿಯೇ ಮಗ್ನರಾದರು. ತುಸು ಹೊತ್ತು ಕಳೆದನಂತರ, ಅವರಿಬ್ಬರು ಅಸುರರು ಎದ್ದುನಿಂತು, ಕೈಜೋಡಿಸಿ "ಮಹಾಸ್ವಾಮಿ, ತಮ್ಮ ಪುರಾಣಕಥೆಯನ್ನು ಕೇಳಿ ಪುನೀತರಾದೆವು. ತಮ್ಮ ತತ್ವಬೋಧಾಮೃತವನ್ನು ಸವಿದು

ಮೋಕ್ಷ ಸುಖವನ್ನು ಪಡೆದೆವು. ಆದರೆ ನಮ್ಮದೊಂದು ಬಿನ್ನಹವಿದೆ. ಲಾಲಿಸಬೇಕು" ಎಂದರು. ಮುನಿವರ್ಯನು ಹುಸಿ ನಗುತ್ತಾ, "ನಿರಾತಂಕವಾಗಿ ಹೇಳಬಹುದು" ಎಂದನು. ಅವರು ಒಡನೆ ಧೈರ್ಯತಾಳಿ, ತಮ್ಮ ಆತಿಥ್ಯವನ್ನು ನಾವೆಂದೂ ಮರೆಯಲಾರೆವು ತಾವೂ ನಮ್ಮ ಮನೆಗೆ ದಯಮಾಡಿಸಿ ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕು. ನಾಳೆಯೇ ತಾವು ಬರೋಣಾದರೆ ನಾವು ಪರಮ ಧನ್ಯರಾಗುವೆವು" ಎಂದರು. ಅಗಸ್ತ್ಯನು ಆನಂದದಿಂದ ತುಳುಕುತ್ತಾ ಅವರ ಆಮಂತ್ರಣವನ್ನು ಸ್ವೀಕರಿಸಿ ಅವರನ್ನು ಬೀಳ್ಕೊಟ್ಟನು.

ಮರುದಿವಸ ಅಗಸ್ತ್ಯನು ಶಿಷ್ಯವೃಂದದೊಡನೆ, ದಂಡಕಾರಣ್ಯದ ಮಧ್ಯದಲ್ಲಿ ಸುರಲೋಕದಂತೆ ದೇದೀಪ್ಯಮಾನವಾಗಿ ಹೊಳೆಯುತ್ತಿದ್ದ ವಾತಾಪಿ ನಗರವನ್ನು ಸೇರಿದನು. ಇಲ್ವಾಲನೂ ವಾತಾಪಿಯೂ ತಕ್ಕ ಸನ್ಮಾನದಿಂದ ಮುನಿವರ್ಯನನ್ನು ಕರೆದೊಯ್ದು, ಉಚಿತಾಸನವನ್ನಿತ್ತು ಮಹಾಭಕ್ತರಂತೆ ನಟಿಸಿದರು. ಅನಂತರ ವಾತಾಪಿಯು ಕಣ್ಮರೆಯಾದನು. ಇಲ್ವಾಲನೇ ಅತಿಥಿಗಳನ್ನು ಸವಿಯಾದ ಮಾತುಗಳಿಂದ ಉಪಚರಿಸುತ್ತಿದ್ದು ಮಧ್ಯಾಹ್ನದ ಸಮಯವಾಗಲು ಅವರೆಲ್ಲರೂ ಸ್ನಾನಾದಿ ನಿತ್ಯಕರ್ಮಗಳನ್ನು ಮುಗಿಸಿ ಬರಹೇಳಿ ತಾನು ಮನೆಯೊಳಗೆ ಹೋದನು. ಅತ್ಯಲ್ಪ ಕಾಲದಲ್ಲಿಯೇ ಅತಿಥಿಗಳು ಸಮೀಪದ ನದಿಯನ್ನೈದಿ ತಮ್ಮ ನಿತ್ಯಕರ್ಮಗಳನ್ನು ತೀರಿಸಿಕೊಂಡು ಬಂದರು

ಇಲ್ವಾಲನು ಅವರನ್ನೆಲ್ಲಾ ಕರೆತಂದು ಯೋಗ್ಯವಾದ ಪೀಠದಲ್ಲಿ ಕುಳ್ಳಿರಿಸಿ, ಉದ್ದವಾದ ಬಾಳೆಯೆಲೆಗಳಲ್ಲಿ ಪಕ್ವಾನ್ನಗಳನ್ನೂ ಬಗೆಬಗೆಯ ತಿಂಡಿಗಳನ್ನೂ, ಮಾಂಸಗಳನ್ನೂ ಬಡಿಸಿದನು. ಆಗಲಾ ಋಷಿವರ್ಯನ ಮಾತಿನಂತೆ ಅವನ ಪರಿವಾರವೆಲ್ಲವೂ ಬಡಿಸಿದ ದ್ರವ್ಯಗಳನ್ನೆಲ್ಲಾ ತಿಂದು ತೇಗಿದರು. ಹೊಟ್ಟೆ ತುಂಬಾ ಭುಂಜಿಸಿದ ನಂತರ ಅತಿಥಿಗಳು ಕೈತೊಳೆದು ಸುಖೋಪವಿಷ್ಟರಾಗಿ ಮಂಡಿಸಿದರು. ಅಗಸ್ತ್ಯನಾಗ ಇಲ್ವಾಲನನ್ನು ಕರೆದು "ವಾತಾಪಿಯನ್ನು ಕಾಣದೆ ಬಹಳ ಹೊತ್ತಾಯಿತು. ಅವನನ್ನು ಕರೆಯುಕಳುಹು" ಎಂದು ಹೇಳಿದನು. ಇಲ್ವಾಲನು ಹುಸಿ ನಗುತ್ತಾ, "ವಾತಾಪಿಯು ಈಗಲೇ ಬರುವನು ಒಳಗಿರಬೇಕು. ಈಗಲೇ

ಕರೆಯುವೆನು" ಎಂದು ಹೇಳಿ 'ವಾತಾಪಿಯೇ ಬಾ' ಎಂದನು. ಆದರೆ ವಾತಾಪಿ ಸುಳಿವೇ ಕಾಣಲಿಲ್ಲ ಅಗಸ್ತ್ಯನು ಹಸನ್ಮುಖನಾದನು 'ಇಲ್ವಾಲನು ನಿರ್ವಿಣ್ಣನಾದನು. ಅವನ ಕಣ್ಣುಗಳು ಕೆರಳಿದವು. ಅವನು ಸುತ್ತುಮುತ್ತು ನೋಡುತ್ತಾ ಪುನಃ 'ವಾತಾಪಿಯೇ ಬಾ' ಎಂದು ಕೂಗಿದನು. ಅಗಸ್ತ್ಯನದನ್ನು ಕೇಳಿ ನಸುನಕ್ಕು 'ಎಲೈ ಕಪಟಿಯೇ, ನಿನ್ನ ರಹಸ್ಯವೆಲ್ಲವೂ ಬಯಲಾಯಿತು. ಅನೇಕಾನೇಕ ಬ್ರಾಹ್ಮಣರ ಹೊಟ್ಟೆಯನ್ನು ಸೀಳುತ್ತಿದ್ದ ವಾತಾಪಿಯು ಇಂದು ಬ್ರಾಹ್ಮಣರ ಜಠರಾಗ್ನಿಯಲ್ಲಿ ಭಸ್ಮೀಭೂತನಾದನು.' ಎಂದು ಮೋರೆಯನ್ನು ಕಪ್ಪುಮಾಡಿ ಹೇಳಿದನು. ಈಗ ಇಲ್ವಾಲನಿಗೆ ಸಹಿಸಲಸದಳವಾದಷ್ಟು ಸಂಕಟವುಂಟಾಯಿತು. ಶೋಕವೂ ಕೋಪವೂ ಒಮ್ಮೆಗೇನೇ ಅವನ ಶರೀರವನ್ನು ತುಂಬಿದವು. ಅವನು ಔಡು ಕಚ್ಚುತ್ತಾ 'ಪ್ರಮಾದವಾಯಿತು, ಪ್ರಮಾದವಾಯಿತು' ಎಂದೆಂದು ತನ್ನ ಸೊಂಟದಲ್ಲಿದ್ದ ಕಠಾರಿಯನ್ನು ಒರೆಯಲ್ಲಿ ಹಿರಿದು ಮುನಿಯನ್ನಿರಿಯಲು ಬರಲಾಗ ಆ ಮುನಿಯು ಕಿರುಬೆರಳಿನಲ್ಲಿದ್ದ ಒಂದು ಗರಿಕೆ ಹುಲ್ಲನ್ನು ಮಂತ್ರಿಸಿ ಎಸೆಯಲು ಇಲ್ವಾಲನು ವಟವೃಕ್ಷವು ಮಾರುತನಿಂದ ಹತವಾಗಿ ಬೀಳುವಂತೆ ನೆಲಕ್ಕೆ ಬಿದ್ದನು. ಕಳೆಗುಂದಿದ ಪರಿವಾರವೆಲ್ಲವೂ ಜಯಘೋಷವನ್ನುಂಟುಮಾಡಿತು.

ಆಗ ಶಿಷ್ಯವರ್ಗವು ವಾತಾಪಿಯೆಲ್ಲಿರುವನೆಂದು ಕೇಳಲು ಮುನಿಯು 'ಈ ಇವರೀರ್ವರು ಮಹಾದುಷ್ಟರಾಗಿ ವೇದಾಂತ ಮತಪ್ರಸಾರಕ್ಕೆ ಅಡ್ಡಿಯನ್ನು ತಂದಿಡುತ್ತಿದ್ದರು. ಇವರು ದೈತ್ಯ ಕುಲೋತ್ಪನ್ನರಾಗಿ ದೇವತೆಗಳನ್ನು ಹಿಂಸಿಸುವುದೇ ಇವರ ಮುಖ್ಯ ಕರ್ತವ್ಯವಾಗಿತ್ತು. ವಾತಾಪಿ ಇಲ್ವಾಲರೆಂದು ಹೆಸರುವಾಸಿಗೊಂಡಿದ್ದ ಈ ಅಸುರರಲ್ಲಿ ಎರಡನೆಯವನಾದ ವಾತಾಪಿಯು ತಪಸ್ಸಿನಲ್ಲಿ ರುದ್ರನನ್ನು ಮೆಚ್ಚಿಸಿ ತಾನು ತುಂಡುತುಂಡಾದರೂ ಪುನಃ ಜೀವಂತನಾಗುವಂಥ ಶಕ್ತಿಯನ್ನು ಪಡೆದಿದ್ದನು. ಈ ಇಲ್ವಾಲನು ದಾರಿಹೋಕರನ್ನೂ ಬ್ರಾಹ್ಮಣರನ್ನೂ ವೇದಧರ್ಮಾವಲಂಬಿಗಳನ್ನೂ ಅತಿಥಿಸತ್ಕಾರದ ನೆವದಿಂದ ಮನೆಗೆ ಕರೆತಂದು, ವಾತಾಪಿಯನ್ನು ಮೇಕೆಯನ್ನಾಗಿ ಮಾಡಿ ಅವನನ್ನು ತುಂಡು ಮಾಡಿ, ಪಕ್ವಮಾಡಿದ ಮಾಂಸವನ್ನು ಅವರಿಗೆಲ್ಲಾ ಬಡಿಸಿ ಭೋಜನವಾದ ನಂತರ,

"ವಾತಾಪಿಯೇ ಇಲ್ಲಿ ಬಾ" ಎಂದು ಕರೆಯುತ್ತಿದ್ದನು  ಕೂಡಲೇ ವಾತಾಪಿಯು ಹೊಟ್ಟೆಯನ್ನು ಸೀಳಿ ಹೊರಬೀಳುತ್ತಿದ್ದನು. ಇಂದಿಗವರ ಅತಿಸಾರದ ಶೂಲೆಯುಡಗಿತು. ಅವರ ಹಾವಳಿಯು ಭೂಲೋಕದಲ್ಲಿ ಅಡಗಿತು" ಎಂದನು. ಕೂಡಲೇ ಶಿಷ್ಯರು "ಅಯ್ಯೋ! ನರಭಕ್ಷಕರಾಗಿ ನಾವಿಂದು ಮಹಾಪಾಪವನ್ನು ಮಾಡಿದೆವು" ಎಂದು ಅಳುತಿರಲು ಅಗಸ್ತ್ಯನು ಅವರನ್ನು ಸಂತೈಸಿ ನಾವೀಗ ಪಶ್ಚಿಮಾಂಬುಧಿಯನ್ನು ಸೇರಿ ಸ್ನಾನ ಮಾಡಿ ಈಶ್ವರ ಲಿಂಗವನ್ನು ಉಪಾಸಿಸಿದರೆ ನಮ್ಮ ಪಾಪವೆಲ್ಲವೂ ಅಡಗುವುದು ಎಂದನು. ಹಾಗೆಯೇ ಅವರೆಲ್ಲರೂ ಪಡುಗಡಲನ್ನು ಸೇರಿ, ಸ್ನಾನಾದಿಗಳನ್ನು ಮುಗಿಸಿದರು. ಅಗಸ್ತ್ಯನು ಮಳಲಲಿಂಗವನ್ನು ಮಾಡಿ ಈಶ್ವರಪೂಜೆಯನ್ನು ಗೈದನು. ಆಗಲಾ ವರುಣನ ತೆರೆಗಳು ಬಂದು ಆ ಮಳಲ ಲಿಂಗವನ್ನು ನಾಮಾವಶೇಷವನ್ನಾಗಿ ಮಾಡಿದವು. ಅಗಸ್ತ್ಯನು ತಾಳ್ಮೆಯಿಂದ ಪುನಃಪುನಃ ಲಿಂಗವನ್ನು ಪ್ರತಿಷ್ಠಿಸಿ ಪೂಜೆಮಾಡುತ್ತಿರಲು ಪುನಃಪುನಃ ಅಲೆಗಳು ಅವನ್ನು ಹಾಳುಮಾಡಿದವು. ಆಗ ಅಗಸ್ತ್ಯನ ತಾಳ್ಮೆಯು ಮೇರೆವರಿಯಿತು. ಅವನು ರೌದ್ರಾವೇಶವನ್ನು ತಾಳಿ, ಸಮುದ್ರವನ್ನೇ ಹೀರಿಬಿಟ್ಟು ತನ್ನ ಪೂಜೆಯನ್ನು ವಿಧಿಪ್ರಕಾರವಾಗಿ ಮುಗಿಸಿದನು.

ಆಗ ಸಮುದ್ರದಲ್ಲಿದ್ದ ಜೀವರಾಶಿಗಳು ನೀರಿಲ್ಲದೆ ಕಳವಳಪಟ್ಟವು. ಅಬ್ಧಿ ಜಾತಿಯುವುಗಳೆಲ್ಲಾ ಮಡಿದುಹೋದವು. ಆ ಸಮುದ್ರದಲ್ಲಿ ಅಡಗಿದ್ದ ಬಾಡಬಾನಲವು ಹೊರಬಿದ್ದಿತು. ಲೋಕವೆಲ್ಲವೂ ಪ್ರಳಯಕಾಲದ ದಿನದಂತೆ ನಡುಗಲಾರಂಭಿಸಿತು. ಆಗ ವರುಣನು ವಿಷ್ಣುವಿಗೆ ದೂರು ಹೇಳಲು ಅವನು ಈಶ್ವರನೊಡನೆ ಅಗಸ್ತ್ಯನ ಬಳಿಗೆ ಬಂದು ಲೋಕದ ಸ್ಥಿತಿಯನ್ನು ವರ್ಣಿಸಿ, ಜಂತುರಾಶಿಗಳನ್ನು ರಕ್ಷಿಸಬೇಕೆಂದು ಕೇಳಿಕೊಂಡನು. ಈಶ್ವರನು ತನ್ನ ಶಿಷ್ಯನ ಅಗಾಧವಾದ ಮಹಿಮೆಗೆ ಮೆಚ್ಚಿ, ಅನೇಕಾನೇಕ ವರಗಳನ್ನು ಪರಿಪಾಲಿಸಿದನು. ವಿಷ್ಣುವು ಸಾಯುಜ್ಯ ಪದವಿಯನ್ನು ಅವನಿಗಿತ್ತು ಚಿರಂಜೀವಿಯಾಗಿ ಭಾರತವರ್ಷದಲ್ಲಿರಬೇಕೆಂದು ಹೇಳಿದನು.

ಆಗ ಅಗಸ್ತ್ಯನು ಸಮುದ್ರದ ಮಧ್ಯದಲ್ಲಿ ಮನೆ ಮಾಡಿಕೊಂಡಿದ್ದು ಭೂಲೋಕವನ್ನು ರಾತ್ರಿ ತೊಂದರೆಪಡಿಸುತಿದ್ದ ಪಿಶಾಚರೆಂಬ ದೈತ್ಯರ

ಪಟ್ಟಣವನ್ನು ವಿಷ್ಣುವಿಗೆ ತೋರಿಸಿದನು ಒಡನೆ ವಿಷ್ಣುವು ತನ್ನ ಚಕ್ರವನ್ನು ಬಿಟ್ಟು ಆ ದೈತ್ಯರನ್ನು ಆರಿದನು. ಆ ದೈತ್ಯರಾದರೋ ದಿವ್ಯದೇಹವನ್ನು ಧರಿಸಿ, ಈ ವಿಷ್ಣುವನ್ನು ಹೊಗಳುತ್ತಾ ದೇವಲೋಕಕ್ಕೆ ನಡೆದರು. ಅನಂತರ ತಾನು ಹೀರಿದ ಸಮುದ್ರವನ್ನು ಕಿವಿಯೊಳಗಿಂದ ನಿಧಾನವಾಗಿ ಬಿಟ್ಟನು. ಭೂಲೋಕವು ಆನಂದದಿಂದ ತುಂಬಿತು ಈಶ್ವರಾದಿಗಳು ಅಂತರ್ಧಾನರಾದರು. ಅಗಸ್ತ್ಯನು ತನ್ನ ವೇದಧರ್ಮವನ್ನು ಪ್ರಚುರಗೊಳಿಸುತ್ತಾ, ದಕ್ಷಿಣ ದಿಕ್ಕಿಗೆ ಹೊರಟನು.

## ಅಗಸ್ತ್ಯಾಗಮನ

ಕಾವೇರಿಯು ತತ್ವಶಾಸ್ತ್ರ ಪಾರಂಗತಳೆಂಬ ಖ್ಯಾತಿಯು ಅಷ್ಟದಿಕ್ಕುಗಳಲ್ಲಿಯೂ ಹಬ್ಬಿತು. ವೇದ ಶಾಸ್ತ್ರ ಪಾಂಡಿತ್ಯವನ್ನು ಹೊಂದಿದ್ದ ಋಷಿಗಳು ಆವಳ ಬಳಿಗೆ ಬಂದು, ಅವಳ ಅಮೋಘವಾದ ಭಾಷಣಗಳನ್ನು ಅಪ್ರಮೇಯವಾದ ವಾಕ್ಚಾತುರ್ಯವನ್ನು ನೋಡಿ ಬೆರಗಾಗಿ ಹೋಗುತಿದ್ದರು. ಕಾವೇರಾಶ್ರಮವು ರಾಜಸ್ಥಾನದಂತೆ ಭೂಸುರರಿಂದಲೂ, ವಿದ್ವಾಂಸರಿಂದಲೂ, ಪಂಡಿತರಿಂದಲೂ, ಕಳೆಪುಗೊಂಡಿತು. ಆದರೂ ಕಾವೇರಿಯು ತನ್ನ ಮಾತಾಪಿತೃಗಳ ಸೇವೆಯನ್ನು ಯಥಾರೀತಿಯಾಗಿ ಮಾಡುತ್ತಿದ್ದಳಲ್ಲದೆ, ನೆರೆಹೊರೆಯ ಸ್ತ್ರೀಯರ ಸಂಗಡವೂ ಅತಿ ವಿನಯದಿಂದ ನಡಕೊಳ್ಳುತ್ತಿದ್ದಳು.

ಆಗ ಆವಳಿಗೆ ತುಂಬಿದ ಯೌವನ. ತಪಸ್ಸಿನಲ್ಲಿ ಬಳಲಿಸಿದ್ದರೂ ದೇಹವು ಪುತ್ಥಳಿಚಿನ್ನವು ಬೆಂಕಿಯ ಸಂಪರ್ಕದಿಂದ ಮತ್ತಷ್ಟು ಕಳೆಯೇರುವಂತೆ ಇನ್ನಷ್ಟು ಹೊಳಪುಗೊಂಡು ಶುದ್ಧ ಕಾಂಚನ ಗೌರವವರ್ಣದಿಂದ ಶೋಭಿಸುತ್ತಿತ್ತು. ತಾವರೆ ಹೂವಿನಂತೆ ಬಟ್ಟುಕಾರದ ಮುಖ, ತೊಂಡೆಹಣ್ಣಿನ ಬಣ್ಣವನ್ನು ಹೀರಿದ ಕೆಂದುಟಿಗಳು, ಭ್ರಮರದಂತೆ ಕಪ್ಪಾದ ಹೆರಳು, ಬಿಲ್ಲಿನಂತೆ ಬಗ್ಗಿದ ಹುಬ್ಬುಗಳು, ಕರಿ ನೀಲಿಮಣಿಯಂತೆ ಶೋಭಿಸುತ್ತಿದ್ದ ಕಣ್ಣುಗಳು, ಚಿನ್ನದಂತೆ ಹೊಳೆಯುತ್ತಿದ್ದ ಕೆನ್ನೆಗಳು, ಕೋಮಲವಾದ ಕತ್ತು, ಬಟ್ಟುಕಾರದ ನಿತಂಬಗಳು, ಕಿರಿದಾದ ನಡು ಪ್ರೇಕ್ಷಕರನ್ನೇ ಮರುಳುಗೊಳಿಸುತ್ತಿದ್ದವು. ಅವಳು ನಿತ್ಯವೂ

ಮೊದಲಿನ ಝಾಮದಲ್ಲಿದ್ದು ಸ್ನಾನಸಂಧ್ಯಾವಂದನಾದಿ ಕರ್ಮಗಳನ್ನು ಮುಗಿಸಿ ಹೆರಳುಹಾಕಿ, ಸೊಗಸಾದ ನಾರುಶೀರೆಯನ್ನು ರಿಸಿಪತ್ನಿಯರಂತೆ ಧರಿಸಿ ಪುಷ್ಪಗಂಧಾದಿಗಳಿಂದ ಅಲಂಕೃತಳಾಗಿ, ಮಾತಾಪಿತೃಗಳಿಗೆರಗಿ, ತನ್ನ ಗೆಳತಿಯರಿಗೆ ಮುಖ ತೋರುವಳು. ನಾರುಶೀರೆಯಿಂದ ಆಚ್ಛಾದಿಸಲ್ಪಟ್ಟ ಕುಚಗಳಾಗ ಇನ್ನಷ್ಟು ಬಟ್ಟಾಕಾರವಾಗಿ ತೋರಿ ಮುನಿಗಳನ್ನು ಸಹ ಮೋಹಗೊಳಿಸುವಂತೆ ತೋರುವವು ಅವಳ ಹಸನ್ಮುಖ, ಕಿರುನಗು ಶುಕನನ್ನು ಸಹ ಬೆರಗುಗೊಳಿಸುವಂತಿತ್ತು.

ಒಂದು ದಿನ ಪ್ರಾತಃಕಾಲ ಕಾವೇರಿಯು ವಸಿಷ್ಠಾದಿ ಮುನಿವರ್ಯರ ಸಮೀಪ ಕುಳಿತು ವೇದಾಧ್ಯಯನ ಮಾಡುತ್ತಿದ್ದಳು. ಮಿಕ್ಕ ತಾಪಸರು ಅವಳ ವಿಮರ್ಶೆಯನ್ನು ಕೇಳುತ್ತಾ ಕುಳಿತಿದ್ದರು. ಆಗ ಓರ್ವ ತಾಪಸೋತ್ತಮನು ಈಶ್ವರನಾಮವನ್ನು ಜಪಿಸುತ್ತಾ ಆ ಹಾದಿಗಾಗಿ ನಡೆತಂದನು. ಅವನು ಎತ್ತರದಲ್ಲಿ ಕುಳ್ಳ; ಆದರೆ ಆಜಾನುಬಾಹು, ಸ್ಥೂಲದೇಹ, ಆದರೆ ವೇಗಗಾಮಿ. ಅವನ ಮೈಯಲ್ಲಿ ವಿಭೂತಿ, ಕೈಯಲ್ಲಿ ದಂಡಕಮಂಡಲು; ಕಂಕುಳಲ್ಲಿ ಕೃಷ್ಣಾಜಿನ, ಹೆಗಲಲ್ಲಿ ಯಜ್ಞೋಪವೀತ, ಮುಖದಲ್ಲಿ ಬಾಲ ಸೂರ್ಯನಂತೆ ಪ್ರಕಾಶಮಾನವಾದ ಕಣ್ಣುಗಳು, ಭೂಲೋಕವನ್ನು ಸುಟ್ಟುಬಿಡುವವೋ ಎಂಬಂತೆ ತೋರುತಿದ್ದವು. ಅವನ ಅಟ್ಟಹಾಸವು ರುದ್ರನ ವಿಲಾಸವನ್ನೂ ಜರಿಯುತ್ತಿತ್ತು. ಅವನ ಹಿಂಗಡೆ ಅನೇಕ ಮಂದಿ ಶಿಷ್ಯರು ಶಿವನಾಮಧ್ಯಾನ ಮಾಡುತ್ತ ನಡದುಬರುತ್ತಿದ್ದರು.

ಆ ತರುಣ ಋಷಿಯು ವಸಿಷ್ಠಾಶ್ರಮದ ಮುಂಗಡೆ ನಿಂತನು. ಕೂಡಲೆ ವಸಿಷ್ಠನು ತನ್ನ ಶಿಷ್ಯರನ್ನು ಕಳುಹಿಸಿ ಕರಸಿಕೊಂಡು, ಆಶ್ರಮಕ್ಕೆ ಕರದೊಯ್ದು ಮಧುಪರ್ಕಾದಿಗಳನ್ನಿತ್ತು ದರ್ಭಾಸನದ ಮೇಲೆ ಕುಳ್ಳಿರಿಸಿದನು. ಅನಂತರ ಅಲ್ಲಿ ನೆರೆದಿದ್ದ ಸಮಸ್ತ ಋಷಿವರ್ಯರನ್ನು ಕುರಿತು, ವಸಿಷ್ಠನು ಮಿತ್ರರೇ ಈತನೇ ಅಗಸ್ತ್ಯನು, ಸಾಕ್ಷಾತ್ ರುದ್ರನ ಅವತಾರಿಯು—ಎಂದು ವರ್ಣಿಸಿದನು. ಅಲ್ಲಿ ನೆರೆದಿದ್ದವರೆಲ್ಲರೂ ಅಗಸ್ತ್ಯನಿಗೆ ನಮಸ್ಕರಿಸಿ ತಂತಮ್ಮ ಸ್ಥಾನದಲ್ಲಿ ಕುಳಿತುಕೊಂಡರು. ಕಾವೇರಿಯು ವಸಿಷ್ಠನ ಪಕ್ಕದಲ್ಲಿಯೇ ಕುಳಿತುಕೊಂಡಳು. ಅವಳ ಕಣ್ಣುಗಳು ಅಗಸ್ತ್ಯನ ಕಣ್ಣುಗಳನ್ನು ಸಂಧಿಸಿದುವು. ಅವಳ ತಲೆಯು ಬಾಗಿತು, ಕಿರುಬೆವರು

ಅವಳ ಮುಖದಲ್ಲಿ ಸುರಿಯಿತು. ಒಂದೇ ಸವನೆ ಲಜ್ಜೆಯೂ ರೋಮಾಂಚನವೂ ಅವಳಲ್ಲಿ ತಲೆದೋರಿದುವು. ಆ ಅಗಸ್ತ್ಯನಿಗಾದರೋ. ಕಾವೇರಿಯನ್ನು ನೋಡಿದೊಡನೆ ಮನಸ್ಸು ಚಂಚಲವಾಯಿತು. "ಇದೇನು! ಮನ್ಮಥನನ್ನು ಅಸಾಧ್ಯವಾದ ಯೋಗಾಭ್ಯಾಸಗಳಿಂದ ಜಯಿಸಿದರೂ ಈ ಮುನಿಕುವರಿಯನ್ನು ನೋಡಿ ನನಗೀಗ ಚಿತ್ತಭ್ರಮೆಯಾಗಿರುವುದು" ಎಂದು ತನ್ನೊಡನೆ ತಾನೇ ಅಂದುಕೊಂಡನು.

ಆಗ ವಸಿಷ್ಠನು—"ತಾಪಸೋತ್ತಮನಾದ ಅಗಸ್ತ್ಯನೇ ಇದೋ ಈಕೆಯೇ ಕಾವೇರಿಯು—ಸಕಲ ವೇದಶಾಸ್ತ್ರಾಧ್ಯಯನದಲ್ಲಿಯೂ, ಯೋಗಾಭ್ಯಾಸಗಳಲ್ಲಿಯೂ ನುರಿತು, ತಪೋಮಹಿಮೆಯಿಂದ ಅಜನನ್ನೂ ಭಗವಂತನನ್ನೂ ಒಲಿಸಿ ತನ್ನಿಷ್ಟಸಿದ್ಧಿಮಾಡಿಕೊಂಡು ಸ್ತ್ರೀಯರ ಉನ್ನತಿಗೆ ಮೇಲುಪಜ್ಞೆಯನ್ನು ಹಾಕಿರುವ ಸಾಧ್ವೀಮಣಿಯೇ ಈಕೆಯು. ಸ್ತ್ರೀಯರಲ್ಲಿ ಈಕೆಯು ಮಹಾಚತುರೆಯೂ, ವಿದ್ಯಾವತಿಯೂ, ಷಡಂಗಗಳನ್ನೂ ಷಡ್ಭಾಷೆಗಳನ್ನೂ ಅರಿತವಳು. ಸ್ತ್ರೀಯರಿಗೆ ಈಕೆಯು ರತ್ನಪ್ರಾಯಳು. ಈಕೆಯ ತರ್ಕವಿಚಾರವನ್ನೂ ವೇದಮರ್ಮವನ್ನೂ ಕೇಳಲೇಬೇಕು" ಎಂದನು.

ವಸಿಷ್ಠನು ಕಾವೇರಿಯನ್ನು ಹೊಗಳುತ್ತಿರಲು ಅಗಸ್ತ್ಯನ ಕಣ್ಣುಗಳು ಕಾವೇರಿಯ ಕಣ್ಣುಗಳನ್ನೆದುರಿಸಿದುವು. ಅವನ ಹೃದಯವು ಅವಳ ಹೃದಯದಲ್ಲಿ ನೆಲಸಿತು. ಈರ್ವರೂ ಕಿರುನಗು ನಕ್ಕರು. ಕಾವೇರಿಯು ತನ್ನ ಮುಖದಿಂದ ಮುತ್ತಿನಂತೆ ಉರುಳುತ್ತಿದ್ದ ಬೆವರಿನ ಹನಿಗಳನ್ನು ಒರಸಿಕೊಂಡು, ಎಲ್ಲಾ ಮುನಿಗಳಿಗೂ ಅಭಿನಂದಿಸಿ ವೇದಮರ್ಮವನ್ನು ವಿವರಿಸಲಾರಂಭಿಸಿದಳು. ಅವಳ ತಾರ್ಕಿಕ ಪ್ರೌಢಿಮೆ, ವೇದೋಪನಿಷತ್ತುಗಳ ಪರಿಚಯಜ್ಞಾನವನ್ನು ಕೇಳಿ ಅಗಸ್ತ್ಯನು ಬೆರಗಾಗಿ ಹೋದನು. ನಡುನಡುವೆ ತಾನೂ ತರ್ಕಮಾಡಲು ಕಾವೇರಿಯು ತನ್ನ ಅಪಾರವಾದ ಜ್ಞಾನಸಾಗರದಲ್ಲಿ ಅವನನ್ನು ಮುಳುಗಿಸಿಬಿಟ್ಟಳು. ಅಗಸ್ತ್ಯನು ತರ್ಕಶಾಸ್ತ್ರದಲ್ಲಿ ಸೋತನು. ಅಲ್ಲದೆ ಅವಳಲ್ಲಿ ಸಂಪೂರ್ಣವಾಗಿ ಮನಸೋತನು. ಕಾವೇರಿಗಾದರೋ ಅಗಸ್ತ್ಯನ ಸವಿಮಾತುಗಳನ್ನು ಕೇಳಿ ಅತ್ಯಾನಂದವಾಯಿತು. ಅವಳಿನ್ನೂ ಅಗಸ್ತ್ಯನ ಸಂಗಡ ತರ್ಕಮಾಡುತ್ತಾ ಕಾಲ

ಕಳೆಯಬೇಕೆಂದು ಇಚ್ಛಿಸಿದಳು. ಅಷ್ಟರಲ್ಲಿ ಆಹ್ನೀಕ ಸ್ನಾನಾದಿಗಳಿಗೆ ಸಮಯವಾಗುತ್ತಾ ಬರಲು ಸಾಯಂಕಾಲದಲ್ಲಿ ಅತಿ ವೇದನೆಯಿಂದ ಅಗಲುವ ಚಕ್ರವಾಕ ಪಕ್ಷಿಗಳಂತೆ ಕಾವೇರಿಯೂ ಅಗಸ್ತ್ಯನೂ ಅಗಲಿದರು. ವಸಿಷ್ಠನ ಆತಿಥ್ಯವನ್ನು ಸ್ವೀಕರಿಸಿ ಮುನಿಯು ನಿತ್ಯಕರ್ಮಾದಿಗಳನ್ನು ತೀರಿಸಲು ಹೊರಟುಹೋದನು.

ಕಾವೇರಿಯು ವಶಿಷ್ಠಾಶ್ರಮವನ್ನಗಲಿ, ಮೆಲ್ಲಮೆಲ್ಲಗೆ ಹೆಜ್ಜೆಯಿಡುತ್ತಾ ಕವೇರಾಶ್ರಮದ ಕಡೆ ನಡೆದಳು. ಹಿಂದೆ ಬ್ರಹ್ಮಚಾರಿಣಿಯರಿಗೆ ಆದರ್ಶಕಳಾದ ಕಾವೇರಿಯು ಇಂದು ಕಾಮನ ಹೊಯ್ಲಲ್ಲಿ ಸಿಕ್ಕಿಬಿದ್ದಳು. ಅಗಸ್ತ್ಯಋಷಿಯು ಕಣ್ಮರೆಯಾಗುವ ತನಕ ಬಾರಿಬಾರಿಗೂ ಹಿಂದಿರುಗಿ ನೋಡುತ್ತಾ ನಡೆದಳು. ಅಗಸ್ತ್ಯನಿಗಾದರೋ ಅವಳನ್ನೇ ಹಿಂಬಾಲಿಸಬೇಕೆಂಬ ಕುತೂಹಲವು ಹೆಚ್ಚಿತು.

ತನ್ನಾಶ್ರಮವನ್ನು ಸೇರಿ ನಾರೀಮಣಿಯು ಅಗಸ್ತ್ಯನ ಆಗಮನವನ್ನು ತಂದೆಗೆ ತಿಳಿಸಿದಳು. ಕವೇರನು ಕೂಡಲೇ ಮಹದಾನಂದಿತನಾಗಿ ಅಗಸ್ತ್ಯನನ್ನು ನೋಡುವ ಸುಯೋಗವು ದೊರಕಿತೆಂದು ನಲಿದಾಡಿದನು. ತನ್ನ ಪತ್ನಿಗೆ ಒಡನೆ ಅರುಹಿ ಮಹಾಪ್ರತಾಪಿಯಾದ ಅಗಸ್ತ್ಯನನ್ನು ತನ್ನ ಆಶ್ರಮಕ್ಕೆ ಕರಕೊಂಡು ಬರಬೇಕೆಂದು ನಿಶ್ಚಯಿಸಿದನು. ಕಾವೇರಿಗಾ ಮಾತು ಕೇಳಿದ ಕೂಡಲೆ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಮಧ್ಯಾಹ್ನದ ಭೋಜನಾನಂತರ ಕವೇರನು ವಸಿಷ್ಠಾಶ್ರಮವನ್ನು ಸೇರಿ ತನ್ನ ಆತಿಥ್ಯವನ್ನು ಸ್ವೀಕರಿಸಬೇಕೆಂದು ಬೇಡಿಕೊಳ್ಳಲಾ ಅಗಸ್ತ್ಯನು (ಹಿಂದುಮುಂದೆ ನೋಡದೆ) ಪುನರಾಲೋಚನೆ ಮಾಡದೆ ಹೊರಡಲೊಪ್ಪಿದನು.

ಕಾವೇರಿಯಾದರೋ ಸಂತೋಷಭರಿತಳಾಗಿ ಅಗಸ್ತ್ಯನ ಆಗಮನವನ್ನೇ ನಿರೀಕ್ಷಿಸಿಕೊಂಡಿದ್ದಳು. ತನ್ನ ಉದ್ದವಾದ ಕೇಶದಾಮವನ್ನು ಬಾಚಿ ತುರುಬಿಕ್ಕಿ ಪುಷ್ಪಗಳಿಂದಲಂಕರಿಸಿ, ಅಂದವಾದ ಸೀರೆಯನ್ನು ಧರಿಸಿ ಕಸ್ತೂರಿ ತಿಲಕವನ್ನಿಟ್ಟು ಮುತ್ತುಮಾಣಿಕ್ಯಾದಿ ಹಾರಗಳಿಂದಲಂಕೃತಳಾಗಿ ಅವರು ಬರುವ ದಾರಿಯನ್ನೇ ನೋಡುತ್ತಾ ನಿಂತಳು. ಅಷ್ಟರಲ್ಲಿ ಕವೇರನು ಅಗಸ್ತ್ಯನೊಡನೆ ಬಂದನು. ಬಾಗಿಲ ಮರೆಯಲ್ಲಿ ತರುಣ

ಋಷಿಯನ್ನು ನೋಡುತ್ತಾ, ಪ್ರೇಮವನ್ನು ಸೂಸುತ್ತಾ ಕಾದಳು. ಅಗಸ್ತ್ಯನು ಆಶ್ರಮವನ್ನು ಸೇರಿ ಸುಖಾಸೀನನಾಗಿ ಮಂಡಿಸಿದನು. ಕಾವೇರಿಯೇ ಮಧುಪರ್ಕಾದಿಗಳನ್ನು ತನ್ನ ಹೃದಯ ಪ್ರಿಯನಿಗಿತ್ತಳು. ಅಗಸ್ತ್ಯನ ಆನಂದದ ಮೇರೆವರಿಯಿತು. ಅಗಸ್ತ್ಯನು ಕವೇರಾಶ್ರಮದಲ್ಲಿ ಅನೇಕ ದಿನಗಳನ್ನು ಸುಖವಾಗಿ ಕಳೆದನು.

## ಅಗಸ್ತ್ಯ, ಕಾವೇರಿ. (ಪ್ರತಿಜ್ಞೆ)

ಸಾಯಂಕಾಲ ಸಮಯ. ನಿಶಾದೇವಿಯು ಹಳ್ಳಪಳ್ಳಗಳನ್ನು ನುಗ್ಗಿ ದಿನವೆಣ್ಣನ್ನು ಓಡಿಸಹತ್ತಿದಳು. ಪಕ್ಷಿಸಮೂಹವು ಕಿಲಕಿಲನೆ ಇಂಪಾದ ಧ್ವನಿಯಿಂದ ನಿವಾಸದ ಕಡೆಗೆ ಹಾರಿ ಹೋಗುತ್ತಿತ್ತು. ತಣ್ಗದಿರನು ಹೊಸ ಮದುಮಗಳಂತೆ ಆಕಾಶಭಿತ್ತಿಯನ್ನೇರಿ ಮರಕಾಡುಗಳ ಮಧ್ಯೆ ಇಣಿಕಿ ನೋಡುತಿದ್ದನು. ತಣ್ಗದಿರು ವಿರಹಿಗಳಿಗೆ ಕಾಮ ಚಿಂತನೆಯನ್ನುಂಟು ಮಾಡುತ್ತ, ಕಾಮಪೀಡಿತರಿಗೆ ಹೃದಯೋದ್ವೇಗವನ್ನೀಯುತ್ತಾ, ಕವೇರನ ಪರ್ಣಶಾಲೆಯನ್ನು ನುಂಗಿತು. ಕವೇರದಂಪತಿಗಳು ವಸಿಷ್ಠಾಶ್ರಮಕ್ಕೆ ಹೋದವರಿನ್ನೂ ಬಂದಿರಲಿಲ್ಲ. ತರಳೆ ಕಾವೇರಿಯೂ ಅಗಸ್ತ್ಯನೂ ವೇದಿಕೆಯ ಪಕ್ಕದಲ್ಲಿ ಕುಳಿತು ಉಪನಿಷದ್ವಿಚಾರ ತರ್ಕ ಮಾಡುತ್ತಿದ್ದರು.

ವೇದಿಕೆಯ ಬೆಂಕಿಯು ಕವಿಯುವ ಕತ್ತಲಲ್ಲಿ ಪ್ರಕಾಶಮಾನವಾಗಿ ತೋರಿತು. ಕಿಡಿಗಳನ್ನು ಕಾರುತ್ತ, ಜ್ವಾಲೆಯನ್ನೇರಿಸಿ ಸುತ್ತಲಿನ ಸ್ಥಳವನ್ನು ಪ್ರಜ್ವಲಿಸಿತು. ಆಗ ಕೆಂಪಾದ ಜ್ವಾಲೆಯು ಶುದ್ಧ ಕಾಂಚನ ವರ್ಣದಿಂದ ಮೆರೆಯುತಿದ್ದ ಕಾವೇರಿಯ ವದನದ ಮೇಲೆ ಬಿತ್ತು. ಮೊದಲೇ ಸೌಂದರ್ಯದಿಂದ ಹೊಳೆಯುತಿದ್ದ ಮುಖವು ಬೆಂಕಿಯ ಬೆಳಕಿನಲ್ಲಿನ್ನಷ್ಟು ಸೌಂದರ್ಯದಿಂದ ಶೋಭಿಸಿತು. ಎದುರಿನಲ್ಲಿ ಕುಳಿತಿದ್ದ ಅಗಸ್ತ್ಯನೊಮ್ಮೆ ಆ ಕಳಾಯುಕ್ತವಾದ ವದನವನ್ನು ನೋಡಿದನು. ಕೂಡಲೆ ಅವನ ತರ್ಕ ವಿಚಾರವಡಗಿತು. ಅವನ ಹೃದಯದಲ್ಲಿ ಕಾಮ ವೇದನೆಯು ವ್ಯಾಪಿಸಿ, ಅವನ ಮೆಮುಳನ್ನು ಒರಡಾಗಿ ಮಾಡಿತು.

ಕಾವೇರಿಗಾದರೋ ಅವನ ವಿಲಕ್ಷಣವಾದ ವರ್ತನೆಯನ್ನು ನೋಡಿ ಎದೆಯು ಡಬ್ ಡಬ್ಬೆಂದು ಬಡಿಯಿತು.

ಅಗಸ್ತ್ಯನು ಹೃದಯ ವೇದನೆಯನ್ನು ತಡೆಯದಾದನು. ಅವನು ಮಾತಿನಲ್ಲಿ ಮುಂದಾದನು. ಅರ್ಧ ಲಜ್ಜೆಯಿಂದಲೂ, ಅರ್ಧ ನಗುವಿನಿಂದಲೂ, "ಪ್ರಿಯೆ! ನಿನ್ನ ಮಧುರವಾದ ಮಾತುಗಳನ್ನು ಕೇಳಿ ಧನ್ಯನಾದೆನು. ನಿನ್ನ ಸಂಗಡ ಇಷ್ಟು ದಿನ ಸುಖವಿಲಾಸದಿಂದ ಕಾಲಕಳೆದೆನು. ಆದರೆ ನಿನ್ನನ್ನು ಒಂದು ನಿಮಿಷವಾದರೂ ಬಿಟ್ಟಗಲದಂತೆ ನನ್ನ ಮನಸ್ಸು ಪ್ರೇರೇಪಿಸುತ್ತಿರುವುದು" ಎಂದನು.

ಕಾವೇರಿಯು ನಸುನಕ್ಕು ಓರೆಗಣ್ಣಿನಿಂದ ಅವನನ್ನೊಮ್ಮೆ ನೋಡಿ ಸುಮ್ಮನಾದಳು. ಉರಿವ ಬೆಂಕಿಗೆ ತುಪ್ಪವನೆರೆದಂತೆ ಆ ಓರೆ ನೋಟದ ಹೊಳಪು ವಿದ್ಯುತ್ತಿನಂತೆ ಮುನಿಯ ಹೃದಯವನ್ನು ಭೇದಿಸಿತು. ಮುನಿಯು ಮತ್ತೂ ನುಡಿದನು-ಕಾವೇರಿಯೇ, ನಿನ್ನನ್ನು ಪ್ರಿಯೇ ಎಂದು ಸಂಬೋಧಿಸಿದುದಕ್ಕಾಗಿ ಕೋಪವೇ? ನೀನೆನ್ನ ಹೃದಯ ರಮಣಿಯಾಗಿರುವೆ. ಆದ್ದರಿಂದ ನಿನ್ನನ್ನು ಪ್ರಿಯೆಯೆಂದು ಕರೆದಿರುವೆ. ನಿನ್ನ ತರ್ಕಶಾಸ್ತ್ರವು ಅಗಾಧವಾದ ಜ್ಞಾನವನ್ನು ಹೊರಚೆಲ್ಲುವುದಾದರೂ ನಿನ್ನ ಸೌಂದರ್ಯಕ್ಕೆ ತಿಲಾಂಶವೂ ಸರಿಹೋಲದು. ನಾನು ನಿನ್ನನ್ನಂದು ವಸಿಷ್ಠಾಶ್ರಮದಲ್ಲಿ ಕಂಡಾಗ ನಿನ್ನ ಮೃದುವಾಣಿಯನ್ನು ಕೇಳಿ ಮನಸೋತೆನು. ಈಗ ಇಷ್ಟು ದಿವಸಗಳ ಸಂಗದಿಂದ ನಾನು ಖಂಡಿತವಾಗಿಯೂ ನಿನ್ನವನಾಗಿರುವೆನು. ಪ್ರಿಯೇ! ನಿನ್ನ ಮನದಿಚ್ಛೆಯನ್ನರುಹಿ ನನ್ನ ಜೀವನವನ್ನು ಸುಖಪ್ರದವಾಗಿ ಮಾಡು" ಎಂದು ಉದ್ದವಾದ ಭಾಷಣವನ್ನಿತ್ತನು. ಅವನ ಮಾತುಗಳನ್ನು ಸಮಾಧಾನದಿಂದ ಕೇಳಿ, ಲೋಪಾಮುದ್ರೆಯು, "ಮುನಿಯೇ, ನಿನ್ನ ಖ್ಯಾತಿಯನ್ನು ನನ್ನ ಮಾತಾಪಿತೃಗಳ ಬಾಯಿಂದ ಕೇಳಿ, ನಿನ್ನನ್ನೇ ವರಿಸಬೇಕೆಂದು ನಿಶ್ಚಯಿಸಿರುವೆನು. ನನ್ನ ಆಕ್ಷೇಪವಾವುದೂ ಇಲ್ಲ" ಎಂದಳು.

ಅಗಸ್ತ್ಯನಿಗಾಗ ವಿವರಿಸಲಸದಳವಾದಷ್ಟು ಆನಂದವುಂಟಾಯಿತು. ವಿದ್ಯಾ ಪ್ರವೀಣೆಯಾಗಿ, ಸ್ತ್ರೀ ಸಮಾಜಕ್ಕೆ ಮಾರ್ಗದರ್ಶಕಳಾದ ಕಾವೇರಿಯು ತನ್ನನ್ನು ವರಿಸುವಳೆಂದು ತಿಳಿದು ಆನಂದೋತ್ಸಾಹದಿಂದ

ನಲಿದಾಡಿದನು. "ಪ್ರಿಯೇ, ನಿನ್ನ ಮಧುರವಾಣಿಯನ್ನು ಕೇಳಿ ಪಾರವಿಲ್ಲದ ಸಂತೋಷಸಾಗರದಲ್ಲಿ ಮುಳುಗಿರುವೆನು" ಎಂದನು.

ಆ ಕಾವೇರಿಯು—"ಪ್ರಿಯನೇ, ಆದರೆ ನನ್ನದೊಂದು ಪ್ರತಿಜ್ಞೆಯಿರುವುದು. ಅದನ್ನು ಈಡೇರಿಸಿ ಕೊಡುವೆನೆಂದು ಭಾಷೆಯನ್ನೀಯಬೇಕು" ಎಂದು ಹೇಳಿದಳು.

ಅದನ್ನು ಕೇಳಿ ಮುನಿಯು ತುಸು ವಿಚಾರಮಗ್ನನಾದನು. ಋಷಿಪುತ್ರಿಯಾದ ಕಾವೇರಿಯ ಮಹಾಪ್ರತಿಜ್ಞೆಯು ಏನಿರಬಹುದೆಂದು ತುಸು ಚಿಂತಿಸಿ, "ಪ್ರಿಯೇ, ಅದಾವ ಪ್ರತಿಜ್ಞೆಯನ್ನು ಮಾಡಿರುವೆ? ವನವಾಸಿಯಾದ ನಿನಗೆ ಮಹತ್ತಾದ ಕಾರ್ಯವದೇನು ಮಾಡಲ್ಕಿರುವುದು" ಎಂದು ಕೇಳಲಾ ನಾರೀಮಣಿಯು—"ಇನಿಯನೇ, ನಾನು ಹಿಂದೆ ವಿಷ್ಣುವನ್ನೂ ಬ್ರಹ್ಮನನ್ನೂ ಒಲಿಸಿ ವರವನ್ನು ಪಡೆದಿರುವೆನು............ನಾನೀ ಜನುಮವನ್ನು ಭೂಲೋಕದ ಜನರುದ್ಧಾರಕ್ಕಾಗಿಯೇ ಸವೆಯಬೇಕೆಂದು ನಿಶ್ಚಯಿಸಿ ತಪಸ್ಸನ್ನೆಸಗಿದೆ ನನ್ನ ಮನೋಭೀಷ್ಟವು ನೆರವೇರುವುದೆಂದು ಹರಿಹರ ಬ್ರಹ್ಮಾದಿಗಳು ವರವಿತ್ತಿರುವರು" ಎಂದಳು.

ಅದಕ್ಕೇನಡ್ಡಿ, ನಿನ್ನಿಷ್ಟದಂತೆ ನಡೆಯಬಹುದು. ಜನರ ಕಷ್ಟಕ್ಕೆ ನೆರವಾಗುವುದೇ ಪ್ರತಿ ಮಾನವನ ಧ್ಯೇಯವಾಗಿರಬೇಕು" ಎಂದು ಮುನಿಯು ನುಡಿದನು.

ಅದಕ್ಕೆ ಸುಲೋಚನೆಯು—'ಪ್ರಿಯಾ, ಹೊಳೆಯಂತುದಿಸಿ, ಜೀವನವನ್ನು ನದಿರಿಗಿತ್ತು, ಕಲ್ಪಾಂತದ ವರೆಗೆ ಜೀವಕೋಟಿಗೆಲ್ಲಾ ಶಕ್ತಿ ಮುಕ್ತಿಯನ್ನಿತ್ತು ಪಾಲಿಸಬೇಕೆಂದು ನಿಶ್ಚಯಿಸಿ ವರವ ಪಡೆದಿರುವೆನು" ಎಂದಳು. ಆ ಮಾತನ್ನು ಕೇಳಿ ಮುನಿಯ ಮುಖವು ಸಪ್ಪಗಾಯಿತು. ಅವನ ಉತ್ಸಾಹವು ಕುಗ್ಗಿತು. "ಪ್ರಿಯೇ, ನಿನ್ನ ಮಾತನ್ನು ಕೇಳಿ ನಾನು ಕಟ್ಟಿದ್ದ ಮನೆಯೇ ಕುಸಿದು ಹೋಯಿತು. ಪ್ರಿಯೇ, ಕಾವೇರಿ, ನೀನೆಂದಿಗೂ ಹಾಗೆ ಮಾಡದಿರು. ನೀನೇ ನನ್ನ ಹೃದಯವು. ನಿನ್ನನ್ನು ಬಿಟ್ಟಗಲಲೊಲ್ಲದು. ನಿನ್ನನ್ನು ವರಿಸದಿದ್ದರೆ ನಾನು ಜೀವನದಲ್ಲಿಯೇ ನರಕ ಯಾತನೆಯನ್ನನುಭವಿಸುವೆನು. ನಿನ್ನ ವಿದ್ಯಾ ಪ್ರವೀಣತೆಯನ್ನು ಕೇಳಿ ಕಾಶಿಯಿಂದಿಲ್ಲಿಗೆ ನಡೆದು ಬಂದಿರುವೆನು. ಎಲೇ, ಮಧುರವಾಣಿ,

ಹೃದಯರಮಣಿ ನನ್ನನ್ನು ಅಧಃಪತನಕ್ಕೆ ತಳ್ಳದಿರು. ನಿನ್ನಲ್ಲಿ ಪೂರ್ಣ ಮನಸೋತಿರುವೆನು. ನಾನು, ನನ್ನ ದೇಹ, ನನ್ನ ವಿದ್ಯಾಬುದ್ಧಿಗಳೆಲ್ಲವೂ ನಿನ್ನವಾಗಿರುವವು, ನೀ ದಯೆ ತೋರು" ಎಂದು ಬೇಡಿಕೊಂಡನು.

ಕಾವೇರಿಯು ಆ ಸಂಕಟಕರವಾದ ವರ್ತನೆಯನ್ನು ನೋಡಿ, ಕನಿಕರಪಟ್ಟು ಪ್ರಿಯಾ, ಮನಸಿನಲ್ಲಿಯೂ ಕನಸಿನಲ್ಲಿಯೂ ನೀನೇ ನನ್ನ ರಮಣ. ಆದರೆ ನನ್ನ ಪ್ರತಿಜ್ಞೆಯನ್ನೀಡೇರಿಸಲೇಬೇಕು. ಆದರೆ ನೀನೆನಗೆ ಭಾಷೆಯನ್ನೀಯಬೇಕು. ನೀನು ಯಾವಾಗಲೂ ನನ್ನನ್ನಗಲದೆ ನನ್ನ ಸಂಗಡವೇ ಇರುವಿಯೆಂದು ಭಾಷೆಯನ್ನಿತ್ತರೆ ನಾನಿನ್ನನ್ನು ವರಿಸುವೆನು. ಎಂದಿಗೆ ನೀನೆನ್ನನ್ನು ಒಬ್ಬಂಟಿಗಳಾಗಿ ಬಿಡುವಿಯೋ ಅಂದು ನಾನು ನಿನ್ನನ್ನು ಅಗಲುವೆನು. "ನೀನೀಗಲೇ ಈ ವೇದಿಕೆಯ ಮುಂಗಡೆ ಭಾಷೆಯನ್ನಿಡು" ಎಂದಳು.

ಅಗಸ್ತ್ಯನಿಗಾಗ ಜೀವ ಬಂತು. ಹರುಷದಿಂದ ಅವನ ಹೃದಯವು ಹಿಗ್ಗಿತು. ಕೂಡಲೆ, "ಪ್ರಿಯೇ" ನಿನ್ನ ಸಂಗಸುಖವನ್ನು ಬಿಟ್ಟು ಅಗಲುವದೆಂದರೇನು. ನಿನ್ನನ್ನು ಬಿಟ್ಟು ಅರೆಗಳಿಗೆಯಾದರೂ ಇರಲಾರೆನು. ನಿನ್ನ ಸಂಗಡ ಇರುವುದೇ ನನಗೆ ಸ್ವರ್ಗಸುಖವು. ಇಗೋ ಈ ಪ್ರಜ್ವಲಿಸುತ್ತಿರುವ ವೇದಿಕೆಯ ಮುಂಗಡೆ ಭಾಷೆಯನ್ನೀವೆನು. ನಾನೆಂದೂ ನಿನ್ನನ್ನು ಅಗಲೆನು: ಈ ಮಾತಿಗೆ ಈ ವೇದಿಕೆಯೇ ಸಾಕ್ಷಿಯು' ಎಂದು ನುಡಿದನು. ಕಾವೇರಿಯಾಗ ಅಗಸ್ತ್ಯನ ನಿಷ್ಕಾಪಟ್ಯದ ಮುಖವನ್ನು ನೋಡಿದಳು. ಆಜ್ಯಾಹುತಿಯನ್ನು ವೇದಿಕೆಗರ್ಪಿಸಿದಳು. ಕೂಡಲೇ ಧಗ್ಗೆಂದುರಿದು ವೇದಿಕೆಯಾಗ್ನಿಕಿಡಿಗಳು ಮೇಲೆ ಹಾರಿ ಮಿಣುಕು ಹುಳುಗಳಂತೆ ಆ ಸ್ಥಳವನ್ನು ಪ್ರಕಾಶಮಯವಾಗಿ ಮಾಡಿದವು. ಆಕಾಶದಲ್ಲಿ ಚಂದ್ರನು ತನ್ನ ಸಹಧರ್ಮಿಣಿಯರೊಂದಿಗೆ ಆ ಮುನಿಯನ್ನೂ ತರಳೆಯನ್ನೂ ನೋಡಿ, ಅಮೃತವನ್ನು ಧಾರೆಯಾಗಿ ಸುರಿಸಿದನು.

ಒಡನೆ ಅಗಸ್ತ್ಯನು ಪ್ರಿಯೇ ನಿನ್ನ ಇಂದಿನ ಮಾತುಗಳನ್ನು ಕೇಳಿ ಹಿಡಿಸಲಾರದಷ್ಟು ಸಂತಸದಿಂದ ಮೆರೆಯುತ್ತಿರುವೆನು. ನನ್ನ ಹೃದಯವು ನಿನ್ನ ಸಂಗಸುಖವನ್ನಪೇಕ್ಷಿಸಿ ಧುಮುಕುತ್ತಿರುವುದು. ನೀನೊಮ್ಮೆ

ನಿನ್ನ ಅಧರಾಮೃತವನ್ನುಣ್ಣಿಸಿ ನನ್ನ ಹೃದಯದ ತಾಪವನ್ನು ಇಳಿಸಲಾರೆಯಾ?" ಎಂದು ದೈನ್ಯದಿಂದ ಕೇಳಿದನು.

ಲೋಪಾಮುದ್ರೆಗೆ ಆ ಮಾತುಗಳನ್ನು ಕೇಳಿ ಸಹಿಸಲಾರದಷ್ಟು ಲಜ್ಜೆಯುಂಟಾಯಿತು. ಅವಳು 'ಛಿ ಎಂಥ ಮಾತು! ವಿವಾಹಿತರಾಗುವುದಕ್ಕಿಂತ ಮುಂಚೆಯೇ ಸಂಗಸುಖವೇ? ಅದೆಂದಿಗೂ ಆಗಲಾರದು. ವಿವಾಹಗಳಲ್ಲಿ ಬ್ರಾಹ್ಮವಿವಾಹವೇ ಶ್ರೇಷ್ಠವು. ನಾವಿಬ್ಬರೂ ಬ್ರಹ್ಮವಂಶಸ್ಥರು. ಅಂದಮೇಲೆ ಗಾಂಧರ್ವವಿವಾಹದ ಗೊಡವೆಯೇಕೆ. ಬ್ರಾಹ್ಮವಿಧಿಯಂತೆ ವಿವಾಹಪೂರ್ವವೇ ದಂಪತಿಯರು ಪರಸ್ಪರ ಸ್ಪರ್ಶವಾಗಬಾರದೆಂದು ನಿನಗೆ ತಿಳಿದೇ ಇದೆ. ಆದ್ದರಿಂದ ನಿನ್ನಿಚ್ಛೆಯನ್ನು ಪೂರ್ತಿಗೊಳಿಸಲು ನನಗಿಷ್ಟವಿಲ್ಲ' ಎಂದಳು. ಅಗಸ್ತ್ಯನು ಸಂಪೂರ್ಣವಾಗಿ ಹತಾಶನಾದನು. ಆದರೂ ಕಾಮೋದ್ರೇಕದಿಂದ ಹುಚ್ಚನಂತೆ ನಟಿಸಿದನು. ಕಾವೇರಿಯು ಸಮೀಪವನ್ನೈದಿ ಬಾಲೆಯೇ, ನಿನ್ನಿಚ್ಛೆಯಂತೆ ನಾನೂ ನಡಕೊಳ್ಳುವೆನು. ಆದರೀಗ ನಿನ್ನ ಸೌಂದರ್ಯಾತಿಶಯಕ್ಕೆ ಸೋತು ನಿನ್ನವನಾಗಿರುವೆನು. ನನ್ನಿಷ್ಟವನ್ನು ಪೂರೈಸು ಎಂದೆನುತ ಥಟ್ಟನೆ ಎದ್ದು ಕಾವೇರಿಯ ಹಸ್ತಗಳನ್ನು ಬಲವಾಗಿ ಹಿಡಿದುಕೊಂಡನು. ಆದರೆ ಕಾವೇರಿಯು ತಪ್ಪಿಸಿಕೊಂಡುಹೋಗಿ ಸ್ವಲ್ಪದೂರದಲ್ಲಿ ನಿಂತುಬಿಟ್ಟಳು. ಅಗಸ್ತ್ಯನು ಅವಳನ್ನು ಹಿಂಬಾಲಿಸಿದನು. ಅಷ್ಟರಲ್ಲಿ 'ಶಿವಾಯ ನಮಃ' ಎಂಬ ವಾಕ್ಕು ಕೇಳಿಸಿತು. ಅಗಸ್ತ್ಯನು ಬೆಚ್ಚಿ ಬಿದ್ದು ಹಿಂತಿರುಗಿ ನೋಡಿದನು. ದೂರದಲ್ಲಿ ಕವೇರದಂಪತಿಗಳು ಬರುತ್ತಿದ್ದರು. ಕೂಡಲೇ ಅಗಸ್ತ್ಯನು ವೇದಿಕೆಯ ಬಳಿಯಲ್ಲಿ ಕುಳಿತುಬಿಟ್ಟನು. ಕಾವೇರಿಯೂ ಪಕ್ಕದಲ್ಲಿಯೇ ಕುಳಿತುವೇದಿಕೆಯಲ್ಲಿ ಜ್ವಲಿಸುತ್ತಿದ್ದ ಬೆಂಕಿಯನ್ನೇ ನೋಡಹತ್ತಿದಳು.

ಕವೇರನು ನಿಜಪತ್ನಿಯೊಡನೆ ಅವಸರದಿಂದ ಬಂದು ಮುನಿಗೆ ಬೇಸರವಾಗಿರಬಹುದೆಂದೆಣಿಸಿ, "ಅಗಸ್ತ್ಯನೇ ರವಷ್ಟು ತಡವಾಯಿತು, ಕ್ಷಮಿಸೋಣಾಗಲಿ" ಎಂದನು. ಅಗಸ್ತ್ಯನಿಗಾದರೋ ಕಾವೇರಿಯ ಮೇಲಿಟ್ಟ ಕಣ್ಣನ್ನು ತೆಗೆಯಲಾಗದೆ "ಸ್ವಾಮಿ, ತಾವೇನು ಹೆಚ್ಚು ತಡವಾಗಿ ಬಂದಂತೆ ಕಾಣುವುದಿಲ್ಲ. ತಾವು ಕುಳಿತುಕೊಳ್ಳೋಣಾಗಲಿ" ಎಂದನು. ಕವೇರನು ಪಕ್ಕದಲ್ಲಿಯೇ ಕುಳಿತುಕೊಂಡನು ಅವನ ಪತ್ನಿಯು ಭೋಜನಸಿದ್ಧತೆಗಾಗಿ ಪಾಕಶಾಲೆಯನ್ನು ಸೇರಿದಳು.

ಅಗಸ್ತ್ಯನಾಗ ತುಂಬಾ ಪೇಚಾಟಕ್ಕೆ ಬಿದ್ದನು. ಕಾವೇರಿಯುನ್ನು ಒಡನೆ ಲಗ್ನವಾಗಲು ನಿಶ್ಚಯುಮಾಡಿಬಿಡೋಣವೇ ಎಂದಾಲೋಚಿಸ ತೊಡಗಿದನು. ಆದರೆ ತಾನು ಅತಿಥಿಯಾಗಿ ಬಂದಿರಲು ಲಗ್ನವಿಚಾರ ಮಾತಾಡುವುದು ಉಚಿತವೇ? ಈ ವೃದ್ಧ ರಿಸಿಯು ಸಮ್ಮತಿ ಕೊಡದೆ ಹೋದರೆ ತಾನು ದೊಡ್ಡ ಬಿಕ್ಕಟ್ಟಿಗೆ ಸಿಕ್ಕುಬೀಳುವೆನಲ್ಲವೇ!" ಎಂಬ ಆ ಲೋಚನೆಗಳೂ ಹೊಳೆದವು. ಆಗ ಕಾವೇರಿಯು ಮೌನವಾಗಿ ಕುಳಿತಿದ್ದಳು. ಕವೇರನು ಅವರೀರ್ವರ ಮುಖವನ್ನೂ ನೋಡಿ, ನಡೆದ ಸಂಗತಿಯನ್ನೆಲ್ಲಾ ಊಹಿಸಿ ತಿಳಿದು, ಆ ಅಗಸ್ತ್ಯಋಷಿಯು ತನ್ನಳಿಯನಾದರೆ ತನಗೆ ಮಹಾಪುಣ್ಯವು ಲಭಿಸುವುದೆಂದು ಸಂತೋಷದಿಂದ ಹಿಗ್ಗಿದನು. ಅಷ್ಟರಲ್ಲಿ ಅಗಸ್ತ್ಯನಿಗೆ ಮನೋವೇಗವು ಹೆಚ್ಚಾಯಿತು. ತನ್ನ ಬಯಕೆಯನ್ನು ಮುಚ್ಚುಮರೆಯಿಲ್ಲದೆ ಕವೇರನಿಗೆ ಹೇಳಿಬಿಡುವುದೇ ಉತ್ತಮವೆಂದು ನಿರ್ಧರಿಸಿ ಅನೇಕ ವೇಳೆ ಮಾತಾಡಲು ಪ್ರಯತ್ನಿಸಿ ಕಡೆಗೆ "ಋಷಿವರ್ಯರೇ ತಮ್ಮ ಸಂಗಡ ಒಂದು ಗೂಢವಾದ ಸಂಗತಿಯನ್ನು ವಿಚಾರಿಸಬೇಕಾಗಿದೆ" ಎಂದನು. ಆಗ ಕಾವೇರಿಯು ತನ್ನ ತಾಯಿಗೆ ಭೋಜನ ಸಿದ್ಧಮಾಡುವುದರಲ್ಲಿ ಸಹಾಯ ಮಾಡಲು ಹೊರಟುಹೋದಳು. ಕವೇರನು ಆಗತ್ಯವಾಗಿ ಆಗಬಹುದು ಎಂದನು. ಅಗಸ್ತ್ಯನು ಸ್ವಲ್ಪ ಸಂಕೋಚದಿಂದ ಮಹಾಮುನಿಯೇ ನಾನು ನಿಮ್ಮ ಮಗಳು ಕೈಯನ್ನಪೇಕ್ಷಿಸಿರುವೆನು, ಎಂದನು. ಕವೇರನಿಗೆ ಆ ಮಾತು ಕೇಳಿದೊಡನೆ ಅತ್ಯಾನಂದವಾಯಿತು. ಅವನು ಒಡನೆ ಅಗಸ್ತ್ಯ ಋಷಿಗಳೇ ತಾವು ಸಾಕ್ಷಾತ್ ಶಿವನ ಅವತಾರಪುರುಷರು. ಭೂಲೋಕದ ಯೋಗಿಗಳಿಗೆ ಶಿರಪ್ರಾಯರು ತಮ್ಮಂಥವರ ಬಾಂಧವ್ಯವು ದೊರಕುವುದೆಂದರೆ ಸಾಧಾರಣವಾದ ಸಂಗತಿಯಲ್ಲ. ತಮ್ಮಿಚ್ಛೆಯನ್ನು ಪರಿಪಾಲಿಸಲು ನಾನು ಬದ್ಧಕಂಕಣನಾಗಿರುವೆನು ಎಂದಂದು ತನ್ನ ಪತ್ನಿಯನ್ನು ಕರೆಸಿ ಎಲ್ಲಾ ವಿಷಯುಗಳನ್ನೂ ತಿಳುಹಿದನು. ಅವಳೂ ತಡಮಾಡದೆ ಒಪ್ಪಿಗೆಯನ್ನಿತ್ತಳು. ಕೂಡಲೆ ಶುಭಮುಹೂರ್ತವನ್ನು ಕಂಡು ಹಿಡಿದು, ಹದಿನಾಲ್ಕು ಲೋಕದ ಋಷಿಗಳಿಗೂ, ಭೂಸುರರಿಗೂ, ಅಷ್ಟ ದಿಕ್ಪಾಲಕರಿಗೂ, ತ್ರಿಮೂರ್ತಿಗಳಿಗೂ, ದೇವೇಂದ್ರಾದಿಗಳಿಗೂ, ಲಗ್ನದ ವರ್ತಮಾನವನ್ನು ತಿಳಿಸಿದರು.

# ಕಾವೇರಿಯ ಲಗ್ನ

ಇಂದು ಬ್ರಹ್ಮಗಿರಿಯ ಕಾಡು ನಾಡಾಗಿದೆ. ನಿಬಿಡವಾದ ಅರಣ್ಯವು ಜನಸಂಚಾರಕ್ಕೆ ಅವಕಾಶವಾಗಿದೆ. ಅಗಲಕಿರಿದಾಗಿ ಹೋಗಲಸಾಧ್ಯವಾದ ಕಾಡುದಾರಿಗಳು ಹತ್ತೆಂಟು ಜನರೊನ್ಮೆಯೇ ನಡೆದು ಹೋಗುವಷ್ಟು ವಿಶಾಲವಾಗಿದೆ. ಎಲ್ಲಿ ನೋಡಿದರೂ ಧ್ವಜಪತಾಕೆಗಳು, ತಳಿರ್ತೋರಣಗಳು, ಎಲ್ಲಿನೋಡಿದರೂ ಗಜಿಬಿಜಿ, ಅಸಂಖ್ಯಾತ ಜನರು ರಥಗಳ ಮೇಲೂ, ಕುದುರೆಗಳ ಮೇಲೂ ಕುಳಿತು ಬರುತ್ತಿದ್ದರು. ಆಕಾಶದಲ್ಲಿಯೂ ವಿಮಾನಗಳು ಮೋಡಗಳು ಕವಿದಂತೆ ಒತ್ತೊತ್ತಾಗಿ ಹಾರಾಡುತ್ತಿವೆ. ದೇದೀಪ್ಯಮಾನವಾದ ದೇವತೆಗಳ ವಿಮಾನಗಳಿಂದ ಬಾಣವು ಹೊಳೆಯುತ್ತಿದೆ ಗವಿ ಕಂಧರಗಳು ಪ್ರತಿಧ್ವನಿಯಿಂದಾರ್ಭಟಿಸುತ್ತಿವೆ.

ಇತ್ತ ಕಾವೇರಾಶ್ರಮವಾದರೋ ವೈಜಯಂತಿಯ ಬೆಡಗನ್ನು ಹೀಯಾಳಿಸುತ್ತಿದೆ. ವಿಶ್ವಕರ್ಮನೇ ವಿಧಿಯ ಆಜ್ಞೆಯಂತೆ ನೂತನವಾದ ಮಂಟಪವನ್ನು ನಿರ್ಮಿಸಿರುವನು. ಹವಳ, ಮುತ್ತು ಮಾಣಿಕ್ಯದಿಂದ ಕೆತ್ತಲ್ಪಟ್ಟ ಬಳ್ಳಿಗಳು, ಪುಷ್ಪಗಳು, ಜಾಲರಿಯಂತೆ ಮಂಟಪದಿಂದ ತೂಗಾಡುವ ಮುತ್ತಿನ ಕುಚ್ಚಗಳು ರನ್ನದ ವೇದಿಕೆಗಳು ಮಂಟಪದ ತುದಿಯನ್ನಲಂಕರಿಸಿರುವ ಚಿನ್ನದ ಕಲಶ, ಮಿರುಮಿರುಗುವ ಬಣ್ಣಗಳಿಂದ ಕಂಬಗಳ ಮೇಲೆ ಬಿಡಿಸಿದ ಚಿತ್ರಗಳು, ನೋಟಕರ ಕಣ್ಣುಗಳನ್ನು ಕುಕ್ಕುತ್ತಿವೆ. ಅತ್ತ ವೇದಿಕೆಯು ಶೋಭಾಯಮಾನವಾಗಿ ನವಚೈತನ್ಯದಿಂದ ಪ್ರಜ್ವಲಿಸುತ್ತಿದೆ.

ಮಂಟಪದ ಮುಂಗಡೆ ನಿರ್ಮಿಸಿದ ವಿಶಾಲವಾದ ಚೌಕದಲ್ಲಿ ಜನರೂ ದೇವತೆಗಳೂ ಋಷಿಗಳೂ ಯೋಗ್ಯಾಸನದಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ವಸಿಷ್ಠ ಬ್ರಹ್ಮಾದಿಗಳು ಅಲ್ಲಲ್ಲಿ ನಿಂತು ಅತಿಥಿಗಳನ್ನು ಉಚಿತಾಸನಗಳಲ್ಲಿ ಕುಳ್ಳಿರಿಸುವುದರಲ್ಲಿಯೂ ಮಧುಪರ್ಕಾದಿಗಳನ್ನಿತ್ತು ಸತ್ಕರಿಸುವುದರಲ್ಲಿಯೂ ನಿರತರಾಗಿದ್ದಾರೆ. ದೇವತೆಗಳ ತಂಡ ತಂಡವೇ ಬರುತ್ತಿದೆ. ಋಷಿಗಳೆಲ್ಲರೂ ಉದ್ದವಾದ ಗಡ್ಡವನ್ನು ಹಿಡಿದು ಹುರಿಮಾಡುತ್ತ ವೇದಿಕೆಯ ಪಕ್ಕದಲ್ಲಿ ಕುಳಿತಿದ್ದಾರೆ. ಅದೋ! ಅದೋ! ದೇವೇಂದ್ರನು ಶಚೀದೇವಿಯೊಡನೆ ಬಂದನು.

ಅದೋ! ಅದೋ! ಸಾಕ್ಷಾತ್ ವಿಷ್ಣುವೇ ಶ್ರೀಲಕ್ಷ್ಮಿಯೊಡನೆ ಬರುತ್ತಿರುವನು. ಅದೋ! ಜಟಾಜೂಟಧಾರಿಯಾದ ಶಂಕರನು ಮಂಗಲೆಯೊಡನೆ ಬಂದನು. ಇದೋ! ಅಪ್ಸರೆಯರೂ, ಗಂಧರ್ವ, ಕಿನ್ನರ, ಕಿಂಪುರುಷಾದಿಗಳೂ ಬಂದರು. ಪಾಪ! ವಶಿಷ್ಠ, ಬ್ರಹ್ಮ, ಕಣ್ವ, ಜಮದಗ್ನಿ ಮೊದಲಾದ ಋಷಿಗಳಿಗೆ ಅತ್ತಿತ್ತ ಓಡಾಡಿ ಮುಖದಲ್ಲಿ ಮಳೆಯಂತೆ ಬೆವರು ಸುರಿಯುತ್ತಿರುವುದು. ಆ ಕವೇರನ ಮುಖವನ್ನು ನೋಡಸಿಗುವುದೇ ಕಷ್ಟ. ಮಿಂಚಿನಂತೆ ಒಮ್ಮೊಮ್ಮೆ ಬಂದು ಬಂದ ಅತಿಥಿಗಳಿಗೊಮ್ಮೆ ದರ್ಶನವನ್ನಿತ್ತು ಒಂದು ಕಿರುನಗುವನ್ನು ಬೀರಿ ಹೊರಟುಹೋಗುವನು. ಅತ್ತ ಕವೇರಪತ್ನಿಗಾದರೋ ಬಂದ ಸ್ತ್ರೀಯರನ್ನು ಸಂತೈಸುವುದೂ, ಭೋಜನಾದಿ ಸತ್ಕಾರಗಳನ್ನು ಮಾಡಿಸುವುದೂ, ತಿಂಡಿ ಪದಾರ್ಥಗಳನ್ನು ತಯಾರಿಸುವುದನ್ನು ನೋಡಿಕೊಳ್ಳುವುದೇ ಕೆಲಸವಾಗಿದೆ.

ಮಂಗಳವಾದ್ಯವು ಮೊಳಗಲಾರಂಭವಾಯಿತು ವೇದಿಕೆಗೆ ಆಜ್ಯಾದಿಗಳನ್ನು ಹೊಯ್ದು ಅಗ್ನಿಯು ಧಗಧಗನೆ ಉರಿಯುತ್ತಿದೆ ಹೋಮಗಳ ಹೊಗೆಯು ಒಂದು ಗಾವುದ ವಿಸ್ತೀರ್ಣ ಹರಡಿ ಕಣ್ಣುಗಳನ್ನು ಕುಕ್ಕುತ್ತಿರುವುದು. ಅಗಸ್ತ್ಯನೂ ಕಾವೇರಿಯೂ ಮಂಗಳಸ್ನಾನವನ್ನು ಮಾಡಿ ದಿವ್ಯಾಲಂಕಾರಭೂಷಿತರಾಗಿ ವೇದಿಕೆಯ ಮುಂಗಡೆ ಮಂಟಪದಲ್ಲಿ ಕುಳಿತುಕೊಂಡರು. ಯಥಾವಿಧಿಯಲ್ಲಿ ಕವೇರನು ಶುಭಮುಹೂರ್ತದಲ್ಲಿ ಕಾವೇರಿಯನ್ನು ಅಗಸ್ತ್ಯನಿಗೆ ಧಾರೆಯೆರೆದು ಕೊಟ್ಟನು. ಎಲ್ಲರೂ ಆನಂದಸಾಗರದಲ್ಲಿ ಮುಳುಗಿದರು. ಅಪ್ಸರೆಯರು ನಾಟ್ಯವಾಡಿದರು, ಗಂಧರ್ವರು ಗಾಯನ ಮಾಡಿದರು, ಋಷಿಗಳು ವೇದಮಂತ್ರಗಳನ್ನು ಪಠಿಸಿದರು. ತುಂಬಿದ ಸಭೆಯೆಲ್ಲವೂ ಮಂಗಳಸೂಚಕ ಶಬ್ದಗಳನ್ನುಚ್ಚರಿಸಿತು. ಆ ಪ್ರದೇಶವೆಲ್ಲವೂ ಸಂತೋಷದ ಸಂತೆಯಾಯ್ತು.

ಅನಂತರ ಭೋಜನಕ್ಕಣಿಯಾಯಿತು. ಲಕ್ಷ್ಮೀ, ಸರಸ್ವತೀ, ಪಾರ್ವತಿಯರೇ ಬಂದ ಅಥಿತಿಗಳಿಗೆಲ್ಲಾ ಊಟಕ್ಕೆ ಬಡಿಸಿದರು. ಬಂದ ದೇವರಿಸಿ ಸಮೂಹವು ತಿಂದು ತೇಗಿ, ದಕ್ಷಿಣೆ ತಾಂಬೂಲಾದಿಗಳನ್ನು ಸ್ವೀಕರಿಸಿ ತಂತಮ್ಮ ನಿವಾಸಗಳಿಗೆ ಚಿತ್ತೈಸಿತು. ಕವೇರನ ಸಂತೋಷಾತಿಶಯಕ್ಕೆ

ಮೇರೆಯೇ ಇಲ್ಲವಂತಾಯಿತು. ಲಗ್ನವು ಕಳೆದು ಐದು ದಿನಗಳವರೆಗೆ ವಧೂವರರನ್ನು ಮನೆಯಲ್ಲಿಯೇ ಇರಿಸಿಕೊಂಡು ಅನೇಕ ವಿಧದ ಭಕ್ಷ್ಯ ಭೋಜನಾದಿಗಳಿಂದಲೂ, ನವನವ ಆಭರಣಾಲಂಕಾರದಿಂದಲೂ ತೃಪ್ತಿ ಪಡಿಸಿದನು. ಅವನ ಇಚ್ಛೆಯು ಪೂರ್ಣ ನೆರವೇರಿತು. 'ತಾನು ಜನ್ಮ ವೆತ್ತಿ ಧನ್ಯನಾದೆನು' ಎಂದಂದುಕೊಂಡನು. ಮುನಿವರೇಣ್ಯನಾದ ಅಗಸ್ತ್ಯ ನಿಗೆ ತನ್ನ ಪುತ್ರಿಯನ್ನು ಲಗ್ನಮಾಡಿದುದರಿಂದ ತನ್ನ ಜನ್ಮಸಾಫಲ್ಯವನ್ನು ಹೊಂದಿದೆನೆಂದು ತಿಳಿದು ಮಗಳನ್ನೂ ಅಳಿಯನನ್ನೂ ಪಕ್ಕದಲ್ಲಿ ಕುಳ್ಳಿರಿಸಿ ಗೃಹಸ್ಥಧರ್ಮಾವಲಂಬಿಗಳಿಗೆ ಹೇಳಬೇಕಾದ ಬುದ್ಧಿವಾದಗಳನ್ನು ಹೇಳಿ ದನು; ಅಲ್ಲದೆ ಮಗಳನ್ನು ತೊಡೆಯಮೇಲೆ ಕುಳ್ಳಿರಿಸಿ ಕಾವೇರಿಯೇ, ನೀನು ಪತಿಯನ್ನನುಸರಿಸಿ ನಡೆ, ಆತನಿಗೆ ಸಹಾನುಕೂಲೆಯಾಗಿಯೂ ಸಹಧರ್ಮಿಣಿಯಾಗಿಯೂ ವರ್ತಿಸು. ಯಾವಾಗಲೂ ಪತಿಯ ಸುಖ ವನ್ನೇ ಕೋರುತ್ತಾ, ಪತಿಯೇ ದೈವವೆಂದು ಭಾವಿಸುತ್ತಾ, ಪತಿವ್ರತಾ ಧರ್ಮವನ್ನನುಸರಿಸಿ, ಪರಮೇಶ್ವರನಲ್ಲಿ ಭಕ್ತಿಯನ್ನು ನಿಲಿಸಿ ನಮಗೆಲ್ಲರಿಗೆ ಶ್ರೇಯಸ್ಸನ್ನುಂಟುಮಾಡು. ಹಾಗೆ ಮಾಡಿದರೆ ನೀನು ಪತಿಗೂ, ನಿನಗೂ ಯಶಸ್ಸನ್ನು ತರುವೆಯಲ್ಲದೆ ದೇವಾದಿದೇವತೆಗಳಿಂದಲೂ ಪೂಜಿಸಲ್ಪಡಲು ಅರ್ಹಳಾಗುವಿ. ನಾನಿನ್ನು ಇಲ್ಲಿದ್ದು ಪ್ರಯೋಜನವಿಲ್ಲವು. ನನ್ನ ಮನಃಸಂಕಲ್ಪವು ಈಶನೊಲುಮೆಯಿಂದ ಕೈಗೂಡಿತು. ನಾನಿಂದು ಧನ್ಯನಾದೆನು ನೀವಿನ್ನು ಕಾಶಿಗೆ ತೆರಳಿರಿ ಎಂದು ತನ್ನ ಅಳಿಯನನ್ನೂ ಪುತ್ರಿಯನ್ನೂ ಹರಸಿ, ತಾನೂ ತನ್ನ ಪತ್ನಿಯೊಡನೆ ಸಹ್ಯಾದ್ರಿಮಲೆಯ ಕಡೆಗೆ ನಡೆದನು.

## ಗೃಹ ಪ್ರವೇಶ

ಭಾಗೀರಥಿಯು ಮಂದಗಾಮಿನಿಯಾಗಿ ಹರಿಯುತ್ತಿದ್ದಳು. ಪೂರ್ಣ ಚಂದ್ರನ ಬಿಂಬವು ಗಂಗೆಯು ಧರಿಸಿದ ಈಶ್ವರನ ರಜೋಬಿಂದುವಿನಂತೆ ನೀರಿನಲ್ಲಿ ತೋರುತಿತ್ತು. ಚಕ್ರವಾಕ ಪಕ್ಷಿಗಳು ವಿರಹತಾಪದಿಂದ ಅಳಲು ತಿರಲು ಕುಮುದಗಳು ಆನಂದದಿಂದ ಮೆರೆಯುತಿದ್ದುವು. ಭೂದೇವಿಯು ಅಮೃತವಲ್ಲಿಯನ್ನು ಹೊದೆದು ಶುಭ್ರಳಾಗಿ ನಿಂತಿದ್ದಳು. ಆಗ ನವ

ಯೌವನದಿಂದ ತುಂಬಿ ವಿಲಾಸದಿಂದ ಮೆರೆಯುತಿದ್ದ ದಂಪತಿಗಳು ಕಾಶೀಕ್ಷೇತ್ರದ ಕಡೆ ಸರಸವಾಡುತ್ತಾ ನಡೆದು ಬರುತಿದ್ದರು. ಅವರ ಮೈಯಲ್ಲೆಲ್ಲಾ ಧೂಳು. ಕಾಲುಗಳಂತೂ ಧೂಳಿಮಯವಾಗಿ ಕೆಂಬಣ್ಣ ದಿಂದ ಒಪ್ಪುತಿದ್ದುವು. ನಡೆದು ನಡೆದು ಅವರ ಕಾಲುಗಳು ಬಿದ್ದು ಹೋಗಿದ್ದಂತೆ ತೋರುತಿತ್ತು.

ಕಾಶೀಕ್ಷೇತ್ರದ ಮಹಾದ್ವಾರವನ್ನು ಅವರೀರ್ವರೂ ಸಮೀಪಿಸಿದರು, ಆಗ ಮಂಗಳವಾದ್ಯಗಳು ಒಮ್ಮೆಯೇ ಮೊಳಗಿದವು ದೇವಗಂಧ, ಪಾರಿಜಾತ ಪುಷ್ಪಗಳ ಸುವಾಸನೆಯು ಆ ಪ್ರದೇಶವನ್ನೆಲ್ಲಾ ತುಂಬಿತು. ಆ ದಂಪತಿಗಳು ಆನಂದೋತ್ಸವದಿಂದ ಮುಂದೆ ಹೆಜ್ಜೆಯನ್ನಿಟ್ಟರು. ಆಗ ಸರ್ವಾಲಂಕಾರ ಭೂಷಿತೆಯರಾದ ನಾರೀಮಣಿಗಳೂ ದೇವಮುನಿ ಗಳೂ, ದೇವತೆಗಳೂ ರತ್ನಖಚಿತವಾದ ಪಲ್ಲಕಿಯನ್ನು ತಂದಿರಿಸಿದರು. ಅವರ ಮಧ್ಯದಲ್ಲಿ ಸೂರ್ಯನಂತೆ ತೇಜೋಮಯವಾದ ಸೀರೆಯನ್ನು ಧರಿಸಿ, ಸಹಸ್ರಸೂರ್ಯರ ಪ್ರಕಾಶವನ್ನು ಧಿಕ್ಕರಿಸುವಂತಿದ್ದ ಮಾಣಿಕ್ಯ, ವಜ್ರ, ವೈಡೂರ್ಯದ ಹಾರಗಳನ್ನು ಧರಿಸಿ, ಮೂಲೋಕವನ್ನು ಬೆರಗು ಗೊಳಿಸುವಂತಿದ್ದ ಸೌಂದರ್ಯಾತಿಶಯದಿಂದ ಮೆರೆಯುತ್ತಾ ಓರ್ವ ಸುಮಂಗಲೆಯು ನಡೆತಂದು, ನೂತನ ದಂಪತಿಗಳನ್ನು ಪುಷ್ಪ, ಅಕ್ಷತಾದಿ ಮಂಗಳ ಸೂಚಕ ದ್ರವ್ಯಗಳಿಂದಲಂಕರಿಸಿ ಸ್ವಾಗತವನ್ನಿತ್ತು, ಕೈಹಿಡಿದು ಪಲ್ಲಕ್ಕಿಯ ಮೇಲೆ ಕುಳ್ಳಿರಿಸಿದಳು. ದೇವತೆಗಳೂ ಸುರಮುನಿಗಳೂ ಹೂ ಮಳೆಗರೆದರು. ಆ ದಂಪತಿಗಳು ಆ ಸುಂದರೀಮಣಿಗೆ ಸಾಷ್ಟಾಂಗ ಪ್ರಣಾಮಮಾಡಿ "ಓ ದಾಕ್ಷಾಯಿಣಿ! ಜಗದಂಬೆ! ಪಾರ್ವತಿ! ಅಂಬಿಕೆ! ನಮ್ಮನ್ನು ಕಾಪಾಡು!" ಎಂದು ಬೇಡಿಕೊಂಡರು. ಆಗಲಾ ದಾಕ್ಷಾ ಯಿಣಿಯು ಅವರನ್ನು ಹರಿಸಿ, "ವೈತ್ರಾವರುಣಿಯೇ! ನಿನ್ನ ಕೀರ್ತಿಯನ್ನು ಶಾಶ್ವತವಾಗಿ ಬೇರೂರಿಸಲು ಯತ್ನಿಸುತ್ತಿರುವ ಸುಂದರೀಮಣಿಯನ್ನು ಪಡೆದಿರುವೆ. ನಿಮಗೆ ಶುಭವಾಗಲಿ" ಎಂದಳು. ರಿಸಿಗಳೂ, ದೇವತೆ ಗಳೂ ಮಂಗಳವಚನವನ್ನು ನುಡಿದರು.

ಅನಂತರ ಪಲ್ಲಕ್ಕಿಯನ್ನು ದೇವತೆಗಳು ಹೊತ್ತರು. ಮೆರವಣಿಗೆಯು ಮಹಾವಿಜೃಂಭಣೆಯಿಂದ ವಿಶ್ವನಾಥನ ಮಂದಿರದ ಕಡೆ ನಡೆಯಿತು.

ಅಲ್ಲಿ ಇಂದ್ರನ ಭವನವನ್ನು ಅಲ್ಲಗಳೆಯುವಂತೆ ವಿಧಿಯ ಆಜ್ಞೆಗನುಸಾರ ವಾಗಿ ವಿಶ್ವಕರ್ಮನು ನಿರ್ಮಿಸಿದ್ದ ಭವ್ಯವಾದ ಮಂದಿರವು ಕಂಡುಬಂತು. ದಾಕ್ಷಾಯಿಣಿಯು ಆಗ—"ಅಗಸ್ತ್ಯನೇ ಇದೋ ಬ್ರಹ್ಮನು ನಿಮಗಾಗಿ ಈ ಭವ್ಯವಾದ ಮಂದಿರವನ್ನು ನಿರ್ಮಿಸಿರುವನು. ನೀವಲ್ಲಿ ಸುಖವಾಗಿ ಗೃಹಸ್ಥಾಶ್ರಮವನ್ನು ಹೂಡಿರಿ" ಎಂದಳು. ಅಗಸ್ತ್ಯನು ಮಹಾಹರ್ಷಾ ನ್ವಿತನಾಗಿ, "ತಾಯೇ ನಿನ್ನ ಕರುಣೆಯಿದ್ದರೆ ಇಚ್ಛಿಸಿದುದೆಲ್ಲವೂ ಸಿಗ ದಿರದು" ಎಂದನು. ಪಾರ್ವತಿಯು ತಾನು ಮುಂದೆ ಮನೆಯೊಳ ಹೊಕ್ಕು ದಂಪತಿಗಳನ್ನು ಪಲ್ಲಕ್ಕಿಯಿಂದ ಇಳಿಸಿ ಒಳಗೆ ಕರಕೊಂಡಳು. ಕಾವೇರಿ ಯೂ ಅಗಸ್ತ್ಯನೂ ತಮ್ಮ ಹೊಸ ಮನೆಯನ್ನು ನೋಡಿ ಆನಂದಭರಿತ ರಾದರು.

ಪಾರ್ವತಿಯು ತದನಂತರ ಬಂದ ಆತಿಥಿಗಳನ್ನು ಕುಳ್ಳಿರಿಸಿ ವಿಶೇಷ ವಾದ ಭಕ್ಷ್ಯಗಳನ್ನೂ ತಿಂಡಿ ಪದಾರ್ಥಗಳನ್ನೂ ತಯಾರಿಸಿ ಆತಿಥಿಗಳಿಗೆ ಬಡಿಸಿದಳು. ಹತ್ತು ದಿವಸಗಳ ವರೆಗೆ ಅಲ್ಲಿ ದೇವತೆಗಳಿಗೂ, ಬ್ರಾಹ್ಮಣ ರಿಗೂ, ಮುನಿಗಳಿಗೂ ದೊಡ್ಡ ಸಂತರ್ಪಣೆಯಾಯಿತು. ತಿಂದು ತಿಂದು ದೇವತೆಗಳ ಮತ್ತು ಬ್ರಾಹ್ಮಣರ ಹೊಟ್ಟೆಯಲ್ಲಿ ಬೊಜ್ಜು ಬೆಳೆಯಿತು. ದಕ್ಷಿಣೆಯಿಂದ ಬ್ರಾಹ್ಮಣರನ್ನು ತೃಪ್ತಿಗೊಳಿಸಿದಳು. ಎಲ್ಲಾ ಆತಿಥಿಗಳು ವಧೂವರರನ್ನಾಶೀರ್ವದಿಸಿ ತಂತಮ್ಮ ಸದನಗಳಿಗೆ ತೆರಳಿದರು. ಪಾರ್ವತಿ ಯೂ ಕೈಲಾಸಗಿರಿಗೆ ಹೊರಟುಹೋದಳು.

ಅಗಸ್ತ್ಯನೂ ಕಾವೇರಿಯೂ ಮಹಾಸಂತೋಷದಿಂದ ಗೃಹಸ್ಥಾಶ್ರಮ ವನ್ನು ಕೈಕೊಂಡರು. ಕಾವೇರಿಯು ಸರಸ ಸಲ್ಲಾಪಗಳಿಂದ ಅಗಸ್ತ್ಯ ನನ್ನು ಒಲಿಸಿಕೊಂಡು ಆನಂದದಿಂದ ಕಾಲಕಳೆದಳು. ಕುಲವಧುವಿನಂತೆ ಗೃಹಕೃತ್ಯ ನಿರ್ವಾಣದಲ್ಲಿ ತುಂಬಾ ಚಟುವಟಿಕೆಯನ್ನು ತೋರಿಸಿದಳು. ಸಮಯಕ್ಕನುಸಾರವಾಗಿ ವ್ರತಾದಿಗಳನ್ನು ಕೈಕೊಂಡಳು. ತಕ್ಕ ಹೊತ್ತಿಗೆ ತನ್ನ ಗಂಡನನ್ನು ಊಟೋಪಚಾರದಿಂದ ಸನ್ಮಾನಿಸುತ್ತಾ ಸುಖವಾಗಿ ರಮಿಸಿದಳು. ಅಗಸ್ತ್ಯನಾದರೋ ತನ್ನ ಪ್ರತಿಜ್ಞೆಯಂತೆ ಕಾವೇರಿಯನ್ನು ಒಂದು ನಿಮಿಷವಾದರೂ ಅಗಲದೆ ಅವಳ ಸಂಗಡವೇ ಹಿತವಾದ ತರ್ಕ ಶಾಸ್ತ್ರಗಳಿಂದಲೂ, ವಿಧವಿಧವಾದ ಸರಸ ಸಲ್ಲಾಪಗಳಿಂದಲೂ ಮನವೊಲಿಸಿ

ಕೊಂಡು ಅನುರೂಪನಾದ ಗಂಡನೆನಿಸಿಕೊಂಡನು. ಅಲ್ಲದೆ ಅನೇಕ ಶಿಷ್ಯರನ್ನು ಸೇರಿಸಿ ವೇದೋಪನಿಷತ್ತು ಮೊದಲಾದ ಶಾಸ್ತ್ರಗಳನ್ನು ಅವರಿಗೆ ಕಲಿಸುತ್ತಾ ಆನಂದದಿಂದಿದ್ದನು.

## ಕನಕೆ ಸುಜ್ಯೋತಿ

ಬ್ರಹ್ಮಗಿರಿಯ ಬಡಗದಿಕ್ಕಿನಲ್ಲಿ ಗಜೇಂದ್ರಗಿರಿ. ಆ ಗಿರಿಯ ತಪ್ಪಲಲ್ಲಿ ಒಂದಾನೊಂದು ಉದ್ಯಾನವನ. ಆ ಉದ್ಯಾನವನದ ಪಕ್ಕದಲ್ಲಿ ಮನೋಹ್ಲಾದಕರವಾದ ಪದ್ಮಾಕರ ಆ ಪದ್ಮಾಕರದ ಸಮೀಪ ಒಂದು ಗುಹೆ ರವಿಯ ಎಳೆ ಕಿರಣಗಳು ಆ ಗವಿಯನ್ನು ಹೊಕ್ಕು ತುಂಬಿದ್ದ ತಿಮಿರರಾಶಿಯನ್ನು ಜಡಿಸುತ್ತಿದ್ದುವು. ಆಗ ಓರ್ವ ಕನ್ನಿಕೆಯು ಹೊರಗೆ ಬಂದಳು. ಎಳೆ ಕಿರಣಗಳ ಹೊಳಪು ಅವಳ ಮುಖವನ್ನು ಕಾಂತಿಮಯವಾಗಿ ಮಾಡಿತು. ಅವಳ ಕೂದಲು ಬಂಧನವಿಲ್ಲದೆ ಬೆನ್ನಿನಮೇಲೆ ಹರಿದಾಡುತ್ತಿದ್ದುವು. ಯೌವನವತಿಯಾದ ಆಕೆಯು ತನ್ನ ಸೌಂದರ್ಯದಿಂದ ಯತಿಗಳನ್ನು ಸಹ ಬೆರಗುಮಾಡುವಂತಿದ್ದಳು.

ಯುವತಿಯು ಗವಿಯಿಂದ ಹೊರಬಿದ್ದು, ಪದ್ಮಾಕರದಲ್ಲಿ ಸ್ನಾನಮಾಡಿ ಉದ್ಯಾನವನ್ನು ಹೊಕ್ಕು, ಅರಳಿದ ಹೂಗಳನ್ನೆತ್ತಿ ಗುಹೆಗೆ ಅಭಿಮುಖಳಾಗಿ ನಡೆದಳು. ಆಗ ಆ ಗುಹೆಯ ಬಳಿ ಓರ್ವ ಪಾರ್ವನು ಚಿಕ್ಕ ಬಾಲೆಯೊಡನೆ ತೋರಿದನು. ಅವನ ಮುಖದಲ್ಲಿ ಸುಕ್ಕು, ಅವನ ಕೈಗಳು ನಡುಗುತ್ತಿದ್ದುವು. ಅವನ ತಲೆಯು ಹಿಮಾಲಯದಂತೆ ಬಿಳುಪಾಗಿ ತೋರುತ್ತಿತ್ತು. ಉದ್ದವಾದ ದೊಣ್ಣೆಯೊಂದು ಅವನ ಭಾರವನ್ನು ಹೊತ್ತಿತ್ತು. ಆ ಯುವತಿಯ ಮೋರೆಯು ಕಲಂಕರಹಿತವಾಗಿ ಸರಳ ಹೃದಯವನ್ನು ಪ್ರತಿಬಿಂಬಿಸುತಲಿತ್ತು. ಯುವತಿಯು ಅವರನ್ನು ಕಂಡು ಆಶ್ಚರ್ಯಾನ್ವಿತಳಾಗಿ, ಅವರ ಸಮೀಪಸ್ಥೈದಿ—"ವಿಪ್ರೋತ್ತಮನೇ, ನೀನಾರು, ಈ ಏಕಾಂತಸ್ಥಳಕ್ಕೆ ಯಾಕೆ ಬಂದೆ? ಎಂದು ವಿಚಾರಿಸಿದಳು. ಆಗಲಾ ಭೂಸುರೋತ್ತಮನು—'ತಾಯೇ, ನಾನು ಸುಯಜ್ಞನೆಂಬ ಬ್ರಾಹ್ಮಣನು ಸಂಸಾರಪಾಶದಿಂದ ತಪ್ಪಿಸಿಕೊಂಡು, ಲೋಕೋಪಕಾರ ಮಾಡಬೇಕೆಂಬ ಮಹಾಕಾಂಕ್ಷೆಯಿಂದ ವಿಷ್ಣುವನ್ನು ಕುರಿತು ತಪಸ್ಸುಮಾಡಲು,

ಪುರುಷೋತ್ತಮನು ಮೈದೋರಿ ಈ ಮುದ್ದು ಕುವರಿಯನ್ನು ನನಗರ್ಪಿಸಿ ಇಂತೆಂದನು-'ಎಲೈ ಹಾರವನೆ, ನೀನು ಗಜೇಂದ್ರಗಿರಿಗೆ ಹೋಗು, ಅಲ್ಲಿ ಓರ್ವ ಯಕ್ಷಿಣಿಯು ವಾಸಮಾಡುತ್ತಿರುವಳು. ಈ ಬಾಲೆಯನ್ನು ಅವಳ ವಶಮಾಡು. ಅನಂತರ ಅವರೀರ್ವರು ಹೊಳೆಯ ರೂಪವನ್ನು ಹೊಂದುವರು. ನಿನ್ನ ಹೆಸರು ಶಾಶ್ವತವಾಗಿ ಭೂಮಿಯಲ್ಲಿ ನೆಲೆಗೊಳ್ಳುವುದು. ನಿನ್ನ ಮಗಳಾದ ಈ ಬಾಲೆಯು ಜೀವರಾಶಿಗೆಲ್ಲಾ ಉಪಕಾರವನ್ನು ಮಾಡುವವಳಾದುದರಿಂದ ನೀನೂ ಭೂಮಿಯಲ್ಲಿ ಮಹಾಉಪಕಾರವನ್ನು ಮಾಡಿದಂತಾಗುವುದು. ನೀನೂ ಕೈವಲ್ಯನನ್ನು ಹೊಂದುವೆ" ಎಂದು ಹೇಳಿ ಇಲ್ಲಿಗೆ ಕಳುಹಿಸಿಕೊಟ್ಟನು. ಈಕೆಯೇ ನನ್ನ ಬಾಲೆ ಸುಜ್ಯೋತಿ. ನೀನೇ ನಮಗೆ ತಾಯಿ" ಎಂದು ಹೇಳಿದನು. ಆ ಯಕ್ಷಿಣಿಯು ಹಾರವನ ಮಾತುಗಳನ್ನು ಕೇಳಿ ಕನಿಕರಪಟ್ಟು ಬಹು ಆದರದಿಂದ ಅವನನ್ನೂ ಸುಜ್ಯೋತಿಯನ್ನೂ ತನ್ನ ಗವಿಗೆ ಕರೆದುಕೊಂಡು ಹೋದಳು. ಅನಂತರ ತನ್ನಾಶ್ರಮದಲ್ಲಿಯೇ ಅವರೀರ್ವರನ್ನೂ ಇರಿಸಿಕೊಂಡು, ವೇದಾಧ್ಯಯನಮಾಡುವುದರಲ್ಲಿ ನಿರತಳಾದಳು. ಆದರೆ ವಿಪ್ರನು ಸ್ವಲ್ಪ ಕಾಲದಲ್ಲಿಯೇ ಕೈವಲ್ಯಪದವಿಯನ್ನು ಪಡೆದನು. ಬಾಲೆಯರು ಅವನ ಶವಕ್ಕೆ ದಹನಕರ್ಮವನ್ನು ಮಾಡಿ ಶಾಸ್ತ್ರಾಭ್ಯಾಸದಲ್ಲಿ ಕಾಲಕಳೆದರು. ಆ ಯಕ್ಷಿಣಿಯ ಹೆಸರು ಕನಕೆ.

ಸುಜ್ಯೋತಿಯು ಕನಕೆಯ ಸಂಗಡ ಸಕಲ ಶಾಸ್ತ್ರಗಳನ್ನು ಕಲಿತು ಮೇಧಾವಿಯಾದಳು. ಅಲ್ಲದೆ ಉದ್ಯಾನವನ್ನು ಬಹು ಚೆಂದದಿಂದಿಡಲು ಕನಕೆಗೆ ಸಹಾಯಮಾಡಿದಳು. ಬಗೆಬಗೆಯ ಹೂಗಳನ್ನೂ, ಪುಷ್ಪಲತೆಗಳನ್ನೂ, ಹಣ್ಣುಹಂಪಲಾದಿಗಳನ್ನೂ ಈರ್ವರೂ ಬೆಳೆಸಿದರು. ತಮಗೆ ಬೇಕಾದ ಹಣ್ಣುಗಳೂ ಹೂಗಳೂ ಹುಸ್ಕಳವಾಗಿ ದೊರೆತವು. ಅವರ ಹೂದೋಟದ ಅಂದವನ್ನು ದೇವತೆಗಳು ಕಂಡು, ಅಲ್ಲಿಗೆ ಬಂದು ಜಲಕ್ರೀಡೆಯಾಡುತ್ತಾ, ಹೂಗಳ ಪರಿಮಳವನ್ನು ಸೇವಿಸುತ್ತಾ, ಸವಿಯಾದ ಹಣ್ಣುಗಳನ್ನು ಮೆಲ್ಲುತ್ತಾ, ಕನ್ನಿಕೆಯರೊಡನೆ ವಿಹರಿಸುತ್ತಾ ಅಲ್ಲಿಯೇ, ನೆಲಸಿದರು. ಕೆಲವರು ದಿನವೆಲ್ಲಾ ಕ್ರೀಡಾವಿಲಾಸಗಳಿಂದ ಆ ಸ್ಥಳವನ್ನು ಮೋಜುಗೊಳಿಸಿ ರಾತ್ರಿವೇಳೆ ದೇವಲೋಕವನ್ನು ಸೇರುತ್ತಿದ್ದರು. ದೇವ

ಲೋಕದ ದೇವತೆಗಳು, ಯಕ್ಷ, ರಕ್ಷ, ಗಂಧರ್ವ, ಕಿನ್ನರ, ಕಿಂಪುರು ಷಾದಿಗಳೂ ಆ ಸ್ಥಳದ ಬೆಡಗನ್ನು ನೋಡಲು ಬಂದುಹೋಗುತಿದ್ದರು. ಅವರಿಗೆ ದೇವಲೋಕದ ನಂದನವನದ ಮೇಲೆ ಪ್ರೀತಿಯೇ ಇಲ್ಲದಂತಾ ಯಿತು. ಅಲ್ಲದೆ ತಮ್ಮ ಕಾಲವನ್ನೆಲ್ಲಾ ಭೂಲೋಕದಲ್ಲೇ ಕಳೆಯ ಲಾರಂಭಿಸಿದರು. ಆಗ ಆ ಗಜೇಂದ್ರಗಿರಿಯು ಪ್ರದೇಶವು ಮಹಾ ಪುಣ್ಯಪ್ರದಾಯಕವಾಯಿತು. ಕನಕೆ ಸುಜ್ಯೋತಿಯರ ಕೀರ್ತಿಯು ಎಲ್ಲೆಲ್ಲೂ ಹರಡಿತು.

ದೇವತೆಗಳು ದೇವಲೋಕದಲ್ಲಿ ಕಾಣದಾಗತಿದ್ದುದನ್ನು ನೋಡಿ ದೇವೇಂದ್ರನು ವಿಸ್ಮಯಗೊಂಡನು. ನಂದನವನದ ಪುಷ್ಪಗಳನ್ನು ದೇವ ತೆಗಳು ಇಚ್ಛೆಸದಿದ್ದುದನ್ನು ವನಪಾಲಕನೂ ಅರಿಕೆ ಮಾಡಿಕೊಂಡನು. ಆಗ ದೇವೇಂದ್ರನು ಗಂಧರ್ವನೋರ್ವನನ್ನು ಆಸ್ಥಾನಕ್ಕೆ ಕರೆಯಿಸಿ ದೇವ ತೆಗಳು ಎಲ್ಲಿಗೆ ಹೋಗುತ್ತಿರುವರೆಂದು ಕೇಳಲು ಆ ಗಂಧರ್ವನು ಕೈಜೋ ಡಿಸಿ-"ಮಹಾ ಪ್ರಭುವೇ ಸಹ್ಯಾದ್ರಿಯ ದಕ್ಷಿಣ ಭಾಗದಲ್ಲಿ ಗಜೇಂದ್ರಗಿರಿ ಎಂಬ ಶಿಖರವಿರುವುದು. ಅದರ ತಪ್ಪಲಲ್ಲಿ ಕನಕೆ, ಸುಜ್ಯೋತಿ ಎಂಬೀರ್ವ ಕನ್ನಿಕೆಯರು ದೊಡ್ಡ ಉದ್ಯಾನವನವನ್ನು ನಿರ್ಮಿಸಿ ಬಗೆಬಗೆಯ ಪುಷ್ಪ ಲತೆಗಳನ್ನು ಬೆಳೆಯಿಸಿರುವರು. ಆ ಉದ್ಯಾನವನವು ನಂದನವನದ ಅಂದವನ್ನು ಮೀರಿರುವುದು. ಅದರ ಸಮೀಪವೇ ಒಂದು ಸರೋವರವು ಆ ಪ್ರದೇಶವನ್ನು ಮನೋಹ್ಲಾದಕರವಾಗಿ ಮಾಡುತ್ತಿರುವುದು. ಆ ರಮಣೀಯವಾದ ಪ್ರದೇಶದಲ್ಲಿ ವಿಹರಿಸಲು ಸುರರೆಲ್ಲರೂ ಹೋಗುತ್ತಿರು ವರು. ಆ ಯುವತಿಯರ ಸೌಂದರ್ಯವನ್ನು ವರ್ಣಿಸಲು ಆದಿಶೇಷ ನಿಗೂ ಅಸಾಧ್ಯವು. ಅವರೀರ್ವರೂ ಸೂರ್ಯನಂತೆ ಬೆಳಗುತ್ತಿರುವರು. ಅವರು ಮಹಾ ಪುಣ್ಯ ಚರಿತ್ರೆಯರಾಗಿ ಭೂಲೋಕದ ಅಭಿವೃದ್ಧಿಗೆ ತಮ್ಮ ಶರೀರವನ್ನೇ ಧಾರೆಯೆರೆದುಕೊಡಲೆಳಸಿರುವರು. ಆ ಮಹಾ ಪುಣ್ಯವತಿ ಯರ ಆಶ್ರಮದ ನೆರಳಿನಲ್ಲಿ ವಿಹರಿಸುತ್ತಾ ವೇದೋಕ್ತವಿಚಾರಗಳನ್ನು ಕೇಳುತ್ತಾ, ಕಾಲಕಳೆಯಲು ದೇವತೆಗಳು ಆತುರಪಟ್ಟು ಅಲ್ಲಿಗೆ ಹೋಗು ತ್ತಿರುವರು" ಎಂದನು. ಆ ಮಾತುಗಳನ್ನು ಕೇಳಿದ ಕೂಡಲೇ ದೇವೇಂದ್ರನು ಆ ಕನ್ನಿಕೆಯರನ್ನೂ ಆ ಪ್ರದೇಶವನ್ನೂ ನೋಡಲೆಳಸಿ ಕೂಡಲೆ ವಿಮಾನಾ

ರೂಢನಾಗಿ ಗಜೇಂದ್ರಗಿರಿಯು ಬಳಿಗೈತಂದು, ಕೆಳಗಿಳಿದು ತಾನೊಬ್ಬನೇ ಮರಗಳ ಮರೆಯಲ್ಲೇ ನಡೆದು ಬರುತ್ತಾ, ದೇವೋದ್ಯಾನದ ಚೆಲುವನ್ನು ಧಿಕ್ಕರಿಸುತಿದ್ದ ಆ ಉದ್ಯಾನವನದ ಅಂದಚಂದಕ್ಕೆ ಮರುಳಾಗಿ ಮೈಮರೆತು ತಂಗಾಳಿಗೆ ಮೈಯನ್ನೊಡ್ಡಿ ಒಂದು ಬಂಡೆಕಲ್ಲಿನ ಮೇಲೆ ಕುಳಿತುಬಿಟ್ಟನು.

ಆಗ ಕನಕೆ ಸುಜ್ಯೋತಿಯರು ಪದ್ಮಾಕರದ ಬಳಿಗೆ ಬಂದರು. ಅವರ ಸೌಂದರ್ಯವು ಅಪ್ಸರಸ್ತ್ರೀಯರ ಸೌಂದರ್ಯವನ್ನೂ ಧಿಕ್ಕರಿಸುವಂತಿತ್ತು. ಅವರ ಬೆಡಗು ಇಂದ್ರಿಯನಿಗ್ರಹ ಮಾಡಿದವನನ್ನೂ ಮರುಳು ಮಾಡು ವಂತಿತ್ತು. ಅವರ ಕಡೆಗಣ್ಣ ತುದಿನೋಟ, ಮಂದಹಾಸದ ನಗು, ವಿಲಾ ಸದ ನಡೆ, ಬಳ್ಳಿಯಂತೆ ಬಳುಕುತ್ತಿದ್ದ ದೇಹ ಇತ್ಯಾದಿ ಅಂಗಚೇಷ್ಟೆಗಳನ್ನು ನೋಡಿ ಭೋಗತತ್ಪರನಾದ ದೇವೇಂದ್ರನು ಪೂರ್ಣ ಮನಸೋತು ಮೋಹ ಪರವಶನಾಗಿ ಅವರಿದಿರಲ್ಲಿ ಬಂದು ನಿಂತನು. ಅವನನ್ನು ಕಂಡಕೂಡಲೆ, ಬೇಡನನ್ನು ಕಂಡ ಹುಲ್ಲೆ ಮರಿಯಂತೆ ಯುವತಿಯರು ಗವಿಯ ಕಡೆ ಓಡಲಾರಂಭಿಸಿದರು. ಆದರೆ ದೇವೇಂದ್ರನು ಅವರನ್ನು ಅಡ್ಡಗಟ್ಟಿ,— "ಎಲೈ ಸುಂದರೀಮಣಿಯರೇ, ನೀವೇಕೆ ಬೆದರಿ ಓಡುವಿರಿ? ನೋಡಿರಿ ನಾನು ದೇವೇಂದ್ರನು, ಸುರಾಧಿಪತಿಯು. ನನ್ನ ಮನೋಭೀಷ್ಟವನ್ನು ಸಲ್ಲಿಸಿರಿ. ನಿಮ್ಮ ಉದ್ಯಾನವನದಲ್ಲಿ ಅರಳಿ ಕಂಗೊಳಿಸುವ ಪುಷ್ಪಗಳು ರಮಣಿಯರ ಹಸ್ತವನ್ನು ಸೇರಿ ಅವರ ಮನಸ್ಸಿಗೆ ಆನಂದವನ್ನುಂಟು ಮಾಡದಿದ್ದರೆ, ಹೇಗೆ ನಿಷ್ಪ್ರಯೋಜನವಾಗುವವೋ, ಹಾಗೆಯೇ ನಿಮ್ಮ ಯೌವನವೂ ಪುರುಷರ ಸಂಗವನ್ನು ಬಯಸದಿದ್ದರೆ ನಿರರ್ಥಕವಾಗುವುದು. ನವಯೌವನ ಕಿಶೋರಿಯರಾದ ನೀವು ಪುರುಷರ ಭೋಗಕ್ಕೆ ಅರ್ಹರು. ನಿಮಗೆ ಅರಣ್ಯವಾಸವು ಯೋಗ್ಯವಲ್ಲವು. ಸೌಂದರ್ಯವತಿಯರಾದ ನೀವು ಅಂತಃಪುರದ ವೈಭವವನ್ನು ಆಶಿಸದೆ ಇಲ್ಲಿ ಕಾಲ ಕಳೆಯುವುದರಿಂದ ನಿಮ್ಮ ಜನ್ಮವೇ ಸಾರ್ಥಕವಾಗದಂತಾಗಿದೆ. ರಮಣೀಯರೇ ನನ್ನ ಹೃದ ಯವು ನಿಮ್ಮ ಸೌಂದರ್ಯದ ಮಿಂಚಿನ ಪ್ರಕಾಶಕ್ಕೆ ಸಿಕ್ಕಿ ಉರಿಯು ಹತ್ತಿದೆ. ರಮಣಿಯರೇ ನನ್ನ ಅಪೇಕ್ಷೆಯನ್ನು ಸಾಗಗೊಡಿರಿ. ನನ್ನಿಚ್ಛೆಯಂತೆ ನಡೆ ದರೆ ದೇವಲೋಕದ ವೈಭವವನ್ನೆಲ್ಲಾ ನಿಮ್ಮ ಪಾದದಡಿಯಲ್ಲ ತಂದಿಡು ವೆನು" ಎಂದನು.

ಆ ಮಾತುಗಳನ್ನು ಕೇಳಿ ಕನಕೆಯು ಸಿಟ್ಟಿಗೊಂಡು – ಎಲೈ ದೇವೇಂದ್ರನೇ, ಸ್ವರ್ಗಾಧಿಪತಿಯೆಂದೆನಿಸಿಕೊಂಡು ಇಂಥಾ ಹೇಯಕರವಾದ ಮಾತುಗಳನ್ನಾಡಲು ನಿನಗೆ ನಾಚಿಗೆಯಾಗುವುದಿಲ್ಲವೇ? ಅಬಲೆಯರಾದ ನಮ್ಮನ್ನು ಅಡ್ಡಗಟ್ಟಿ ಈ ರೀತಿಯಾಗಿ ಪೀಡಿಸುವುದು ನಿನ್ನ ಹೆಸರಿಗೆ ತಕ್ಕ ಗೌರವವೇ? ದೇವೇಂದ್ರನೆನಿಸಿಕೊಂಡ ನಿನಗೆ ಈ ಕೃತ್ಯವು ಯುಕ್ತವಾದುದಲ್ಲ. ನೀನೀಗ ದಾರಿಬಿಟ್ಟು ಅತ್ತ ಸರಿ. ಇಂದ್ರಿಯಸುಖಕ್ಕೆ ಆಶೆಪಡದೆ ನೀನೀಗ ದೇವಲೋಕಕ್ಕೆ ನಡೆ. ನಾವೆಂದೂ ನಿನ್ನ ಮೋಸದ ಬಲೆಗೆ ಸಿಕ್ಕಿಬಿದ್ದು ನಿನ್ನ ಕಾಮೇಚ್ಛೆಯನ್ನು ನಡೆಸಲಾರೆವು" ಎಂದಳು.

ಆಗಲಾ ದೇವೇಂದ್ರನು–"ರಮಣಿಯರೇ! ನಿಮ್ಮ ಸೌಂದರ್ಯವು ಜಡ ಸನ್ಯಾಸಿಗಳನ್ನು ಮರುಳುಗೊಳಿಸುವಂತಿದೆ. ಹಾಗಿರುವಲ್ಲಿ ಭೋಗಾಸಕ್ತನಾದ ನನ್ನಂಥವನ ಪಾಡೇನು? ನಿಮ್ಮ ಸೌಂದರ್ಯಕ್ಕೆ ಮೆಚ್ಚಿ ನಾನು ನಿಮ್ಮ ಗುಲಾಮನಾಗಿರುವೆನು. ನೀವಿಚ್ಛಿಸಿದ ವಸ್ತುಗಳನ್ನು ಅರೆಗಳಿಗೆಯೊಳಗಾಗಿ ತರಿಸಿಕೊಡುವೆನು. ನಿಮ್ಮ ಅಂಗಸಂಗದಿಂದೊಮ್ಮೆ ನನ್ನನ್ನು ತೃಪ್ತಿಗೊಳಿಸಿರಿ" ಎಂದು ಬೇಡಿಕೊಂಡನು ಆದರೆ ಕನ್ನಿಕೆಯರಿಗಾದರೋ ರೋಷವು ನೆತ್ತಿಗೇರಿತು. ನಾಕಲೋಕಾಧಿಪನ ಕುತ್ಸಿತ ವರ್ತನೆಯು ಅವರನ್ನು ಬೆಪ್ಪುಗೊಳಿಸಿತು. ಆಗ ಸುಜ್ಯೋತಿಯು ಕಠಿಣ ಸ್ವರದಿಂದ "ಎಲೈ ಸುರಾಧಿಪನೇ! ನೀನು ಕಾಮೋನ್ಮತ್ತನಾಗಿ ಹುಚ್ಚನಾಗಿರುವೆ. ನಿನಗೀ ವರ್ತನವು ಸಲ್ಲದು. ನಿನ್ನ ಕಾಮುಕ ವ್ಯಾಪಾರಗಳಿಗೆ ನಾವು ಮನಗೊಡಲಾರೆವು. ನಿಮ್ಮ ವೈಭವದಿಂದ ನಮಗೆಳ್ಳಷ್ಟೂ ಪ್ರಯೋಜನವಿಲ್ಲ. ನಮ್ಮಾ ಜನುಮದಲ್ಲಿ ಪರೋಪಕಾರವನ್ನು ಮಾಡಿ ಕೃತಾರ್ಥರಾಗಬೇಕೆಂದು ನಿಶ್ಚಯಿಸಿರುವೆವು. ಭೂಮಿಯಲ್ಲಿ ಲೋಕೋಪಕಾರವಾದ ಕಾರ್ಯಕ್ಕೆ ಕೈಹಚ್ಚಿ, ನಮ್ಮ ದೇಹವನ್ನೇ ಸಮಸ್ತ ಜೀವರಾಶಿಗಳ ಹಿತಕ್ಕಾಗಿ ಧಾರೆಯೆರೆಯಬೇಕೆಂದಿರುವೆವು. ಆದಕಾರಣ ಅನೇಕ ವರ್ಷಗಳ ತನಕ ತಪಸ್ಸುಮಾಡಿ, ಬ್ರಹ್ಮ, ವಿಷ್ಣು, ಮಹೇಶ್ವರರಿಂದ ವರಗಳನ್ನು ಪಡೆದು, ಹೊಳೆಯಾಗಿ ಹರಿದು ಭೂಲೋಕದ ಜಂತು ಸಂತತಿಗಳಿಗೆಲ್ಲಾ ಜೀವನಾಧಾರಿಗಳಾಗಬೇಕೆಂದು ಹಠಹಿಡಿದಿರುವೆವು. ನಿನ್ನ ವೈಭವವನ್ನೆಲ್ಲಾ ಅಪ್ಸರೆಯರಿಗೆ ತೋರಿಸು. ನಮಗೆಳ್ಳಷ್ಟೂ ಆಶೆಯು

ನಿನ್ನ ಸಿರಿಸಂಪತ್ತಿನಲ್ಲಿರುವುದಿಲ್ಲ. ನೀನೀಗ ನಮ್ಮ ಗೊಡವೆಗೆ ಬಾರದೆ ನಿನ್ನ ದಾರಿಹಿಡಿದು ಹೋಗು" ಎಂದು ಹೇಳಿ ಮುಂದೆ ಕಾಲಿಟ್ಟಳು.

ಆದರೂ ದೇವೇಂದ್ರನು ಆ ಹಿತವಾಕ್ಯಗಳಿಗೆ ಮನಗೊಡದೆ, ಮದೋನ್ಮತ್ತನಾಗಿ "ಸುಂದರೀಮಣಿಯರೇ! ಬಳಸದ ಕಬ್ಬಿಣದಂತೆ ಕಾಮಬಾಣಕ್ಕೆರವಾಗದ ಯೌವನವು ತುಕ್ಕುಹಿಡಿದು ನಿಷ್ಪ್ರಯೋಜನವಾಗಿ ಹಾಳಾಗಿ ಹೋಗುವುದು. ನೀವಿನ್ನೂ ತರಳೆಯರು. ಇಂದ್ರಿಯಸುಖವನ್ನರಿಯದವರು. ಅಡವಿಯಲ್ಲಿಯೇ ಜೀವಿಸುತ್ತಿದ್ದುದರಿಂದ ಮನುಷ್ಯಜನ್ಮದ ಸುಖವು ನಿಮಗರಿಯದು. ವಿಷಯಸುಖಕ್ಕೆರವಾಗದ ಮನುಷ್ಯಜನ್ಮವು ವ್ಯರ್ಥವು. ನೀವೀಗ ಹೊಳೆಯಾಗಿ ಹರಿಯುವುದುಚಿತವಲ್ಲ. ನನ್ನೊಡನೆ ಕೆಲಕಾಲವಿದ್ದು ಅನಂತರ ಬೇಕಾದರೆ ನಿಮ್ಮಿಷ್ಟದಂತೆ ಮಾಡಿರಿ" ಎಂದೆನುತ ಸಮೀಪಕ್ಕೈತಂದನು. ಅದನ್ನು ಬಾಲೆಯರು ನೋಡಿ, ದುರುಳರ ಮುಂದೆ ಹಿತವಚನಗಳು ಸಲ್ಲವೆಂದೆಣಿಸಿ ರೌದ್ರಾವೇಶದಿಂದ- "ಎಲೈ ದುಷ್ಟನೇ ಅತ್ತ ಸರಿ" ಎಂದೆಂದು ಸ್ವಲ್ಪ ಸರಿದುನಿಂತರು. ಆದರೆ ಕಾಮಾಂಧನಾಗಿದ್ದ ದೇವೇಂದ್ರನು ಅವರನ್ನು ತಬ್ಬಿಕೊಳ್ಳಲು ಕೈಚಾಚಿದನು. ಆಗಲಾ ರಮಣಿಯರು ಮುಂದೆ ಪರಿಣಾಮವಿಲ್ಲವೆಂದೆಣಿಸಿ, ಅವನ ಕೈಗಳಿಂದ ತಪ್ಪಿಸಿಕೊಂಡು, ತಮ್ಮ ಇಂಗಿತದಂತೆ ಆಗಲೇ ನೀರಾಗುವುದು ಸರಿಯೆಂದೆಣಿಸಿ, ಪದ್ಮಾಕರದೊಳಗೆ ಧುಮುಕಿದರು. ಒಡನೆ ನೀರು ಉಕ್ಕೇರಿ ಪ್ರವಾಹವಾಗಿ ಹರಿಯಲಾರಂಭಿಸಿತು. ಅದನ್ನು ದೇವೇಂದ್ರನು ನೋಡಿ, ಹತಾಶನಾಗಿ ಕೋಪಗೊಂಡು-"ನೀವಿಬ್ಬರೂ ಅಲ್ಪಜಲರಾಗಿರಿ" ಎಂದು ಶಾಪವನ್ನಿತ್ತನು. ಕೂಡಲೆ ಉಕ್ಕೇರಿದ ನೀರು ಇಳಿದುಹೋಯಿತು. ಆಗ ಇಂದ್ರನ ಕೋಪವೂ ಶಮನವಾಯಿತು. ಒಡನೆ ತಾನು ಮಾಡಿದ ಅನರ್ಥವು ಒಮ್ಮಿಗೆ ಮನಸ್ಸಿಗೆ ಹೊಳೆಯಲು ದೇವೇಂದ್ರನು ಸೌಮ್ಯನಾಗಿ ಪಶ್ಚಾತ್ತಾಪಪಟ್ಟನು. ತನ್ನ ಹೇಯನಾದ ನಡತೆಯನ್ನೂ ಕುವರಿಯರ ಮಹೋನ್ನತಿಯ ಕಾರ್ಯವನ್ನೂ ಹೋಲಿಸಿ ನೋಡಿ, ತಾನು ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಅವರನ್ನು ಕೇಳಿಕೊಂಡು ಪುನಃ "ಲೋಪಾಮುದ್ರೆಯ ಸ್ಪರ್ಶವು ನಿಮಗುಂಟಾದಾಗ ನೀವು ಹೊಳೆಯಾಗಿ ಹರಿದು ಅವಳೊಡನೆ ಕಡಲನ್ನು ಸೇರುವಿರಿ" ಎಂದು ಮರುಶಾಪವನ್ನು ಕೊಟ್ಟು ತಾನು ವೈಜಯಂತಿಯ ಕಡೆ ನಡೆದನು.

ಇತ್ತ ಪದ್ಮಾಕರದಲ್ಲಿ ಧುಮುಕಿದ ಕುವರಿಯರಲ್ಲಿ ಕನಕೆಯು ಅಲ್ಪ ಜಲದಿಂದ ಹೊರಬಿದ್ದು ಸ್ವಲ್ಪ ದೂರ ಹೋಗಲು, ಸುಜ್ಯೋತಿಯು ಗುಪ್ತ ಗಾಮಿನಿಯಾಗಿ ಕಾಣಿಸಿಕೊಂಡು ಅವಳನ್ನು ಕಲೆತಳು. ಆದರೆ, ಅಲ್ಪ ಜಲರಾದ್ದರಿಂದ ಮುಂದೆ ಹೋಗಲು ಶಕ್ತಿ ಸಾಲದೆ ಅಲ್ಲಿಯೇ ಈಶ್ವರನ ಧ್ಯಾನಮಾಡುತ್ತಾ ನಿಂತುಬಿಟ್ಟರು ಮೊದಲಿನ ಪದ್ಮಾಕರವೂ ಹೊಳೆಯೂ ಒಂದಾಗಿ ಒಂದು ಉದ್ದವಾದ ಸರೋವರವು ಅಲ್ಲಿ ಕಂಗೊಳಿಸಿತು. ಅವರಿಬ್ಬರೂ ನೆಟ್ಟು ಬೆಳಸಿದ್ದ ಪುಷ್ಪಲತೆಗಳನ್ನು ತಕ್ಕಂತೆ ಪೋಷಣೆ ಮಾಡಲು ಯಾರೂ ಇಲ್ಲದಾಗಲು ಉದ್ಯಾನವನವು ದೊಡ್ಡ ಘೋರಾರಣ್ಯವಾಗಿ ಪರಿಣಮಿಸಿ, ಪುಷ್ಪಲತೆಗಳು ಅಡಗಿಹೋದವು. ದೇವತೆಗಳೂ ಕ್ರೀಡಾವಿಲಾಸಕ್ಕೆ ಬಾರದೆ ಕನಕೆ ಸುಜ್ಯೋತಿಯರ ಸ್ಥಿತಿಯನ್ನು ನೆನೆದು ಸ್ವರ್ಗಲೋಕದಲ್ಲಿ ಅವರಿಗೆ ಅಭ್ಯುದಯವನ್ನು ಕೋರುತ್ತಾ ನಿಂತುಬಿಟ್ಟರು. ಆ ಪ್ರದೇಶವು ಅತಿಭಯಾನಕವಾದ ಪ್ರದೇಶವಾಗಿ ತೋರಿತು.

# ವಿಂಧ್ಯಗರ್ವಭಂಗ

ಅದೊಂದು ದುರ್ದಿನ. ಭೂಲೋಕದಲ್ಲೆಲ್ಲಿ ನೋಡಿದರೂ ಅಸಂಗತವೇ. ಪ್ರಾಣಿಗಳೂ, ಪಕ್ಷಿಗಳೂ, ಮನುಷ್ಯರೂ ಮೊರೆಯಿಡಲಾರಂಭಿಸಿದರು. ಗಿಡವೃಕ್ಷಾದಿಗಳು ಬಾಡಿ ಬೆಂಡಾದವು. ಫಲಪುಷ್ಪಗಳಳಿದವು. ವಾಯುವಿನ ಗತಿಯು ಬದಲಾಯಿತು. ಲೋಕದಲ್ಲಿ ಒಂದು ಪಕ್ಕದಲ್ಲಿ ಮಾತ್ರ ಜಾಜ್ವಲ್ಯಮಾನವಾದ ಸೂರ್ಯರಶ್ಮಿಗಳು ಪ್ರಕಾಶಿಸುತಿದ್ದುವು. ಇನ್ನೊಂದು ಕಡೆಯಲ್ಲಿ ನಿಬಿಡವಾದ ತಿಮಿರರಾಶಿಯು ಜೀವರಾಶಿಯನ್ನೆಲ್ಲಾ ಅಪಾರವಾದ ಶೋಕರಾಶಿಗೊಡ್ಡಿದ್ದಿತು ಒಂದು ಭಾಗದಲ್ಲಿ ಮಾತ್ರ ದಹಿಸುತಿದ್ದ ಸೆಕೆ, ವಿರೋಧಪಾರ್ಶ್ವದಲ್ಲಿ ಅಳಿಸುತ್ತಿದ್ದ ಛಳಿ. ಇದನ್ನೆಲ್ಲಾ ನೋಡಿ ಭೂದೇವಿಯೇ ಕಂಗಾಲಾಗಿ ಹೋಗಿದ್ದಳು. ಈ ವಿಚಿತ್ರ ಘಟನೆಯಿಂದ ಲೋಕವು ತಳಮಳವಾಗಿ ಹೋಗಿತ್ತು.

ಆಗ ಆಗಸ್ತ್ಯನು ತನ್ನ ಸಹಧರ್ಮಿಣಿಯೊಡನೆ ಸರಸ ಸಲ್ಲಾಪಗಳನ್ನಾಡುತ್ತಾ ತನ್ನ ಮನೆಯ ಮುಂಗಡೆ ಜಗುಲಿಯಲ್ಲಿ ಕುಳಿತಿದ್ದನು. ಭೂಲೋಕದಲ್ಲಿ ನಡೆವ ವಿಪರೀತ ಸಂಘಟನೆಯನ್ನು ನೋಡಿ ಆವರೀರ್ವರು

ಬೆರಗಾಗಿಹೋಗಿದ್ದರು. ಅಷ್ಟರಲ್ಲಿ ಸುರಗುರುವಾದ ಬೃಹಸ್ಪತಿಯು ಅತ್ಯಂತ ಶೋಕಾಕುಲಚಿತ್ತನಾಗಿ ಅಗಸ್ತ್ಯನ ಮುಂದೆ ಕೈಜೋಡಿಸಿ ನಿಂದು-"ಓ ಮುನಿಪುಂಗವನೇ ಇಂದೀಗ ಪ್ರಮಾದವಾಯಿತು. ಪ್ರಮಾದ ವಾಯಿತು. ನೀನೆಮ್ಮನು ಸಲಹು" ಎಂದು ಉಸಿರುಗಟ್ಟಿ ನುಡಿದನು. ಅಗಸ್ತ್ಯನದ ಕೇಳಿ ಆಶ್ಚರ್ಯಾನ್ವಿತನಾಗಿ-"ಮೇಧಾವಿಯೇ! ನನ್ನಿಂದಾಗ ಬೇಕಾದ ಕಾರ್ಯವೇನಿರುವುದು. ಮರೆಮಾಚವೆ ಅರುಹು" ಎಂದು ಹೇಳಿ ಉಚಿತವಾದ ಪೀಠವನ್ನಿತ್ತು ತನ್ನ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡನು.

ಆಗ ಸುರಗುರುವು-ಓ ಮುನಿಕುಲೋತ್ತಮನೇ! ನಾನು ಅರುಹ ಬೇಕೆಂದಿರುವ ವೃತ್ತಾಂತವು ಮಹಾ ವಿಶೇಷವಾದುದು. ನಿನ್ನಿಂದ ಮಹತ್ತಾದ ಕಾರ್ಯವಾಗಬೇಕಾಗಿದೆ. ಆ ಕಾರ್ಯವನ್ನು ನೆರ ವೇರಿಸಿಕೊಡುವೆನೆಂದು ಅಭಯ ವಚನವನ್ನಿತ್ತರೆ ನಾನೀಗಲೇ ಉಸುರು ವೆನು ಎಂದನು. ಆ ಮಾತನ್ನು ಅಗಸ್ತ್ಯನು ಕೇಳಿ "ದೇವಕುಲೋ ತ್ತಮನೇ ನನ್ನಿಂದ ಸಾಧ್ಯವಾಗುವುದಾದರೆ ಲೋಕಹಿತಕ್ಕಾಗಿ ಯಾವ ಕೆಲಸವನ್ನು ಬೇಕಾದರೂ ಮಾಡುವೆನು. ನನ್ನಿಂದೇನಾಗಬೇಕೆಂಬುದನ್ನು ಒಡನೆ ತಿಳುಹು" ಎಂದು ಹೇಳಲು ಆ ಗುರುವರ್ಯನು—ಎಲೈ ಮುನಿ ಪುಂಗವನೆ ಲಾಲಿಸು. ಭೂಲೋಕದಲ್ಲಿ ಅನರ್ಥವಾಗುವ ಸಂಭವ ಪೊದಗಿದೆ. ಸಕಲ ಜೀವರಾಶಿಗಳ ಅಂತಿಮಕಾಲವು ಒದಗಿದಂತೆ ತೋರುತ್ತಿದೆ. ಸೂರ್ಯದೇವನ ರಥವು ಸ್ತಬ್ಧವಾಗಿ ನಿಂತುಬಿಟ್ಟಿದೆ. ವಾಯುವು ಸುಳಿಯದೆ ಪ್ರಾಣಧಾರಣೆಯು ಪ್ರಾಣಿಗಳಿಗಸಾಧ್ಯವಾಗಿ ಹೋಗಿದೆ. ತಮೋಮಂಡಲವು ಭೂಮಿಯ ಅರ್ಧಭಾಗವನ್ನೂ ರಜೋ ಮಂಡಲವು ಇನ್ನರ್ಧ ಭಾಗವನ್ನೂ ಕವಿದು ಸ್ತಬ್ಧವಾಗಿ ನಿಂತಿವೆ. ಹಗಲು ರಾತ್ರಿಗಳಾಗದೆ ಅನೇಕ ಅನಾಹುತಗಳು ಭೂಮಂಡಲದಲ್ಲಿ ನಡೆಯುತ್ತಿವೆ. ಅದನ್ನು ಪರಿಹರಿಸಲು ನೀನೇ ಶಕ್ಯನು" ಎಂದನು.

ಆಗ ಗುರುವಿನ ಮಾತುಗಳನ್ನು ಕೇಳಿ ಅಗಸ್ತ್ಯನು ಆಶ್ಚರ್ಯದಿಂದ "ವಿಬುಧವರ್ಯನೇ ಈ ಅನಾಹುತಗಳಿಗೆಲ್ಲಾ ಕಾರಣವಾವುದು. ನಾನು ಯಾವ ರೀತಿಯಲ್ಲಿ ಅವುಗಳನ್ನು ಪರಿಹರಿಸಲಿ" ಎಂದು ಕೇಳಲು ಬೃಹ ಸ್ಪತಿಯು ಇಂತೆಂದನು-ಅಗಸ್ತ್ಯನೇ ಇವಕ್ಕೆಲ್ಲಾ ವಿಂಧ್ಯರಾಜನೇ

ಕಾರಣನು. ಪರ್ವತೋತ್ತಮನಾದ ಮೇರುರಾಜನು ತನ್ನ ಸಾರ್ವಭೌಮ ಪದವಿಯನ್ನು ತನ್ನ ಪುತ್ರನಾದ ಮಂದರನಿಗರ್ಪಿಸಲು ವಿಂಧ್ಯರಾಜನು ಮತ್ಸರಗೊಂಡು, ರೋಷಾವೇಶದಿಂದ ಪರ್ವತಗಳನ್ನೆಲ್ಲಾ ಜರಿದು, ತಾನೂ ರಾಜನಾಗಬೇಕೆಂದು ಹವಣಿಸಿ ರುದ್ರನನ್ನು ಕುರಿತು ತಪಸ್ಸುಮಾಡಿದನು. ಅವನ ಘೋರ ತಪಸ್ಸಿಗೆ ರುದ್ರನು ಮೆಚ್ಚಿ ವರವ ಬೇಡೆಂದೆನಲು ತಾನು ನೆನಸಿದ ಮಾತ್ರಕ್ಕೆ ಬೆಳೆಯುತ್ತಾ ಹೋಗುವಂತೆಯೂ ಎಲ್ಲಾ ಪರ್ವತ ಗಳಿಗಿಂತ ಎತ್ತರವಾಗಿ ಪರ್ವತರಾಜನಾಗುವಂತೆಯೂ ವರವನೀಯ ಬೇಕೆಂದು ಕೇಳಿಕೊಳ್ಳಲು ಪರಮೇಶ್ವರನು ಹಾಗೆಯೇ ಆಗಲೆಂದು ವರ ವನ್ನಿತ್ತನು. ವಿಂಧ್ಯಾದ್ರಿಯು ತಾನು ಒಡನೆ ವೃದ್ಧಿಯನ್ನು ಬಯಸಿ, ಎಲ್ಲಾ ಪರ್ವತಗಳಿಗಿಂತಲೂ ಎತ್ತರವಾಗಬೇಕೆಂದಾಲೋಚಿಸಿ ಅತಿ ಆಡಂಬರ ದಿಂದ ಬೆಳೆಯುತ್ತಾ ಹೋಗಿ, ಮೇಘ ಮಂಡಲವನ್ನು ಭೇದಿಸಿ ವಾಯು ಮಂಡಲವನ್ನು ದಾಟಿ, ನಭೋ ಮಂಡಲವನ್ನು ಸೇರಿ ಸೂರ್ಯನ ರಥಕ್ಕೆ ಹಾದಿಯನ್ನು ಬಿಡದೆ ಇನ್ನೂ ಬೆಳೆಯುತ್ತಿರುವದು ಸೂರ್ಯನು ನಭೋ ಮಂಡಲದ ಮಧ್ಯದಲ್ಲಿ ಸಿಕ್ಕಿಬಿದ್ದು ಮುಂದೆ ಹೋಗಲು ಉಪಾಯ ಕಾಣದೆ ತತ್ತರಿಸುತ್ತಿರುವನು. ಆದ್ದರಿಂದ ಅಧಃಲೋಕಕ್ಕೆ ಬೆಳಕೇ ಇಲ್ಲ ದಂತಾಗಿರುವುದು. ಭೂಲೋಕವೆಲ್ಲಾ ತಳಮಳವಾಗಿರುವದು. ಬ್ರಹ್ಮ ಸೃಷ್ಟಿಯ ಅಂತಿಮ ಕಾಲವು ಸನ್ನಿಹಿತವಾದಂತೆ ತೋರುವುದು. ಆದ್ದರಿಂದ ಎಲೈ ಶಿವಭಕ್ತ ಶ್ರೇಷ್ಠನೇ ನೀನಾ ವಿಂಧ್ಯಾದ್ರಿಯ ದರ್ಪವನ್ನು ಅಳಿಸಿ, ಲೋಕೋದ್ಧಾರ ಮಾಡಬೇಕು

ಅಗಸ್ತ್ಯನು ಗುರುವಚನಗಳನ್ನು ಕೇಳಿ ಕರುಣಾನ್ವಿತನಾಗಿ ತನ್ನ ಸಹಧರ್ಮಿಣಿಯೊಡನೆ ವಿಚಾರಿಸಿ, ವಿಂಧ್ಯಾದ್ರಿಯ ಹಠವನ್ನು ತಗ್ಗಿಸಿ ಲೋಕಹಿತವನ್ನುಂಟುಮಾಡುವೆನೆಂದು ಅಭಯವಚನವನ್ನೀಯಲು ಸುರ ಗುರು ಸ್ವಸ್ಥಚಿತ್ತನಾಗಿ ದೇವಲೋಕಕ್ಕೆ ತೆರಳಿದನು. ಇತ್ತ ಕುಂಭಜನು ವಿಂಧ್ಯದ ದರ್ಪವನ್ನಳಿಸಲು ಕವೇರ ತನಯೆಯೊಡನೆ ಬಗೆಬಗೆಯಾಗಿ ಚಿಂತಿಸಿದನು. ಆದರೆ ಯಾವ ಉಪಾಯವೂ ಸರಿದೋರದಾಯಿತು. ಅಷ್ಟರಲ್ಲಿ ಪರಮೇಶ್ವರನು ನಿಜಪತ್ನಿಯೊಡನೆ ನಂದಿವಾಹನನಾಗಿ ಬಂದು ಅಲ್ಲಿಳಿದು ಅಗಸ್ತ್ಯನನ್ನೂ ಕಾವೇರಿಯನ್ನೂ ಹರಸಿ-"ಭಕ್ತ ಶ್ರೇಷ್ಠನೇ

ನೀನು ಚಿಂತಿಸಬೇಡ. ನಿನ್ನ ಭಾಷೆಯು ನೆರವೇರಲು ಒಂದು ಸುಲಭ ಉಪಾಯವನ್ನು ಹೇಳಿಕೊಡುವೆನು. ಇಲ್ಲಿ ಬಾ" ಎಂದು ಪಕ್ಕಕ್ಕೆ ಕರೆದು ಅವನ ಕಿವಿಯಲ್ಲಿ ಏನೋ ಉಸುರಿದನು. ಅದನ್ನು ಕೇಳಿ ಆಗಸ್ತ್ಯನ ಮುಖವು ಬಿದ್ದುಹೋಯಿತು. ಆಗಲಾ ಪರಮೇಶ್ವರನು—"ಪುತ್ರನೇ ಲೋಕೋಪಕಾರಕ್ಕಾಗಿ ನಾವು ನಮ್ಮ ವಿಷಯಸುಖವನ್ನೆಲ್ಲಾ ಮರೆತು ಬಿಡಬೇಕಾಗುವುದು. ದಕ್ಷಿಣಾಪಥದಲ್ಲಿ ನೀನು ಮಾಡಬೇಕಾದ ಕೆಲಸವು ಹೆಚ್ಚಿರುವುದು. ದಂಡಕಾರಣ್ಯದ ಪಡುಗರೆಯಲ್ಲಿ ಸಹ್ಯಾದ್ರಿಮಲೆ ಎಂಬ ಪರ್ವತವು ಮಹಾ ಪವಿತ್ರವಾದುದು. ಅದರಲ್ಲಿರುವ ಬ್ರಹ್ಮಗಿರಿಯು ಸಪ್ತ ರಿಸಿಗಳ ವಾಸಸ್ಥಾನವು. ನೀನಲ್ಲಿ ನೆಲಸಿ ವೇದ ಶಾಸ್ತ್ರವನ್ನು ದಕ್ಷಿಣಾ ಪಥದಲ್ಲಿ ಹಬ್ಬಿಸಿ ಪುನೀತವಾದ ಆರ್ಯಧರ್ಮವನ್ನು ಅಲ್ಲಿ ಚಿರಸ್ಥಾಯಿ ಯಾಗಿ ಮಾಡು. ನಿನಗೆ ಶ್ರೇಯಸ್ಸೂ ಕೀರ್ತಿಯೂ ಲಭಿಸುವವು. ಸ್ವಗೃಹವನ್ನೂ ಸ್ವದೇಶವನ್ನೂ ಈಗಲೇ ಬಿಟ್ಟು ನನ್ನ ಮಾತಿನಂತೆ ನಡೆದರೆ ಭೂಲೋಕದ ಜೀವರಾಶಿಗಳೆಲ್ಲಾ ಉದ್ಧಾರವಾಗುವವು. ತ್ವರೆಮಾಡು. ಕಾಶೀ ಕ್ಷೇತ್ರವನ್ನೀಗಲೇ ಬಿಟ್ಟುಹೊರಡು." ನಿನಗೆ ಕಲ್ಯಾಣವಾಗುವುದು. ಎಂದು ಹೇಳಿ ಮಾಯವಾದನು.

ಆದರೆ ಅಗಸ್ತ್ಯನಿಗೆ ತನ್ನ ಜನ್ಮ ಭೂಮಿಯಾದ ಕಾಶೀಕ್ಷೇತ್ರವನ್ನು ಬಿಟ್ಟಗಲಲು ಮನಸ್ಸೇ ಒಡಂಬಡದು. ಬಹುಕಾಲದಿಂದ ಆಶ್ರಮವಾಸಿ ನಿಜಪತಿಯೊಡನೆ ಸುಖವಾಗಿ ಕಾಲಕಳೆದು, ಭಾಗೀರಥಿಯ ನಿರ್ಮಲೋ ದಕ ಸ್ನಾನದಿಂದ ಸಂತೃಪ್ತನಾಗಿ, ನಿತ್ಯವೂ ಪರ್ವತಶ್ರೇಷ್ಠನಾದ ಹಿಮ ವಂತನ ದರ್ಶನದಿಂದ ಪಾವನನಾಗಿ, ವಿಶ್ವನಾಥನ ಕೃಪೆಯಿಂದ ಪರಿ ಶುದ್ಧಾತ್ಮನಾಗಿ ಸಂಸಾರಲೋಲನಾಗಿದ್ದ ಅಗಸ್ತ್ಯನಿಗೆ ತನ್ನ ಬಾಲ್ಯದ ಆಟ ಮಂದಿರ, ತನ್ನ ಜನ್ಮ ಭೂಮಿಯಾದ ಕಾಶೀ ಕ್ಷೇತ್ರವನ್ನು ಬಿಡುವುದೆಂದರೆ ಅತಿಕಷ್ಟವಾಗಿ ತೋರಿತು. ಆದರೆ ಕಾವೇರಿಗಾದರೋ ತವರ್ಮನೆಯನ್ನು ಕಾಣಲು ತವಕಿಸುತಿದ್ದುದರಿಂದ ಈಶ್ವರನ ವಚನವು ಅಮೃತಮಯವಾಗಿ ತೋರಿತು. ಆದ್ದರಿಂದ ತಾವು ಕೊಟ್ಟ ಭಾಷೆಯಂತೆ ನಡೆಸಿಕೊಳ್ಳಲು ಕಾಶೀ ಕ್ಷೇತ್ರವನ್ನು ಬಿಟ್ಟು ಈಶ್ವರನು ಹೇಳಿದ ಉಪಾಯ ವನ್ನು ಅನುಸರಿಸದ ಹೊರತು ಬೇರೆ ದಾರಿಯೇ ಇಲ್ಲವೆಂದು ತನ್ನಪತಿಗೆ

ತಿಳಿಸಿ ಪ್ರಯಾಣ ಸನ್ನದ್ಧಳಾದಳು. ಹೇಗೂ ತಾನು ಕೊಟ್ಟ ಭಾಷೆಯಂತೆ ನಡಕೊಳ್ಳಲು ಏನು ಬೇಕಾದರೂ ಮಾಡಲು ಸಿದ್ಧನಿರಬೇಕೆಂದು ಗೊತ್ತು ಹಚ್ಚಿ ಅಗಸ್ತ್ಯನೂ ಈಶ್ವರೋಪದೇಶದಂತೆ ತನ್ನ ಶಿಷ್ಯಗಣವನ್ನು ನೆರಹಿ ವಿಂಧ್ಯರಾಜನ ನಗರಿಯ ಕಡೆ, ಪತ್ನೀ ಸಮೇತನಾಗಿ ನಡೆದನು. ಅತಿ ಸ್ವಲ್ಪಕಾಲದಲ್ಲಿಯೇ ವಿಂಧ್ಯ ನಗರಿಯನ್ನು ಸೇರಿದನು. ಅಲ್ಲಿಗೆ ಹಗಲಂತ್ಯವಾದಂತೆ ತೋರಿತು. ವಿಂಧ್ಯರಾಜನು ಗೋಡೆಯಂತೆ ಬೆಳೆದುದರಿಂದ ದಕ್ಷಿಣ ಪ್ರದೇಶವೆಲ್ಲಾ ಮಬ್ಬು ಮುಸುಕಿದ್ದಂತೆ ತೋರಿತು.

ವಿಂಧ್ಯರಾಜನು ಅಗಸ್ತ್ಯನ ಬರೋಣವನ್ನು ದೂರದಿಂದಲೇ ಕಂಡನು. ಮಹಾ ದೈನ್ಯಭಾವದಿಂದ ಅವನನ್ನು ಮನಸ್ಸಿನಲ್ಲಿಯೇ ಅರ್ಚಿಸಿ ಕೈಕಟ್ಟಿ ನಿಂತನು. ಆದರೆ ಅವನು ತನ್ನ ಕಡೆ ಯಾಕೆ ಧಾವಿಸಿ ಬರುತ್ತಿದ್ದನೆಂದು ಅವನಿಗೆ ಗೊತ್ತಾಗಲಿಲ್ಲ. ಅಗಸ್ತ್ಯನಾದರೋ ಗಂಭೀರವಾದ ಮುಖ ಮುದ್ರೆಯಿಂದ ಮಹಾ ವೇಗವಾಗಿ ನಡೆದುಬರುತಿದ್ದನು. ಅವನ ಬಲಗೈಯಲ್ಲಿ ಕಮಂಡಲು, ಎಡಗೈಯಲ್ಲಿ ದಂಡ, ಬೆನ್ನಮೇಲೆ ಕೃಷ್ಣಾಜಿನ, ಹಣೆಯಲ್ಲಿ ತ್ರಿಪುಂಡ್ರ ನಾಮ, ದೇಹದಲ್ಲಿ ಶೋಭಿಸುವ ಯಜ್ಞೋಪವೀತ, ಅವನ ರೀತಿಯು ಮಹದುಗ್ರವಾಗಿತ್ತು. ವಿಂಧ್ಯಾಚಲನನ್ನು ಕೆಣಕಿ ಅವನನ್ನು ನಾಶಪಡಿಸಬೇಕೆಂದು ನಿರ್ಧರಿಸಿ ಬರುತಿದ್ದನು. ಅವನ ಕಣ್ಣುಗಳು ಕಿಡಿಗಳನ್ನು ಕಾರುತಿದ್ದವು. ಅವನ ಮೈಯಲ್ಲಿ ಬೆವರು ಸುರಿಯುತಿತ್ತು.

ಅಗಸ್ತ್ಯನು ಮಹಾ ಕೋಪಿಷ್ಠನೆಂಬುದು ವಿಂಧ್ಯರಾಜನಿಗೆ ಮೊದಲೇ ತಿಳಿದಿತ್ತು. ಆದ್ದರಿಂದ ಅವನನ್ನು ಉಚಿತವಾದ ಮರ್ಯಾದೆಯಿಂದ ಸತ್ಕರಿಸಿ, ತನ್ನ ಬಳಿಯಲ್ಲೇ ಕೆಲವು ಕಾಲವಿರಿಸಿಕೊಂಡು ತನ್ನ ಶೌರ್ಯವನ್ನು ಕೊಚ್ಚಿ, ತಾನು ಶ್ರೇಷ್ಠನೆಂದೆನಿಸಿಕೊಳ್ಳಬೇಕೆಂದಿಚ್ಛಿಸಿದನು. ಆ ಮಹಾ ಮುನಿಯನ್ನು ಪೂಜಿಸಲು ಪೂಜಾ ದ್ರವ್ಯಗಳನ್ನೆಲ್ಲಾ ಸಿದ್ಧ ಮಾಡಿದನು. ಹೊಂಬಟ್ಟೆಗಳಲ್ಲಿ ಫಲಾಹಾರಾದಿ ಸಾಮಾಗ್ರಿಗಳನ್ನು ತರಿಸಿರಿಸಿದನು. ಕ್ಷೀರಾದಿ ಪಾನೀಯಗಳನ್ನೂ ಅಕ್ಷತೆ ತಾಂಬೂಲಾದಿ ಮಂಗಳ ದ್ರವ್ಯಗಳನ್ನೂ, ಬೆಳ್ಳಿಯ ತಂಬಿಗೆಗಳಲ್ಲಿ ನೀರನ್ನೂ ತರಿಸಿರಿಸಿದನು. ಉತ್ತಮವಾದ ಲತೆಗಳಿಂದ ಹೂಗಳನ್ನೆತ್ತಿಸಿ ತರಿಸಿಟ್ಟನು.

ತುಲಿಸಿಯ ಮಾಲೆಯನ್ನು ಸಿದ್ಧಪಡಿಸಿದನು. ಪರಿಮಳ ದ್ರವ್ಯಗಳನ್ನು ತಯಾರುಮಾಡಿಸಿ ಕುಸುಮಾಂಕಿತವಾದ ಬುರುಡೆಗಳಲ್ಲಿ ತುಂಬಿಸಿಡಿಸಿದನು.

ಅಷ್ಟರಲ್ಲಿ ಅಗಸ್ತ್ಯನ ಸವಾರಿ ಬಂತೇ ಬಂತು. ವಿಂಧ್ಯನು ಒಡನೆ ಮುನಿಯನ್ನು ಎದಿರುಗೊಂಡು, ನಮಸ್ಕರಿಸಿ ಪರಿವಾರ ಸಮೇತ ಕರೆತಂದನು. ತನ್ನ ಪತ್ನಿಯನ್ನು ಕರೆಯಿಸಿ ಮುನಿಪುಂಗವನ ಪಾದಗಳನ್ನು ತೊಳೆಯಿಸಿ, ವಜ್ರಪೀಠದಲ್ಲಿ ಕುಳ್ಳಿರಿಸಿ ಫಲಾಹಾರಾದಿಗಳನ್ನು ಮುನಿಯ ಮತ್ತು ಮುನಿಪತ್ನಿಯ ಮುಂದಿಟ್ಟು, ಕೈಜೋಡಿಸಿ, "ಮುನಿವರ್ಯನೇ ನನ್ನ ಆತಿಥ್ಯವನ್ನು ಸ್ವೀಕರಿಸಬೇಕು. ನಿಮ್ಮ ದರ್ಶನದಿಂದ ನಾನಿಂದು ಪಾವನನಾದೆನು. ನಿಮ್ಮ ಪಾದಸ್ಪರ್ಶದಿಂದ ಈ ಭೂಮಿಯು ಪುಣ್ಯತಮವಾಯಿತು" ಎಂದೆನಲು ಕುಂಭಜನು ನಸುನಕ್ಕು—"ಎಲೈ ವಿಂಧ್ಯಾಚಲನೇ, ನಿನ್ನ ಅತಿಥಿ ಸತ್ಕಾರಕ್ಕೆ ಮೆಚ್ಚಿದೆನು. ನಿನ್ನ ಕೀರ್ತಿಯು ಅಷ್ಟ ದಿಕ್ಕುಗಳಲ್ಲಿಯೂ ಹಬ್ಬಲಿ. ಆದರೆ ನೀನೀಪರಿ ದೇಹವನ್ನು ಬೆಳೆಯಿಸಲು ಕಾರಣವೇನು? ನಿನ್ನ ಮುಖವೇ ನನಗೆ ತೋರಲೊಲ್ಲದು" ಎಂದು ನುಡಿದನು.

ಮುನಿಯಾ ಮಾತುಗಳನ್ನು ವಿಂಧ್ಯರಾಜನು ಕೇಳಿ—'ಮುನಿಶ್ರೇಷ್ಠನೇ ಬಿನ್ನವಿಸುವೆನು, ಲಾಲಿಸು. ಗಿರಿರಾಜಪಟ್ಟವನ್ನು ಅತಿ ಶೌರ್ಯವಂತನಾದ ನನಗೆ ಕೊಡಲೊಪ್ಪದೆ ಹಿಮವಂತನು ಕುಬ್ಜನಾದ ಮಂದರನಿಗೆ ಮೇರುವಿಗೆ ಕೊಟ್ಟಿರುವನು. ಗಿರಿಗಳೆಲ್ಲೆಲ್ಲಾ ನಾನೇ ದೊಡ್ಡವನು. ಬಲದಲ್ಲಿಯೂ, ಯುಕ್ತಿಯುಲ್ಲಿಯೂ ನನಗೆ ಮಿಗಿಲಾದವರಾರೂ ಇಲ್ಲವು. ಮಹಾರುದ್ರನನ್ನೇ ತಪಶ್ಶಕ್ತಿಯಿಂದ ಮೆಚ್ಚಿಸಿ ನನ್ನಿಷ್ಟದಂತೆ ಗಾತ್ರದಲ್ಲಿಯೂ, ಉದ್ದದಲ್ಲಿಯೂ ಬೆಳೆಯುವ ಮಹಾಶಕ್ತಿಯನ್ನು ಪಡೆದಿರುವೆನು. ಆದರೂ ನನಗೆ ಗಿರಿರಾಜಪಟ್ಟವು ಲಭಿಸಲಿಲ್ಲ. ಮಂದರನು ಕಡಗೋಲಾಗಿ ಅಮೃತವನ್ನು ಪಡೆಯಲು ದೇವತೆಗಳಿಗೆ ಅನುಕೂಲನಾದ್ದರಿಂದ ಅವನೇ ಗಿರಿರಾಜನಾಗಿರುವನು ನಮ್ಮ ಗಿರಿಗಳೆಲ್ಲವೂ ಪಕ್ಷಪಾತಿಗಳು. ಆದ್ದರಿಂದ ನನ್ನನ್ನು ಪಟ್ಟಕ್ಕಾರಿಸದಾದರು. ಮುನಿಪುಂಗವನೆ ನೀನು ಬಂದುದು ನನ್ನ ಪುಣ್ಯವೇ ಸರಿ. ನೀನೆನಗೆ ಗಿರಿರಾಜ

ಪಟ್ಟಾಭಿಷೇಕವನ್ನು ಮಾಡಬೇಕು" ಎಂದು ವಿನಯದಿಂದ ಕೇಳಿಕೊಂಡನು.

ಮುನಿಯಾಗ ಹುಸಿ ನಗುನಗುತ್ತಾ–"ಎಲೈ, ವಿಂಧ್ಯನೇ ಮಂದರನು ಕ್ಷೀರಸಾಗರ ಮಥನ ಕಾಲದಲ್ಲಿ ಕಡಗೋಲಾಗಿ ದೇವತೆಗಳಿಗೆ ಅಮೃತವನ್ನು ದೊರಕಿಸಿಕೊಟ್ಟುದರಿಂದ ದೇವತೆಗಳು ಮಂದರನ ಪಕ್ಷವನ್ನು ಹಿಡಿದು ಅವನಿಗೆ ಪಟ್ಟಗಟ್ಟಿಸಿರಬೇಕು. ದೇವತೆಗಳು ಮಹಾ ಪಕ್ಷಪಾತಿಗಳು. ನೀನೀ ವಿಷಯವನ್ನು ಹೇಳಿದ್ದು ಒಳ್ಳೆಯದಾಯಿತು. ನಾನೂ ನಿನಗೆ ಕೈಲಾದ ಸಹಾಯವನ್ನು ಮಾಡುವೆನು. ನನಗೂ ಮಂದರನಿಗೂ ಏನೂ ಸಂಬಂಧವಿಲ್ಲ ಎಲ್ಲಾ ಗಿರಿಗಳನ್ನು ಸೌಂದರ್ಯದಲ್ಲಿಯೂ ಶೌರ್ಯದಲ್ಲಿಯೂ ಮೀರಿಸಿರುವ ನಿನ್ನನ್ನು ಬಿಟ್ಟು ದೇವತೆಗಳು ಮಂದರಗಿರಿಯ ಪಕ್ಷವನ್ನು ವಹಿಸಿದುದು ಮಹಾ ಅನ್ಯಾಯವು. ಭೂಷಣನೂ ಸುಗುಣನೂ ಆಗಿರುವ ವಿಂಧ್ಯನಿಗೆ ಭೂಲೋಕದಲ್ಲಿ ಸರಿಸಮಾನರಿಲ್ಲವು. ಗಿರಿರಾಜನಾಗಲು ನೀನೊಬ್ಬನರ್ಹನಲ್ಲದೆ ಮಿಕ್ಕವರಾರೂ ಯೋಗ್ಯರಲ್ಲವು. ನಿನ್ನಂತೆ ಮಹೋದರರೂ ದೀರ್ಘಕಾಯರೂ ಈ ಭೂಲೋಕದಲ್ಲಿ ನಾನಿನ್ನಾರನ್ನೂ ಕಂಡರಿಯೆನು. ಲೋಕಕ್ಕೆಲ್ಲಾ ಜೀವಪ್ರಾಯನಾಗಿರುವ ಸೂರ್ಯನನ್ನೇ ನೀನು ತಡೆಗಟ್ಟಿರುವೆ. ನಿನ್ನ ಕೀರ್ತಿಯು ದಿಗಂತ ವಿಶ್ರಾಂತವಾದುದು. ಆದರೆ ನಿನ್ನ ಮುಖವನ್ನು ನಾನು ಕಾಣದಾಗಿರುವೆನು ನೀನೊಮ್ಮೆ ಕುಳ್ಳಿರು. ನಿನ್ನ ಮುಖವನ್ನು ನೋಡಿ ಸಂತುಷ್ಟನಾಗುವೆನು" ಎಂದನು. ಆಗಲಾ ವಿಂಧ್ಯನು ಮಹಾಋಷಿಯ ಮಾತುಗಳನ್ನು ಕೇಳಿ ಮಹದಾನಂದಭರಿತನಾಗಿ "ಸಮುದ್ರವನ್ನೇ ಹೀರಿದ ನಿನ್ನ ಅಗಾಧವಾದ ಮಹಿಮೆಯನ್ನು ಬಣ್ಣಿಸಲಸದಳವು. ಓ! ಬ್ರಹ್ಮರಿಸಿಯೆ! ನನ್ನ ಮನೋಭೀಷ್ಟವನ್ನು ನೆರವೇರಿಸಿಕೊಡು" ಎಂದೆನುತ ಅಗಸ್ತ್ಯನ ಪಾದಗಳಿಗೆರಗಿದನು. ಋಷಿಯಾಗ–ವಿಂಧ್ಯನೇ ಸ್ವಸ್ಥಚಿತ್ತನಾಗು. ಮತ್ಸರಿಸಬೇಡ. ನೀನು ಹಾಗೆಯೇ ಮಲಗಿರು. ಪಟ್ಟಾಭಿಷೇಕಕ್ಕೆ ತಪತಿಯ ಪುಣ್ಯ ತೀರ್ಥವನ್ನು ತರಹೋಗುವೆನು. ಇನ್ನೊಮ್ಮೆ ನೀನು ಮೇಲಕ್ಕೆದ್ದರೆ ಆನಂತರ ತೀರ್ಥಾಭಿಷೇಕಮಾಡಲು ನನ್ನಿಂದ ಸಾಧ್ಯವಾಗುವುದು. ಕುಬ್ಜನಾದ ನಾನು ನಿನ್ನ ಶಿರಸ್ಸನ್ನು

ಮುಟ್ಟಲು ಶಕ್ತಿಯಿಲ್ಲದವನಾಗುವೆನು. ನಾನೊಡನೆ ಪರಿವಾರದೊಡನೆ ತಪತಿನದಿಯ ಬಳಿಗೈದಿ, ತೀರ್ಥಸ್ನಾನಮಾಡಿ, ನಿತ್ಯಕರ್ಮಗಳನ್ನು ತೀರಿಸಿ, ತೀರ್ಥವನ್ನು ಅಭಿಷೇಕಕ್ಕೆ ತರಹೋಗುವೆನು. ನೀನು ರವಷ್ಟು ವಿಶ್ರಮಿಸು. ಆದರೆ ನೀನು ಎದ್ದು ಪುನಃ ಬೆಳೆಯುತ್ತಾ ಹೋದರೆ ಖಂಡಿತ ನಾಗಿಯೂ ಕಾರ್ಯಹಾನಿಯುಂಟಾಗದಿರದು. ನನ್ನ ಮಾತನ್ನುಲ್ಲಂಘಿಸಿದೆ ಯಾದರೆ ಮೇರು ಪಕ್ಷವನ್ನು ವಹಿಸಿ ನಿನ್ನ ಶಿರಚ್ಛೇದನ ಮಾಡಿಸುವೆನು. ಎಂದು ಹೇಳಿ ಎದ್ದುನಿಂತನು. ವಿಂಧ್ಯರಾಜನು–"ಮುನಿವರ್ಯನೇ ನಿನ್ನ ಮಾತಿಗೆ ವ್ಯತಿರಿಕ್ತವಾಗಿ ಎಂದೂ ನಡೆಯಲಾರೆನು, ನಿನ್ನ ಬರೋಣ ವನ್ನೇ ನಿರೀಕ್ಷಿಸಿಕೊಂಡು ಕುಳಿತಿರುವೆನು." ಎಂದೆನಲು ಅಗಸ್ತ್ಯನು ನಿಜಪತ್ನಿಯೊಡನೆ ದಕ್ಷಿಣಾಪಥಗಮನಮಾಡಿದನು. ಲೋಕದಲ್ಲೆಲ್ಲಾ ಆನಂದವು ಹೊರಹೊಮ್ಮಿತು. ಸೂರ್ಯನ ರಥವು ನಭೋಮಂಡಲದಲ್ಲಿ ಥಟ್ಟನೆ ತೇಲಿಹೋಯಿತು. ಹಗಲು ರಾತ್ರಿಗಳು ಎಂದಿನಂತೆ ಒಂದ ನ್ನೊಂದನನುಸರಿಸಿ ಬಂದವು. ಜೀವರಾಶಿಗಳ ಬವಣೆಯು ಅಡಗಿತು. ವಿಂಧ್ಯಾಚಲನು ಅಗಸ್ತ್ಯನ ಬರವನ್ನೇ ನಿರೀಕ್ಷಿಸುತ್ತಾ ಕುಳಿತುಕೊಂಡನು.

ಮುನಿಯೂ ಕಾವೇರಿಯೂ ಶಿಷ್ಯವ್ರಾತದೊಡನೆ ದಕ್ಷಿಣದ ಬಯಲಿನ ಕಡೆ ನಡೆದರು. ಸುಲಭವಾಗಿ ವಿಂಧ್ಯನನ್ನು ಮೋಸಗೊಳಿಸಿದುದರಿಂದ ತುಂಬಾ ಹರ್ಷಿತರಾಗಿ ದಂಪತಿಗಳು ಆನಂದದಿಂದ ಮೆರೆವರು. ಆದ ರವರು ಪುನಃ ಆರ್ಯಾವರ್ತಕ್ಕೆ ಕಾಲಿಡಲೇ ಇಲ್ಲ. ದಂಡಕಾರಣ್ಯವನ್ನು ಹೊಕ್ಕು ಅಗಸ್ತ್ಯನು ಅಲ್ಲಲ್ಲಿ ಆಶ್ರಮಗಳನ್ನು ಹೂಡಿ ವೇದದ ಬೆಳಕನ್ನು ಕಾಡುಮೂಲೆಗಳಲ್ಲೂ ಗುಹೆ ಗವಿಗಳಲ್ಲೂ ಹರಡಿಸಿದನು. ಘೋರಾ ರಣ್ಯದ ನಿವಾಸಿಗಳಿಗೆ ವೇದ ಮಂತ್ರೋಪದೇಶಮಾಡಿ ಆರ್ಯಮತವನ್ನು ಹಬ್ಬಿಸಿದನು. ಮತಬೋಧನೆಗನುಕೂಲವಾಗುವಂತೆಯೂ ಆರ್ಯ ಜನಾಂಗದ ಏಳಿಗೆಯಾಗುವಂತೆಯೂ ಅಲ್ಲಲ್ಲಿ ಆಶ್ರಮಗಳನ್ನು ಕಲ್ಪಿಸಿ ತನ್ನ ಶಿಷ್ಯರಲ್ಲೊಬ್ಬೊಬ್ಬರನ್ನು ಅಲ್ಲಲ್ಲಿ ನೆಲೆಯಾಗಿ ನಿಲ್ಲುವಂತೆ ಮಾಡಿದನು. ದಾರಿಯುದ್ದಕ್ಕೂ ಆಶ್ರಮಗಳೆಂಬ ವಸಾಹತುಗಳನ್ನು ಕಲ್ಪಿಸಿ, ವೇದ ಧರ್ಮದ ಬೆಳವಣಿಗೆಗೆ ತಳಹದಿಯನ್ನೇರಿ ವೇದದ ಬೆಳಕು ಪ್ರಜ್ವಲಿಸಲು ತಕ್ಕ ಏರ್ಪಾಟುಗಳನ್ನು ಮಾಡಿದನು. ಮೂಲನಿವಾಸಿಗಳ ಸಂಗಡ

ಕಲಿತು ಅವರ ಅಭಿವೃದ್ಧಿಗೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿದನು. ತೆಲುಗುಭಾಷೆಗೆ ಅಕ್ಷರ ಲಿಪಿಗಳನ್ನು ಕಲ್ಪಿಸಿ ವೇದತತ್ವಬೋಧನೆಗೆ ಅನುಕೂಲವಾಗುವಂತೆ ವಾಙ್ಮಯವನ್ನು ಅಭಿವೃದ್ಧಿಮಾಡಿದನು. ಕನ್ನಡ, ಅರವು ಮೊದಲಾದ ಭಾಷೆಗಳನ್ನರಿತು, ವೇದೋಪನಿಷತ್ತುಗಳನ್ನು ಭಾಷಾಂತರಿಸಿ ಎಲ್ಲಾ ಜನರ ಮುಂದಿಟ್ಟನು. ಶೈವ ಸಿದ್ಧಾಂತಗಳನ್ನೂ ಶೈವ ಮತವನ್ನೂ ಪುನರುಜ್ಜೀವನಗೊಳಿಸುತ್ತಾ ಬ್ರಹ್ಮಗಿರಿಯನ್ನೈದಿ ಬ್ರಹ್ಮಕುಂಡದ ಪಕ್ಕದಲ್ಲಿ ಆಶ್ರಮವನ್ನು ಹೂಡಿದನು.

ಆದರೆ ವಿಂಧ್ಯರಾಜನಾದರೋ ಈಗಲೂ ಅಗಸ್ತ್ಯನ ಬರವನ್ನು ನೋಡುತ್ತಾ ಕುಳಿತಿರುವನು.

## ಪರೋಪಕಾರ

### ರವಿಯಂದು ತುಲಾರಾಶಿಗೆರಗುತ್ತಿದ್ದನು.

ಶರತ್ಕಾಲದ ಸ್ನಾನದಿಂದ ಪ್ರಕೃತಿಯು ನಿರ್ಮಲಳಾಗಿ ಚತುರ್ದಿವಸದಲ್ಲಿ ನಿರ್ಮಲ ಸ್ನಾನಮಾಡಿ ಮಂದಹಾಸದಿಂದಿನಿಯನನ್ನು ನೋಡುತ್ತಿದ್ದ ರಮಣಿಯಂತೆ ತೇಜೋಮಯವಾಗಿಯೂ ಮನೋಹ್ಲಾದಕರವಾಗಿಯೂ ಕಂಗೊಳಿಸುತ್ತಿದ್ದಳು. ಪಚ್ಚೆಯ ಆಚ್ಛಾದನದಿಂದ ಧರಣೀದೇವಿಯು ಅತ್ಯಂತ ರಮ್ಯಳಾಗಿ ತೋರುತ್ತಿದ್ದಳು.

ಸೂರ್ಯದೇವನು ತುಲಾರಾಶಿಗೆರಗುತ್ತಿರಲು ಮಹೋದಯ ಯೋಗವು ಅಂದು ಉಂಟಾಗುವ ಸಂಭವವು ತೋರಿತು. ಆ ಮಹಾಯೋಗದಲ್ಲಿ ಸ್ನಾನ ಮಾಡಿ ಶಕ್ತಿಯ ಅರ್ಚನೆ ಮಾಡಿದರೆ ಪುಣ್ಯವು ಲಭಿಸುವುದೆಂದು ಶಾಸ್ತ್ರಗಳು ಸಾರುತ್ತಿದ್ದವು. ಎಲ್ಲಾ ಮುನಿವರ್ಯರೂ ಯೋಗೀಶ್ವರರೂ, ಪಾಮರರೂ ಸುಯೋಗವನ್ನು ನಿರೀಕ್ಷಿಸುತ್ತಲೇ ಇದ್ದರು. ಅಗಸ್ತ್ಯನೂ ಆ ದಿವಸ ಸೌಂದರ್ಯದಿಂದ ಮೆರೆಯುತ್ತಿದ್ದ ಬ್ರಹ್ಮಗಿರಿಯಲ್ಲಿ ಮಹೋದಯ ಯೋಗದುದಯವನ್ನು ನಿರೀಕ್ಷಿಸಿಗೊಂಡಿದ್ದನು. ತಾನು ಆ ಯೋಗದ ಫಲಾಪೇಕ್ಷೆಯಿಂದ ದಿನದೂಡುತ್ತಿದ್ದನು.

ಬ್ರಹ್ಮಗಿರಿಯಲ್ಲಿ ನೆಲಸಿದ ನಂತರ ಅಗಸ್ತ್ಯನು ಆರ್ಯಧರ್ಮಬೋಧಪರನಾಗಿ ತನ್ನ ಕಾಲವನ್ನೆಲ್ಲಾ ಲೋಕಸೇವೆಯಲ್ಲೇ ಕಳೆಯುತ್ತಿದ್ದನು.

ಅನೇಕ ಶಿಷ್ಯರನ್ನು ಬರಮಾಡಿಕೊಂಡು ಅವರಿಗೆ ಜ್ಞಾನಮಾರ್ಗವನ್ನು ಬೋಧಿಸುತ್ತಾ, ಲೋಕೋದ್ಧಾರದ ಕೆಲಸದಲ್ಲೇ ಮನಸ್ಸನ್ನೂರಿದ್ದನು. ಆದರೆ ತನ್ನ ಪ್ರತಿಜ್ಞೆಯಂತೆ ಕಾವೇರಿಯನ್ನು ಮಾತ್ರ ಅಗಲದೆ ಅವಳ ಸಂಗಡವೇ ಕಾಲಕಳೆಯುತ್ತಿದ್ದನು. ಆ ದೃಢನಿಶ್ಚಯವನ್ನು ಕಾವೇರಿಯು ನೋಡಿ ಬೇಸರಪಟ್ಟಳು. ತನ್ನ ಮನೋಭೀಷ್ಟವು ನೆರವೇರಲಿಲ್ಲ. ತಾನು ಲೋಕಕ್ಕೆ ಜೀವನಧಾರೆಯಾಗಲಿಲ್ಲ ಎಂಬ ವ್ಯಸನದಿಂದ ಕೊರಗುತಿದ್ದಳು. ಅಗಸ್ತ್ಯನು ತನ್ನನ್ನು ಬಿಟ್ಟಗಲದಿದ್ದುದು ಮಹಾಕಷ್ಟವಾಗಿ ತೋರಿತು. ಎಷ್ಟೋ ಹಂಚಿಕೆಗಳನ್ನು ಮಾಡಿದರೂ ಅಗಸ್ತ್ಯನು ಅವಳನ್ನು ಬಿಟ್ಟಗಲನು. ಇಂತಿರಲಂದು ರಾತ್ರಿ ರವಿಯು ಕನ್ಯೆಯನ್ನು ತ್ಯಜಿಸಿ ತುಲೆಯ ಸಮೀಪ ವೇಗವಾಗಿ ಬರುತ್ತಿದ್ದನು. ಆ ಸುಯೋಗವನ್ನು ನಿರೀಕ್ಷಿಸಿಕೊಂಡಿದ್ದ ಅಗಸ್ತ್ಯನು ಬಗೆಯರಿದಾದನು. ರಾತ್ರಿಯ ಮೊದಲನೆ ಝಾಮದಲ್ಲಿ ನದೀಸ್ನಾನ ಮಾಡಿ ಈಶ್ವರಜಪವನ್ನು ಮಾಡಿ ಶಕ್ತಿಯನ್ನು ಅರ್ಚಿಸಿದರೆ ಮಾತ್ರ ಆ ಯೋಗದ ಫಲವು ದೊರಕುವುದು. ಆದರೆ ಕಾವೇರಿಯಾದರೋ ಅಷ್ಟು ಮುಂಜಾನೆ ಏಳಲಾರಳು. ಅವಳಿಗರಿಯದೆ ತಾನು ಹೊರಟುಹೋದರೆ ಎಲ್ಲಿ ತನ್ನನ್ನು ಅಗಲಿ ಜೀವನಪ್ರಾಯಳಾಗಿ ಹರಿವಳೋ ಎಂದು ಅಗಸ್ತ್ಯನ ಮನಸ್ಸಿನಲ್ಲಿ ಚಂಚಲ. ಆದ್ದರಿಂದ ಮುನಿಯು ಬಹಳ ಪೇಚಾಟಕ್ಕೆ ಸಿಕ್ಕಿಬಿದ್ದನು. ಆದರೂ ಆ ಯೋಗವನ್ನು ಕಳೆದುಕೊಳ್ಳಬಾರದೆಂದು ನಿರ್ಧರಿಸಿದನು.

ಎಂದಿನಂತೆ ಆ ರಾತ್ರಿ ಕಾವೇರಿಯು ಸಂಗಡ ಅಗಸ್ತ್ಯನು ಸಜ್ಜೆಯ ಮನೆಯನ್ನು ಸೇರಿದನು. ತನ್ನ ಮನಸ್ಸಿನ ಆತುರತೆಯಿಂದ ಆತನಿಗೆ ನಿದ್ರೆಯೇ ಬರಲಿಲ್ಲವು. ಆದರೆ ಸಾಧ್ವೀಮಣಿ ಕಾವೇರಿಯನ್ನು ಮಾತ್ರ ನಿದ್ರಾದೇವಿಯು ಆಲಿಂಗಿಸಿಕೊಂಡಳು. ಅಗಸ್ತ್ಯನು ಅದೇ ಸಮಯವನ್ನು ಕಾಯುತ್ತಿದ್ದನು. ಆಗ ರಾತ್ರಿಯ ಮೊದಲನೆಯ ಝಾಮವು ಕಳೆಯುತ್ತಾ ಬಂತು. ಮುನಿಯು ನಿಶ್ಶಬ್ದನಾಗಿ ಎದ್ದು ಕಾವೇರಿಯ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದನು. ಆ ಮುದ್ದುಮುದ್ದಾದ ನಿಷ್ಕಳಂಕಯುಕ್ತವಾದ ಮುಖವು ಪ್ರಕಾಶಮಾನವಾಗಿ ತೋರಿತು. ಅವಳ ಕುಚಗಳು ಉಸಿರಾಟದಿಂದ ಉಬ್ಬುತ್ತಾ ಕುಗ್ಗುತ್ತಾ ನಿದ್ರಿಸುತ್ತಿದ್ದ ಹಂಸಪಕ್ಷಿಗಳಂತೆ

ತೋರಿದವು. ಕುಂಭಜನು ನಿಧಾನವಾಗಿ ನಡೆದು ಶಯ್ಯಾಗಾರದ ಬಾಗಿಲನ್ನು ನಿಶ್ಶಬ್ದವಾಗಿ ತೆರೆದು ಹೊರಗೆ ಮಲಗಿದ್ದ ಶಿಷ್ಯರನ್ನು ಎಬ್ಬಿಸಿದನು. ಅವರ ಕಿವಿಯಲ್ಲೇನೋ ಉಸುರಿ ಪುನಃ ಸಜ್ಜೆಮನೆಯನ್ನು ಸೇರಿ ತನ್ನ ಪತ್ನಿಯ ಮುಖವನ್ನು ಇನ್ನೊಮ್ಮೆ ದಿಟ್ಟಿಸಿ ನೋಡಿದನು. ದೀರ್ಘ ನಿಃಶ್ವಾಸಗಳನ್ನು ಬಿಡುತ್ತಾ ಅರಳುತ್ತಿದ್ದ ಅವಳ ಮೂಗು, ಉಬ್ಬುತ್ತಿದ್ದ ಕುಚ ಮುನಿಗೆ ನಿಜವಾಗಿಯೂ ಕಾವೇರಿಯು ಗಾಢನಿದ್ರೆಯಲ್ಲಿದ್ದಳೆಂದು ಸೂಚಿಸುತ್ತಿದ್ದವು. ಮುನಿಗಾಗ ಧೈರ್ಯಬಂತು. ತನ್ನ ಕಮಂಡಲುವನ್ನು ಅವಳ ಪಕ್ಕದಲ್ಲಿಯೇ ಇಟ್ಟು, ಇದನ್ನು ನೋಡಿ ನಾನಿಲ್ಲಿಯೇ ಇರುವೆನೆಂದು ಈಕೆಯು ನಂಬಬಹುದೆಂದು ಹೊರಗೆ ಕಾಲಿಟ್ಟು ಶಿಷ್ಯರ ಕಿವಿಗಳಲ್ಲಿ— ಶಿಷ್ಯರೇ ನೀವಿಲ್ಲಿ ಈ ಸಜ್ಜೆಮನೆಯ ಸುತ್ತು ಕಾವಲಿರಿ. ಆಕೆಯು, ನಿದ್ದೆ ತಿಳಿದೆದ್ದರೆ ಉಪಾಯಾಂತರದಿಂದ ಇಲ್ಲಿಯೇ ಅವಳನ್ನಿರಿಸಿಕೊಂಡು ನನಗೆ ಹೇಳಿಕಳುಹಿಸಿರಿ. ಈ ಹೊಸ್ತಿಲನು ದಾಟಿ ಹೊರಬರಲೆಂದೂ ಆಕೆಯನ್ನು ಬಿಡಬೇಡಿರಿ. ಆ ಕಮಂಡಲವನ್ನು ತೋರಿಸಿ ನಾನಿಲ್ಲಿಯೇ ಇರುವೆನೆಂದು ಹೇಳಿರಿ" ಎಂದನು. ಶಿಷ್ಯರು ಹಾಗೆಯೇ ಆಗಲೆಂದೆನಲು ಮುನಿಯು ಕನಕಾ ಸರೋವರದ ಕಡೆ ನಡೆದನು. ಶಿಷ್ಯರೆಲ್ಲರೂ ಸಜ್ಜೆಮನೆಯ ಬಾಗಿಲಲ್ಲಿ ಕುಳಿತುಕೊಂಡರು

ಆಗ ರವಿಯು ತುಲೆಯ ಸಮೀಪ ಬಂದನು, ಜಗನ್ಮೋಹಿನಿಯಾದ ಕಾವೇರಿಯು ಅಕಸ್ಮಾತ್ ನಿದ್ದೆ ತಿಳಿದೆದ್ದಳು; ಸುತ್ತುಮುತ್ತು ನೋಡಿದಳು. ತನ್ನ ಪತಿಯು ಎಲ್ಲಿಯೂ ಕಂಡುಬರಲಿಲ್ಲ; ಕಮಂಡಲು ಮಾತ್ರ ಕಂಡು ಬಂತು. ಅವಳಿಗಾಗ ಮಹದಾನಂದವುಂಟಾಯಿತು. ಬ್ರಹ್ಮನ ವರಗಳನ್ನೂ ತನ್ನ ಬಯಕೆಯನ್ನೂ ಸಲ್ಲಿಸುವ ಸುಯೋಗವುಂಟಾಯಿತೆಂದು ಮನಸ್ಸಿನಲ್ಲಿ ಹಿಗ್ಗಿದಳು. ನಿಜಶಯ್ಯೆಯಿಂದೆದ್ದು ನಿಂತಳು; ಕಣ್ಣೊರಸಿಕೊಂಡಳು; ಆ ಶಿಷ್ಯವೃಂದವು ಮಾತ್ರ ಕಣ್ಣಿಗೆ ಬಿತ್ತು.

'ಹಾಯ್! ಇದೀಗ ಪುಣ್ಯಕಾಲ, ಪಾಪನಾಶಕಾಲ, ಮನೋಭೀಷ್ಟವನ್ನು ಪಡೆಯುವ ಸುಯೋಗ'ವೆಂದಂದು ಬಾಗಿಲಿನ ಕಡೆ ನಡೆದಳು.

ಅದನ್ನು ನೋಡಿ ಆ ಶಿಷ್ಯರು ಕೈಜೋಡಿಸಿ—"ಮಾದಾಯ! ತಾವು ಹೊಸ್ತಿಲನ್ನು ದಾಟಿ ಈಚೆ ಬರಲಾಗನು, ಮುನಿಗಳ ಅಪ್ಪಣೆಯಾಗಿರು

ವುದು" ಎಂದರು. ಆಗಲಾಗ ಕಾವೇರಿಗೆ ಅಗಸ್ತ್ಯನ ಇಲ್ಲದಿರುವಿಕೆಯು ತಿಳಿಯಿತು. ಇನ್ನಷ್ಟು ಸಂತಸಗೊಂಡಳು.

"ಶಿಷ್ಯರಿರಾ! ನಿಮ್ಮ ಮಾತಿನ ಅರ್ಥವೇ ನನಗಾಗಲೊಲ್ಲದು. ನಾನೇನು ಕಾರಾಗೃಹವಾಸಿಯೇ? ಆಚೆ ಕಡೆ ಸರಿದುನಿಲ್ಲಿರಿ" ಎಂದಳು. ಆಗಲಾ ಶಿಷ್ಯರು, "ಅಮ್ಮಾ ಮುನಿಗಳು ಈಗಲೇ ಬರುವರು. ಅವರು ಬರುವ ತನಕ ತಾವು ಸ್ವಸ್ಥಚಿತ್ತರಾಗಿ ನಿದ್ರಿಸಿರಿ!! ತಾವು ಈಚೆ ಬರಬೇಡಿರಿ. ಇಲ್ಲವಾದರೆ ಮುನಿಯು ಕೋಪಗೊಳ್ಳುವನು" ಎಂದರು. ಕಾವೇರಿಯಾ ಮಾತುಗಳನ್ನು ಕೇಳಿ ನಸುನಕ್ಕು-"ಶಿಷ್ಯರೇ! ನಿಮ್ಮ ಮುನಿಯು ಎಲ್ಲಿರುವನು" ಎಂದು ಕೇಳಿದಳು.

ಆದಕ್ಕೆ ಶಿಷ್ಯರು—"ತಾಯೆ! ಮುನಿಗಳು ಮಹೋದಯ ಯೋಗವು ಸನ್ನಿಹಿತವಾಗಿರುವುದರಿಂದ ಕನಕಾ ಸರೋವರದಲ್ಲಿ ಸ್ನಾನಮಾಡಿ ತನ್ನ ಯೋಗನಿಷ್ಠೆಯನ್ನು ತೀರಿಸಲು ಹೋಗಿರುವರು. ಈಗಲೇ ಬರುವರು. ತಾವು ಮಾತ್ರ ಈಚೆ ದಯಮಾಡಿಸಬೇಡಿರಿ'' ಎಂದರು. ಲೋಪಾಮುದ್ರೆಯಾಗ--"ಇದೀಗ ಸುಸಮಯವು: ನನ್ನ ಮನೋಭೀಷ್ಟವಿಂದು ನೆರವೇರುವುದು'' ಎಂದೆಂದು ಹರಿಹರ ಬ್ರಹ್ಮಾದಿಗಳನ್ನು ಸ್ಮರಿಸಿ ಅಗಸ್ತ್ಯನ ಕಮಂಡಲುವನ್ನು ಕೈಯಲ್ಲಿ ಹಿಡಿದು, ಮುಂದೆ ಕಾಲಿಟ್ಟಳು. ಶಿಷ್ಯರಿಗಾಗ ಬಹಳ ಬೆದರಿಕೆಯುಂಟಾಯಿತು. ಶಯ್ಯಾಗಾರದ ಹೊಸ್ತಿಲನ್ನು ದಾಟಬರಲು ಬಿಟ್ಟದು ಮುನಿಯ ಕೋಪಕ್ಕೆ ಆಹುತಿಯಾದೆವೆಂದೆಂದುಕೊಂಡು ಕಾವೇರಿಯನ್ನು ಸಂಬೋಧಿಸಿ-ತಾಯೇ! ಆದಿಶಕ್ತಿಯೇ ನಮ್ಮನ್ನು ಕಾಪಾಡು. ಈ ಆಶ್ರಮವನ್ನಾದರೂ ಬಿಟ್ಟು ಹೊರಡಬಾರದು. ಮುನಿಯ ಅಪ್ಪಣೆಯನ್ನು ಪಾಲಿಸದಿದ್ದರೆ ಆತನಿಗೆ ಕೋಪವುಂಟಾಗಬಹುದು. ಅನಂತರ ನಮಗೆಲ್ಲರಿಗೂ ದುಷ್ಪರಿಣಾಮವುಂಟಾಗಬಹುದು. ನಮ್ಮ ಮುನಿಗಳ ಮಾತನ್ನು ಪಾಲಿಸಿರಿ" ಎಂದರು.

ಆದಕ್ಕೆ ಕಾವೇರಿಯು—"ಎಲೈ ಹುಚ್ಚರಿರಾ! ಪ್ರತಿಜ್ಞೆಯನ್ನು ಕಾಪಾಡದ ನಿಮ್ಮ ಮುನಿಗಳ ಮಾತನ್ನು ಪರಿಪಾಲಿಸುವುದೇ. ಛೀ! ಎಂತಹ ಮಾತು; ನೀವಾಚೆ ನಿಲ್ಲಿರಿ"ಎಂದೆಂದು ಆಶ್ರಮವನ್ನಿಳಿದು ಮುಂದೆ ಬಂದಳು. ಆಗಲಾ ಶಿಷ್ಯರು ಅಳುತ್ತಾ-'ಅಮ್ಮಾ! ನಮ್ಮನ್ನು ಮುನಿಗಳಾಗ್ರಹಕ್ಕೆ

ಆಹುತಿಕೊಡಬೇಡ. ಅವರ ಅಪ್ಪಣೆಯನ್ನು ಪರಿಪಾಲಿಸದುದನ್ನು ನೋಡಿ ಶಾಪವೀಯದಿರಲಾರರು. ತಾಯೇ! ನಮ್ಮನ್ನು ಕಾಪಾಡು! ಕಾಪಾಡು! ಎಂದು ಅಡ್ಡಬಿದ್ದು ಬೇಡಿಕೊಂಡರು. ಆ ದಯಾರ್ದ್ರಹೃದಯಳಾದ ಮಾತಾ ಸ್ವರೂಪಿಣಿಯಾದ ಲೋಪಾಮುದ್ರೆಯು ಅವರ ಮೊರೆಯನ್ನು ಕೇಳಿ-'ಶಿಷ್ಯರೇ ನಿಮ್ಮ ಗುರುವಿನ ಆಣತಿಯಂತೆ ನೀವು ನಡೆದಿರುವಿರಿ. ನಿಮ್ಮ ತಪ್ಪು ಎಳ್ಳಷ್ಟೂ ಇಲ್ಲವು. ಲೋಕೋಪಕಾರಕ್ಕಾಗಿ ಹೊರಟಿರುವ ನನ್ನನ್ನು ನೀವು ತಡೆಗಟ್ಟುವುದು ಉಚಿತವಲ್ಲ. ನಾನು ಜೀವರಾಶಿಗೆಲ್ಲಾ ನನ್ನ ದೇಹವನ್ನು ಅರ್ಪಿಸಲು ಹೊರಟಿರುವೆನು. ಅಗಸ್ತ್ಯನು ಬಂದಮೇಲೆ ಅವನಿಗೆ ಈ ವಿಷಯವನ್ನು ತಿಳಿಸಿರಿ. ಅವನು ನಿಮ್ಮ ಮೇಲೆ ಆಗ್ರಹಗೊಳ್ಳನು. ನನ್ನನ್ನು ಬಿಟ್ಟುಹೋದುದು ಅವನದೇ ತಪ್ಪು. ಅವನ ವಚನದಂತೆ ಅವನೇ ನಡೆಯದಿರಲು ನೀವೆಂತು ತಪ್ಪುಗಾರರಾಗುವಿರಿ? ನನ್ನನ್ನು ಈಗ ತಡೆಗಟ್ಟಲು ಹರಿಹರ ಬ್ರಹ್ಮಾದಿಗಳಿಗೂ ಆಗದು. "ನಿಮಗೆ ಕಲ್ಯಾಣವಾಗಲಿ" ಎಂದು ಹರಸಿ ಮುಂದೆ ನಡೆದಳು.

ಆಗ ಕೆಲವು ಶಿಷ್ಯರು "ಅಹುದು ಕಾವೇರಿಯು ಹೇಳುವುದು ನ್ಯಾಯಸಮ್ಮತವು. ಅಗಸ್ತ್ಯನೇ ವಚನಕ್ಕೆ ವಿರೋಧವಾಗಿ ನಡೆದಿರುವೆನು. ನಾವೆಂತು ತಪ್ಪುಗಾರರಾಗುವೆವು? ಎಂದರು. ಅದನ್ನು ಕೇಳಿ ಮಿಕ್ಕವರು ಸುಮ್ಮನಾದರು.

ಕಾವೇರಿಯು ಆಶ್ರಮವನ್ನಿಳಿದಳು. ಮುಂದೆ ಬ್ರಹ್ಮಕುಂಡಿಕೆಯು ತಿಳಿನೀರಿನಿಂದ ಶೋಭಿಸುತ್ತಾ ನಕ್ಷತ್ರಮಂಡಲವನ್ನು ಪ್ರತಿಬಿಂಬಿಸುತ್ತಲಿತ್ತು. ಜಗನ್ಮಾತೆಯು ಆ ತಿಳಿಗೊಳವನ್ನು ನೋಡಿ ಹರುಷವನಾಂತಳು. ಅವಳ ಮುಖದ ಕಾಂತಿಯು ಆ ಕತ್ತಲಲ್ಲಿ ಚಂದ್ರಬಿಂಬದಂತೆ ಹೊಳೆಯುತಿತ್ತು. ಅವಳ ಕಣ್ಣುಗಳು ಪ್ರಕಾಶಮಾನವಾಗಿದ್ದುವು. ಅವಳ ದೇಹವು ಮಂಗಳತರವಾಗಿತ್ತು. ಮಂದಾನಿಲನು ಅವಳ ಮುಂಗುರುಳುಗಳನ್ನು ಹಾರಾಡಿಸುತಿದ್ದನು. ಕಾವೇರಿಯಾಗ ಹರಿಹರ ಬ್ರಹ್ಮಾದಿಗಳನ್ನು ಸ್ಮರಿಸಿದಳು. ತನ್ನ ತಂದೆಯಾದ ಕವೇರನನ್ನು ಧ್ಯಾನಿಸಿದಳು. ತನ್ನ ಪತಿಯನ್ನು ಪ್ರಾರ್ಥಿಸಿದಳು. ಭಗವಾನ್ ಸೂರ್ಯದೇವನು ಮಹಾಯೋಗದಲ್ಲಾಗ ತುಲಾರಾಶಿಯನ್ನು ಸೇರಿದನು. ಕಾವೇರಿಯು ಕಮಂಡ

ಲುವಿನೊಡನೆ ಬ್ರಹ್ಮಕುಂಡಕ್ಕೆ ಧುಮುಕಿದಳು. ಭೂಮಿಯಾಗ ಅದುರಿತು. ಕೂಡಲೇ ಸಮುದ್ರನು ಉಕ್ಕೇರುವಂತೆ ಆ ಬ್ರಹ್ಮಕುಂಡವು ಉಬ್ಬಿತು. ಮಾಣಿಕ್ಯದ ಹರಳಿನಂಥ ಜಲಕಣಗಳು ನಭೋಮಂಡಲಕ್ಕೆ ಹಾರಿದವು. ಪಾಲ್ಗಡಲಿನ ರಸದಂತೆ ನೊರೆಯು ಜೊಂಯೆಂದೆನುತ ನೀರಿನ ಮೇಲೆ ಕಾಣಿಸಿಕೊಂಡಿತು. ಸಲಿಲರಾಶಿಯು ಉಬ್ಬಿ ಬ್ರಹ್ಮಕುಂಡದಿಂದ ಉಕ್ಕಿ ಹೊರಚೆಲ್ಲಿ ಪ್ರವಾಹವಾಗಿ ಹರಿಯಿತು. ಆಗ ದೇವವಾದ್ಯಗಳು ಮೊಳಗಿದುವು. ಗಂಧರ್ವರು, ಅಪ್ಸರೆಯರು, ಕಿನ್ನರರು ಬಂದು ನಾಟ್ಯವಾಡಲಾರಂಭಿಸಿದರು. ದೇವತೆಗಳು ತಂಡೋಪತಂಡವಾಗಿ ಬಂದು ನೆರೆದು ಲೋಕಪಾವನೆಯ ತೀರ್ಥವನ್ನು ಸೇವಿಸಿದರು ಹರಿಹರ ಬ್ರಹ್ಮಾದಿಗಳೂ ಅಷ್ಟದಿಕ್ಪಾಲಕರೂ, ಸಪ್ತಮಾತೃಕೆಯರೂ ಅಲ್ಲಿಗೆ ಧಾವಿಸಿಬಂದರು. ಕಾವೇರಿಯು ತನ್ನ ಕೈಯಲ್ಲಿದ್ದ ಕಮಂಡಲುವನ್ನು ಆ ಬೊಮ್ಮ ಕುಂಡದಲ್ಲಿಯೇ ಬಿಟ್ಟು ತಾನು ಮೇಲೆ ಕಾಣಿಸಿಕೊಂಡಳು. ಆಗ ಜಯಜಯಾಕಾರವು ವಾಯುಮಂಡಲವನ್ನು ಭೇದಿಸಿ ನಭೋಮಂಡಲದಲ್ಲಿ ಪ್ರತಿಧ್ವನಿಸಿತು. ಆ ಕಮಂಡಲು ಬ್ರಹ್ಮ ಕುಂಡದಲ್ಲಿ ನೆಲಸಿತು. ಅದರಲ್ಲಿದ್ದ ಸಪ್ತತೀರ್ಥಗಳು ಆ ತಿಳಿಗೊಳದಲ್ಲಿ ಕಲಸಿ ಹೋದವು. ಕಾವೇರಿಯು ನೀರಿನ ಮೇಲೆ ತೇಲುತ್ತಾ ಜಲಶಾಯಿಯಾದ ವಿಷ್ಣುವಿನಂತೆ ಹೊಳೆದಳು. ಆ ಸಲಿಲವು ಉಕ್ಕಿ ಹರಿಯುವ ರಭಸಕ್ಕೆ ಲೋಕವೆಲ್ಲಾ ತಳಮಳವಾಯಿತು.

ಆಗ ಶಿಷ್ಯನೊಬ್ಬನು ಓಡಿಹೋಗಿ ಕನಕ ಸರೋವರದಲ್ಲಿ ಸ್ನಾನ ಮಾಡುತಿದ್ದ ಅಗಸ್ತ್ಯನಿಗೆ ಎಲ್ಲಾ ವಿಷಯಗಳನ್ನು ತಿಳಿಸಿದನು. ಕೂಡಲೆ ಮುನಿಯು ಒದ್ದೆಬಟ್ಟೆಯೊಡನೆ ಓಡಿಬಂದು ಸೇರಿದನು. ಅವನಿಗಾಗ ಒಮ್ಮೆಯೇ ದುಃಖವೂ ಕೋಪವೂ ಉಂಟಾದುವು. ಆದರೆ ಮಿಂಚಿ ಹೋದಕಾರ್ಯಕ್ಕೆ ಚಿಂತಿಸಿಫಲವಿಲ್ಲವೆಂದರಿತು ತನ್ನ ಸುತ್ತುಮುತ್ತಲಿನ ಶಿಷ್ಯಮಂದಿಯನ್ನು ನೋಡಿದನು. ಕೋಪಾನಲವನ್ನು ಕಾರುತಿದ್ದ ಅವನ ಕಣ್ಣುಗಳನ್ನು ನೋಡಿ ಶಿಷ್ಯರೆಲ್ಲರೂ ಹೆದರಿದರು. ಆಗಲಾಒಬ್ಬ ಶಿಷ್ಯನು—ಮುನಿವರ್ಯನೇ! ನಮ್ಮ ಮೇಲೆ ಕೋಪಿಸಬಾರದು. ನಾವು ಎಷ್ಟು ತಡೆದರೂ ದೇವಿಯು ತನ್ನಿಚ್ಛೆಪೂರ್ತಿಮಾಡಿಕೊಂಡಳು. ಇದೋ

ಈ ವಿಪ್ರರು ದೇವಿಯ ಪಕ್ಷವನ್ನು ವಹಿಸಿ, ತಾವು ಪ್ರತಿಜ್ಞೆಪ್ರಕಾರ ಅವಳನ್ನು ಬಿಟ್ಟು ಹೋದುದು ತಪ್ಪೆಂದು ಹೇಳಿದರು ಎಂದನು ಅದನ್ನು ಕೇಳಿ ಅಗಸ್ತ್ಯನು ಕಿಡಿಗಳನ್ನು ಕಾರಿದನು. ಅತ್ತೆಯ ಮೇಲಿನ ಸಿಟ್ಟು ಕತ್ತೆಯ ಮೇಲೆ ತೆಗೆದಂತೆ ಕಾವೇರಿ ಪಕ್ಷವನ್ನು ವಹಿಸಿದ ವಿಪ್ರರನ್ನು ಜರಿದು–ನೀವು ವೇದ ಗಾಯತ್ರಿವಿಹೀನರಾಗಿ ಕರ್ಮಭ್ರಷ್ಟರಾಗಿರಿ. ನಿಮ್ಮ ಪತ್ನಿಯರು ಸ್ವೇಚ್ಛಾವಿಹಾರಿಗಳಾಗಲಿ. ' ನಿಮ್ಮ ವಂಶವು ಸಾವಿರಕ್ಕೆ ಹತ್ತರಂತೆ ಅಭಿವೃದ್ಧಿಯಾಗಲಿ. ಎಂದು ಶಪಿಸಿದನು. ಬಳಿಕ ಮಿಕ್ಕಿಳಿದ ವಿಪ್ರರನ್ನು ನೋಡಿ–ಶಿಷ್ಯರೇ, ನೀವೆನ್ನಪ್ಪಣೆಯನ್ನು ಪರಿಪಾಲಿಸಲು ಯತ್ನಿಸಿದಿರಿ. ಆದ್ದರಿಂದ ನಿಮಗಾಗಿ ಇಲ್ಲಿ ಸಪ್ತ ತೀರ್ಥಗಳುದ್ಭವವಾಗಲಿ. ನಿಮ್ಮ ಕೀರ್ತಿಯು ಭೂಲೋಕದಲ್ಲೆಲ್ಲಾ ಹಬ್ಬಲಿ. ನಿಮ್ಮ ವಂಶವು ಒಂದರಿಂದ ಸಾವಿರದಂತೆ ಅಭಿವೃದ್ಧಿಯಾಗಲಿ ಎಂದು ಹರಸಿದನು. ಇದೆಲ್ಲವೂ ಮಿಂಚಿನ ವೇಗದಲ್ಲಿ ಕಳೆದು ಹೋಯಿತು. ಮುನಿಯ ಕೋಪವು ಆಗ ತಣ್ಣಗಾಯಿತು.

ಅನಂತರ ಮುನಿಯು ಮಂದಯಾನೆಯಾಗಿ ಪ್ರವಹಿಸುತಿದ್ದ ಕಾವೇರಿಯನ್ನು ಅಡ್ಡಗಟ್ಟಿ–ಪ್ರಿಯೆ! ಕೈತಪ್ಪುಗಳು ಮನುಷ್ಯನ ಜೀವನ ಕಾಲದಲ್ಲಿ ಎಷ್ಟೋ ವೇಳೆ ಬಂದುಹೋಗುವವು. ಮರೆತು ಅನೇಕ ವೇಳೆ ನಮ್ಮ ವಚನಗಳನ್ನು ಕಾಪಾಡಲು ಸಾಧ್ಯವಾಗುವುದಿಲ್ಲವು. ಅರಿಯದೆ ನಾನಿಂದು ಅಪರಾಧವನ್ನು ಮಾಡಿದೆ. ಅದಕ್ಕಾಗಿ ನೀನಿಂದು ನನ್ನನ್ನು ಬಿಟ್ಟಗಲುವುದೇ? ನಿನ್ನನ್ನಗಲಿ ನಾನು ಹೇಗೆ ಜೀವಿಸಿರಲಿ? ಪ್ರಿಯೆ! ನಾನಿಂದು ಮಾಡಿದ ಅಪರಾಧವನ್ನು ಕ್ಷಮಿಸು. ಹಿಂದಿರುಗು" ಎಂದು ಅತಿ ದೀನ ಸ್ವರದಿಂದ ನುಡಿದನು. ಕಾವೇರಿ ದೇವಿಯು ಪತಿಯ ಮಾತುಗಳನ್ನು ಕೇಳಿ ಕನಿಕರಪಟ್ಟು–"ಪ್ರಿಯನೇ! ಕ್ಷಣಿಕವಾದ ವಿಷಯ ಭೋಗಾಪೇಕ್ಷೆ ಮಾಡುವುದು ನಮ್ಮಂಥ ಜ್ಞಾನಿಗಳಿಗೆ ಉಚಿತವಲ್ಲ. ನಮ್ಮ ದೇಹವನ್ನು ಪರೋಪಕಾರಕ್ಕಾಗಿಯೇ ದಂಡಿಸಬೇಕು. ನಾನು ಲೋಕೋಪಕಾರಕ್ಕಾಗಿ ನನ್ನ ದೇಹವನ್ನು ಸವೆಯಿಸಬೇಕೆಂಬುದೇ ನನ್ನ ಉದ್ದೇಶವು. ಚಿಕ್ಕಂದಿನಿಂದಲೂ ಅದೇ ಉದ್ದೇಶವನ್ನು ಪಾಲಿಸುತ್ತಾ ಬಂದಿರುವೆನು. ಜಲಪ್ರವಾಹವಾಗಿ ಹರಿದು ಲೋಕದ ಜನರಿಗೆ ನೀರನ್ನು ಒದಗಿಸಿಕೊಟ್ಟು

ಚಿರಕಾಲದವರೆಗೆ ಅವರ ದಾರಿದ್ರ್ಯ ನಾಶಮಾಡಬೇಕೆಂಬುದೇ ನನ್ನ ಉದ್ದೇಶವಿರುವುದು. ಅದನ್ನು ಕೈಗೂಡಿಸಲು ಬ್ರಹ್ಮ, ವಿಷ್ಣು, ಮಹೇಶ್ವರ ರಿಂದ ವರವನ್ನು ಪಡೆದಿರುವೆನು. ಇಂದೆನ್ನ ಕೋರಿಕೆಯು ಕೈಗೂಡಿತು. ಲೋಕಹಿತಕ್ಕಾಗಿ ನನ್ನ ಸರ್ವಸ್ವವನ್ನೂ ಆಹುತಿಕೊಡಲು ನಾನು ಸಿದ್ಧ ಳಿರುವೆನು. ಈ ನನ್ನ ವರ್ತನದಿಂದ ನಿನಗೂ ನಮ್ಮಿರ್ವರ ವಂಶಕ್ಕೂ ದೊಡ್ಡ ಕೀರ್ತಿಯನ್ನು ತಂದಂತಾಗಲಿಲ್ಲವೇ. ಆದ್ದರಿಂದ ನೀನೆನ್ನನು ತಡೆವುದುಚಿತವಲ್ಲ, "ನನಗೆ ಮಂಗಳವನೀಡು" ಎಂದು ಬೇಡಿಕೊಂಡಳು.

ಆದರೂ ಆಗಸ್ತ್ಯನು ಚಿಂತಾಭರದಿಂದ ಕಣ್ಣೀರು ಸುರಿಸುತ್ತಿರಲು ಕಾವೇರಿಯು ಮತ್ತು ನುಡಿದಳು-ಪ್ರಿಯನೇ, ನನ್ನನ್ನಗಲಲು ನಿನಗೆಷ್ಟು ಕಷ್ಟವಾಗಿ ತೋರುವುದೋ ಅಷ್ಟೇ ಕಷ್ಟವು ನನಗೂ ತೋರುವುದು. ಆದರೆ ಲೋಕಹಿತಕ್ಕಾಗಿ ನಾನೀ ಕಾರ್ಯವನ್ನು ಕೈಗೊಂಡಿರುವುದರಿಂದ ನಿನ್ನನ್ನಗಲುವ ಸಂದರ್ಭ ಬಂದೊದಗಿತು. ಆದರೂ ಒಂದು ಉಪಾಯ ವನ್ನು ಹೇಳುವೆನು. ನಾನೀ ಜಲವನ್ನು ವರುಣನಿಗರ್ಪಿಸಿದನಂತರ ನಿನ್ನನ್ನು ಸೇರುವೆನು. ಆದ್ದರಿಂದ ಈಗ ನೀನೂ ನನ್ನೊಡನೆ ಬಂದು ಉತ್ತಮವಾದ ಹಾದಿಗಾಗಿ ಕರದೊಯ್ದು ಸಮುದ್ರ ಸಂಗಮಮಾಡಿಸಿದರೆ ನಾನು ನಿಜರೂಪವನ್ನು ತಾಳಿ ನಿನ್ನ ಸಂಗಡವೇ ವಾಸಮಾಡುವೆನು. ಅದ ರಿನ್ನೊಂದುದೇಶದಲ್ಲಿ ಜಲರೂಪವಾಗಿಯೇ ತಿರೆಯುಳಿಯುವ ತನಕ ಹರಿಯು ತ್ತಿರುವೆನು. ನಾನು ಹರಿಯುವ ಪ್ರದೇಶದಲ್ಲಿ ನೀನು ಶಿವಲಿಂಗವನ್ನು ಪ್ರತಿಷ್ಠಿಸಿ ಭೂಮಿಯನ್ನು ಪುಣ್ಯತಮವನ್ನಾಗಿ ಮಾಡಬೇಕು" ಎಂದು ಕೇಳಿಕೊಂಡಳು ಅಗಸ್ತ್ಯನಿಗಾಗ ಸಂತೋಷವಾಯಿತು ದೇವತೆಗಳೂ ಆನಂದಭರಿತರಾದರು. ಆಗಸ್ತ್ಯನು ಕಾವೇರಿಯ ಮಾತಿನಂತೆ ಅವಳ ಸಂಗಡವೇ ಹೊರಟು, ಕ್ಷೇತ್ರ ಮಹಿಮೆಯನ್ನು ವರ್ಣಿಸಲೂ, ಹಾದಿ ತೋರಿಸಲೂ ಉದ್ಯುಕ್ತನಾದನು.

ಬ್ರಹ್ಮನಾಗ ಮುಂದುವರಿದು ಬಂದು ತನ್ನ ದತ್ತ ಮಗಳನ್ನು ನೋಡಿ- "ಮಗುವೇ! ನಿನಗೆ ಮಂಗಳವಾಗಲಿ! ಮಹಾ ಪತಿವ್ರತೆಯಾಗಿ ಮೆರೆದು ನಿನ್ನ ವಂಶಕ್ಕೆ ತಕ್ಕ ಕೀರ್ತಿಯನ್ನು ತಂದೆ. ನಿನ್ನ ಲೋಕೋಪಕಾರ ಬುದ್ಧಿಯಿಂದ ನಿನ್ನ ನಾಮವನ್ನು ಚಿರಸ್ಥಾಯಿಯಾಗಿ ಮಾಡಿದೆ. ಇನ್ನು

ಮುಂದೆ ವರ್ಷಂಪ್ರತಿ ತುಲೆಗೆ ರವಿಯೇರಗುವಾಗ ತ್ರಿಮೂರ್ತಿಗಳೂ, ದೇವತೆಗಳೂ, ಸುರಮುನಿಗಳೂ, ಸುರರೂ ಇಲ್ಲಿ ಬಂದು ನೆಲಸಿ ಈ ಪ್ರದೇಶವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡುವರು. ಸಪ್ತತೀರ್ಥಗಳು ಈ ಕುಂಡಿಕೆಯಲ್ಲಿ ನೆಲಸಿ, ಇಲ್ಲಿ ಸ್ನಾನಮಾಡಿದವರು ಪಾಪಮುಕ್ತರಾಗಿ ಸ್ವರ್ಗಲೋಕಕ್ಕೆ ತೆರಳಲಿ. ಗಂಗೆಯಲ್ಲಿ ಮೃತಿಯನ್ನು ಪಡೆವರೆ ಮುಕ್ತಿಯನ್ನೈದುವರು. ಆದರೆ ನಿನ್ನ ಜಲಸ್ಪರ್ಶದಿಂದಲೇ ಜನರು ಮುಕ್ತಿ ಪಡೆಯಲಿ. ಈ ಪ್ರದೇಶವಲ್ಲಿ ಪಿತೃಗಳಿಗೆ ಪಿಂಡನನ್ನಿತ್ತು, ತರ್ಪಣಕೊಟ್ಟರೆ ಪಿತೃಗಳು ಪಾಪವಿಮೋಚನೆ ಹೊಂದಿ ಸ್ವರ್ಗಲೋಕವನ್ನನುಭವಿಸಲಿ. ನೀನು ಹರಿಯುವ ಪ್ರದೇಶವೆಲ್ಲಾ ಫಲಮಯವಾಗಿ ಭೂಲೋಕದಲ್ಲೆಲ್ಲಾ ಸುಭಿಕ್ಷವು ತಲೆದೋರಲಿ. ನಿನ್ನ ಹೆಸರು ಭೂಲೋಕದಲ್ಲೆಲ್ಲಾ ಹಬ್ಬಲಿ. ನಿನ್ನ ತೀರ್ಥವು ಭೂಲೋಕದ ಇತರ ತೀರ್ಥಗಳಿಗಿಂತ ಶ್ರೇಷ್ಠವಾಗಲಿ" ಎಂದು ಹರಸಿ ಬ್ರಹ್ಮಲೋಕಕ್ಕೆ ತೆರಳಿದನು.

ಲೋಕಪಾಲಕನಾದ ವಿಷ್ಣುವೂ ಕಾವೇರಿಯ ಸಮೀಪಕ್ಕೆ ಬಂದು 'ಮಗಳೇ ನೀನಿಂದು ನನಗೆ ಅಸದೃಶವಾದ ಕೀರ್ತಿಯನ್ನು ತಂದೆ. ಹಿಂದೆ ದೇವತೆಗಳಿಗೆ ಅಮೃತವನ್ನುಣಿಸಿದೆ. ಈಗ ಮನುಷ್ಯರಿಗೆ ಮುಕ್ತಿಯೆಂಬ ಅಮೃತವನ್ನುಣಿಸು. ನೀನು ಹರಿಯುವ ಪ್ರದೇಶವು ಫಲಭರಿತವಾಗಿ ಬರಗಾಲಗಳಡಗಲಿ. ಗಂಗೆಗಿಂತಲೂ ಮಿಗಿಲಾದ ಕೀರ್ತಿಯನ್ನು ಸಂಪಾದಿಸು. ನಿನ್ನನ್ನು ಶ್ರೀರಂಗದಲ್ಲಿ ಕಾದಿರುವೆನು. ನೀನು ಕ್ಷೇತ್ರಗಳನ್ನೆಲ್ಲಾ ಸುತ್ತಿ ಅಲ್ಲಿಗೈತರು "ಎಂದು ನುಡಿದು ಸ್ವಪುರಾಭಿಮುಖವಾಗಿ ನಡೆದನು. ರುದ್ರನೂ ಆಗ—"ಲೋಪಾಮುದ್ರೆಯೇ ನಿನ್ನ ಇರ್ದಂಡೆಗಳಲ್ಲಿಯೂ ಶಿವಕ್ಷೇತ್ರಗಳುದ್ಭವವಾಗಲಿ ನಿನ್ನ ಇತ್ತಡಿಯ ಪ್ರದೇಶಗಳು ಶಿವಭಕ್ತರ ಆಶ್ರಯವಾಗಿ ಲಿಂಗಗಳ ತವರೂರಾಗಲಿ. ನನ್ನಂಶನಾದ ಅಗಸ್ತ್ಯನನ್ನು ವರಿಸಿ ಮಹಾಪುಣ್ಯವಂತೆಯಾದ ನೀನು ಹರಿಯುವ ಪ್ರದೇಶವೆಲ್ಲಾ ಸುಭಿಕ್ಷದಿಂದ ಮೆರೆಯಲಿ "ಎಂದು ಹರಸಿದನು. ಸರಸ್ವತಿಯೂ, ಲಕ್ಷ್ಮಿಯೂ, ಪಾರ್ವತಿಯೂ ಕಾವೇರಿದೇವಿಗೆ ಅನೇಕ ವರಗಳನ್ನು ಕೊಟ್ಟರು. ದೇವತೆಗಳೂ ಮುನಿಗಳೂ ಅವಳನ್ನು ಕೊಂಡಾಡುತ್ತಾ ಹಿಂಬಾಲಿಸಿದರು. ಸುರ, ಚಾರಣ, ಯಕ್ಷ, ರಕ್ಷ,

ಕಿನ್ನರ, ಕಿಂಪುರುಷರು ಕಾವೇರಿಯನ್ನು ಸ್ತುತಿಸುತ್ತಾ, ನಡೆದರು. ಮೂವತ್ತಮೂರು ಕೋಟಿ ದೇವತೆಗಳು ಅವಳನ್ನು ಹಿಂಬಾಲಿಸುತ್ತಿದ್ದುದರಿಂದ ಇಡೀ ವೈಜಯಂತಿಯೇ ಭೂಲೋಕಕ್ಕೆ ಬಂದಿತ್ತೋ ಎಂಬಂತೆ ತೋರುತ್ತಿತ್ತು.

ದೇವದುಂದುಭಿಯು ಮೊಳಗಿತು. ಕಾವೇರಿಯು ಮುಂದೆ ನಡೆದಳು. ಅಗಸ್ತ್ಯನು ಬ್ರಹ್ಮಕುಂಡದಲ್ಲಿ ಶಿವಲಿಂಗವನ್ನು ಸೃಷ್ಟಿಸಿ ಕಾವೇರಿಯ ಜತೆ ಸೇರಿದನು.

## ಕನಕಾಸಂಗಮ

ಕನಕೆ ಸುಜ್ಯೋತಿಯರು ದೇವೇಂದ್ರನ ಶಾಪದಿಂದ ಅಲ್ಪಜಲರಾಗಿ ಕೃಶರಾದರು. ತಮ್ಮ ಕೋರಿಕೆಯು ಸಫಲವಾಗಲಿಲ್ಲವಲ್ಲಾ ಎಂದು ಚಿಂತಿಸುತ್ತಾ ಕಾವೇರಿಯಾಗಮನವನ್ನು ನಿರೀಕ್ಷಿಸುತ್ತಾ ಕಾಲವನ್ನು ಕಳೆಯುತಿದ್ದರು. ಪಕ್ಕದಲ್ಲೇ ತಮ್ಮ ಉದ್ಯಾನವನವು ಘೋರಾರಣ್ಯವಾಗಿ ಪರಿಣಮಿಸಿದುದನ್ನು ನೋಡಿ ದುಷ್ಟ ದೇವೇಂದ್ರನನ್ನು ಜರಿಯುತ್ತಾ ಮನದೊಳಗೆ ಬೇಯುತ್ತಾ ಬಹಳ ಬೇಸರದಿಂದ ಕಾಲವನ್ನು ನೂಕುತಿದ್ದರು. ಅಷ್ಟರಲ್ಲಿ ರವಿಯು ತುಲಾ ರಾಶಿಯನ್ನು ಸಮೀಪಿಸುತ್ತಾ ಬರುತ್ತಿದ್ದನು.

ಅಂದು ರಾತ್ರಿ ನಭೋಮಂಡಲವನ್ನು ಕೂಡ ನಡುಗಿಸುವಷ್ಟು ದೊಡ್ಡದಾದ ಶಬ್ದವು ಕೇಳಿಸಿತು. ಕನಕೆಯದೇನೆಂದು ಅತ್ತಿತ್ತ ನೋಡುತ್ತಿರಲು ಸೂರ್ಯನಂತೆ ದೇದೀಪ್ಯಮಾನವಾದ ಬೆಳಕು ದೂರದಲ್ಲಿ ಕಾಣಿಸಿತು. ಆಗ ಭೂಮಿಯು ಕಂಪಿಸಿತು. ಸುಜ್ಯೋತಿಯು ಕನಕೆಯನ್ನಪ್ಪಿಕೊಂಡಳು. ಅಷ್ಟರಲ್ಲಿ ಭೂಮಿಯನ್ನೇ ಭೇದಿಸುವಂತೆ ದೊಡ್ಡ ಶಬ್ದವಾಯಿತು. ಯುವತಿಯರಿನ್ನಷ್ಟು ಭೀತಿಗೊಂಡು ಈಶ್ವರನನ್ನು ಸ್ಮರಿಸಿದರು. ವಿಸ್ಮಯಭರಿತರಾಗಿ ಒಬ್ಬರ ಮುಖವನ್ನೊಬ್ಬರು ನೋಡಿದರು. ಕನಕೆ ಮಾತ್ರ ಧೈರ್ಯಗೊಂಡು ನಭೋಮಂಡಲವನ್ನು ದಿಟ್ಟಿಸಿ ನೋಡಲು ಭಗವಾನ್ ಸೂರ್ಯದೇವನು ತುಲಾರಾಶಿಯಲ್ಲಿದ್ದುದನ್ನು ಕಂಡಳು. ಅದನ್ನು ಸುಜ್ಯೋತಿಗೆ ತೋರಿಸಿ–'ನೋಡೆ ಸುಜ್ಯೋತಿ,

ಇಂದು ಯಾವುದೋ ಒಂದು ವಿಶೇಷ ಘಟನೆಯು ಸಂಭವಿಸಬಹುದಾಗಿದೆ. ಅಲ್ಲೋಡು---ರವಿಯು ತುಲಾರಾಶಿಯನ್ನು ಮಹಾಯೋಗದಲ್ಲಿ ಸೇರಿರುವನು" ಎಂದಳು. ಸುಜ್ಯೋತಿಯು ಅದನ್ನು ನೋಡಿ ಅಹುದೆಂದಳು.

ಅಷ್ಟರಲ್ಲಿ ದೇವದುಂದುಭಿಯ ಇಂಪಾದ ಧ್ವನಿಯು ಕೇಳಿಸಿತು. ಆಗಲಾ ಕನಕೆಯು ಕಿವಿಗೊಟ್ಟು ಕೇಳಲು ಆ ರವವು ಬ್ರಹ್ಮಗಿರಿಯ ಕಡೆಯಿಂದ ಬರುವಂತೆ ತೋರಿತು. ಕೂಡಲೇ ಅವಳು ಆನಂದಭರಿತಳಾದಳು. "ಸುಜ್ಯೋತಿ, ದೇವಲೋಕದ ಜನರೆಲ್ಲರೂ ಬ್ರಹ್ಮಗಿರಿಯಲ್ಲಿರುವರೆಂದು ತೋರುತ್ತದೆ. ಇಂದೇನೋ ಅದ್ಭುತಕಾರ್ಯವು ನಡೆದಿರಬೇಕು." ಎಂದು ಹೇಳುತ್ತಿರಲು, ದೇವೇಂದ್ರನ ಪರಿವಾರಸ್ತೋಮದಂತೆ ದೊಡ್ಡ ಕೂಟವೊಂದು ನಿಧಾನವಾಗಿ ಅತ್ತಕಡೆ ನಡೆದುಬರುವಂತೆ ತೋರಿತು. ದೇವದುಂದುಭಿಯ ದನಿಯನ್ನಾಲಿಸಿ ತಾವಿರುವ ಕಡೆಗೆ ಜನಸ್ತೋಮವು ಬರುವಂತಿದೆ" ಎಂದು ಸುಜ್ಯೋತಿಯು ನುಡಿದಳು. ಇಬ್ಬರೂ ಆ ರವವನ್ನೇ ಆಲಿಸಲಾರಂಭಿಸಿದರು. ವಾದ್ಯರವವು ಸಮೀಪವನ್ನೈದುವಂತೆ ತೋರಿತು. ಕಾಡಿನ ಮಧ್ಯದಲ್ಲಿ ದೇವತೆಗಳ ವದನಕಾಂತಿಯು ಎಳೆ ಕಿರಣಗಳಂತೆ ತೂರಿಬರುತಿತ್ತು. ಅದನ್ನೇ ನೋಡುತಿರಲು ದೇವತೆಗಳ ಕೂಟವು ಸಮೀಪ ಬಂತೇ ಬಂತು. ಸೂರ್ಯಪ್ರಕಾಶದಂತೆ ದೀವಟಿಗೆ ಪಂಜು, ದೀಪಗಳ ಕಾಂತಿಯು ಕಣ್ಣನ್ನು ಕುಕ್ಕಿತು. ಮರಗಳ ಮರೆಯಲ್ಲಿದ್ದ ಬೆಳಕು ಈಗ ಚೆನ್ನಾಗಿ ಕಾಣಿಸಿಕೊಂಡಿತು. ದೊಡ್ಡ ಜನಸಮುದಾಯವೂ ಕಾಣಿಸಿತು. ಆಗ ಓರ್ವ ತರುಣಿಯು ಮುಂದುವರಿದುಬರುವಂತೆಯೂ, ಅವಳ ಜತೆಯಲ್ಲಿ ಓರ್ವ ಮುನಿಯು ಇರುವಂತೆಯೂ ಅವಳ ಇಬ್ಬದಿಗಳಲ್ಲಿ ದೇವತೆಗಳು ನಡೆದು ಬರುತಿದ್ದುದೂ, ಪ್ರಳಯ ಕಾಲದ ತೊರೆಯಂತೆ ನೀರಿನ ರಾಶಿಯು ಅವರನ್ನನುಸರಿಸಿ ಹರಿದುಬರುತಿದ್ದುದೂ ಅವರ ಕಣ್ಣಿಗೆ ಕಾಣಿಸಿತು ಅದನ್ನೆಲ್ಲಾ ಕಂಡು ಕನಕೆಯು ಆನಂದದಿಂದ ಹಿಗ್ಗಿ, ಸುಜ್ಯೋತಿ! ಇಂದಿಗೆ ನಮ್ಮ ಕಷ್ಟವು ತೀರಿತು. ಅಗೋ! ಕಾವೇರಿಯು ಹರಿದುಬರುವಳು. ಅವಳ ಜತೆಸೇರಿ ನಾವು ನಮ್ಮ ಮನೋಭೀಷ್ಟವನ್ನು ನೆರವೇರಿಸೋಣ" ಎಂದಳು. ಸುಜ್ಯೋತಿಯು ಆನಂದಾತಿಶಯದಿಂದ ಕುಣಿದಾಡಿದಳು.

ಕಾವೇರಿಯು ಕನಕೆ ಸುಜ್ಯೋತಿಯರ ಸಮೀಪವನ್ನೈದಿದಳು.

ಆಗಲಾ ಕನ್ನಿಕೆಯರು ಕೈಜೋಡಿಸಿ-"ಮಾದಾಯೆ! ತಮ್ಮ ದರ್ಶನದಿಂದ ನಾವು ಧನ್ಯರಾದೆವು. ತಮ್ಮ ಬರವನ್ನೇ ನಾವು ಕಾದುಕೊಂಡಿದ್ದೆವು. ಇಂದೆಮ್ಮ ಭಾಗ್ಯೋದಯವುಂಟಾಯಿತು. ತಮ್ಮ ಸ್ಪರ್ಶದಿಂದ ನಾವು ಲೋಕೋಪಕಾರಿಗಳಾಗಲು ಸಂದರ್ಭವೊದಗಿತು" ಎಂದು ಬಿನ್ನವಿಸಿದರು. ಅಗಸ್ತ್ಯನಾಗ-"ಪ್ರಿಯೇ ನೋಡಿವರು ಕನಕೆ ಸುಜ್ಯೋತಿಯರು. ಇವರು ನಿನ್ನಂತೆಯೇ ಲೋಕಕ್ಕೆ ಉಪಕಾರಮಾಡಲು ಜಲಮಯವಾಗಿ ಹರಿಯಲು ಬ್ರಹ್ಮನಿಂದ ವರವನ್ನು ಪಡೆದು ಸಮಯವನ್ನು ಎದುರುನೋಡುತಿದ್ದರು. ಆದರವರು ದೇವೇಂದ್ರನ ಕಣ್ಣಿಗೆ ಅಕಸ್ಮಾತ್ ಬೀಳಲು, ಅವರ ಸೌಂದರ್ಯಾತಿಶಯಕ್ಕೆ ಮನಸೋತು, ಅವನು ಅವರನ್ನು ವಿವಾಹ ಮಾಡಿಕೊಳ್ಳಲೆಳಸಿದನು. ಅದಕ್ಕವರು ಒಪ್ಪದಾದರು. ಆಗ ಆ ದುಷ್ಟನು ಅವರನ್ನು ಬಲತ್ಕಾರದಿಂದ ವರಿಸಬೇಕೆಂದು ನಿರ್ಧರಿಸಿ ಅವರನ್ನೆತ್ತಿಕೊಂಡು ಹೋಗಲು ಕೈಚಾಚಲು, ಅವರೀರ್ವರು ಒಂದು ಪದ್ಮಾಕರದೊಳಗೆ ಧುಮುಕಿ, ವರಬಲದಿಂದ ನೀರಾಗಿ ಹರಿದರು. ಅದನ್ನು ನೋಡಿ ಕಾಮಪರವಶನಾದ ದೇವೇಂದ್ರನು ಸಹಿಸಿಕೊಳ್ಳಲಾರದೆ ಕುಪಿತನಾಗಿ ಅಲ್ಪಜಲರಾಗಿರೆಂದು ಶಪಿಸಿದನು. ಆದ್ದರಿಂದಿವರು ಅಲ್ಪ ಜಲರಾಗಿರುವರು. ನಿನ್ನ ಸ್ಪರ್ಶಮಾತ್ರದಿಂದ ದೇವೇಂದ್ರನ ಶಾಪನಿವಾರಣೆಯಾಗಿ ಅವರೂ ನಿನ್ನನ್ನು ಕಲೆತು ನಿನ್ನೊಡನೆ ಬರುವರು" ಎಂದನು. ಅದನ್ನು ಕೇಳಿ ಕಾವೇರಿಯು ಸಂತೋಷದಿಂದ-"ಸಹೋದರಿಯರಿರಾ! ದೇವೇಂದ್ರನಿಂದ ಬಹು ಕಷ್ಟಪಟ್ಟಿರುವಿರಿ. ಇನ್ನು ನೀವು ವ್ಯಸನಪಡಬೇಕಾದುದಿಲ್ಲ. ನಿಮ್ಮ ಪ್ರಯತ್ನಕ್ಕೆ ಮೆಚ್ಚಿದೆನು. ನನ್ನಂತೆ ನೀವೂ ಜನೋದ್ಧಾರಕ್ಕಾಗಿ ಜನ್ಮವೆತ್ತಿದುದನ್ನು ನೋಡಿ ತುಂಬಾ ಸಂತೋಷಪಡುತ್ತೇನೆ" ಎಂದಂದು ಅವರೀರ್ವರನ್ನು ಅಪ್ಪಿಕೊಂಡಳು ಕೂಡಲೇ ಕನಕಾಸರೋವರದ ನೀರು ಉಕ್ಕಲಾರಂಭಿಸಿ ದೊಡ್ಡ ಪ್ರವಾಹವಾಗಿ ಹರಿದು ದೇವತೆಗಳನ್ನು ಕೊಚ್ಚಿಕೊಂಡು ಹೋಗಿ, ಕಾವೇರಿಯು ತೀರ್ಥರಾಶಿಯನ್ನು ಸಂಧಿಸಿತು.

ತದನಂತರ ಅವರು ಮೂವರೂ ಸುಖ ಪ್ರಸ್ತಾಪಮಾತಾಡುತ್ತಾ ಮುಂದೆ ನಡೆದರು. ಅಗಸ್ತ್ಯನು ಕಾವೇರಿಗೆ ಹರಿಶ್ಚಂದ್ರಾಶ್ರಮವನ್ನೂ ಭಗಂಡಾಶ್ರಮವನ್ನೂ ತೋರಿಸಿ ದೈವಕ ಪರ್ವತದ ಕಡೆ ಕರತಂದನು.

ಆಗ ಅರುಣನೂ ಸೂರ್ಯನೂ ಕಾವೇರಿಯನ್ನು ನೋಡಲೆಳಸಿ ಆತುರದಿಂದ ಪೂರ್ವದಿಕ್ಕನ್ನೇರಿ ತಮ್ಮ ಕರಗಳಿಂದ ತೀರ್ಥವನ್ನೆತ್ತಿ ಪಾನಮಾಡಿದರು. ಕಾವೇರಿಯು ದೈವಕ ಪರ್ವತದ ಸಮಾಪವನ್ನೈದುತ್ತಿರಲು ಅಲ್ಲಿಯ ನಿವಾಸಿಗಳು ತಂಡೋಪತಂಡವಾಗಿ ನೆರೆದು-"ಕಾವೇರಿಯೇ! ಜಗನ್ಮೋಹಿನಿಯೇ! ಆದಿಶಕ್ತಿಯೇ! ನಮ್ಮನ್ನಗಲಬೇಡ. ಭಕ್ತರಾದ ನಾವು ನಿನ್ನನ್ನಿಲ್ಲಿಂದ ಹೋಗಲು ಬಿಡೆವು" ಎಂದೆನ್ನುತ್ತ ಅಡ್ಡಗಟ್ಟಿದರು ಕಾವೇರಿಯು ನಸುನಗುತ್ತಾ ಅಲ್ಲೇ ಕ್ಷಣ ಒಂದು ಸುತ್ತು ಬಲಕ್ಕೆ ತಿರುಗಿ ಅವರನ್ನು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರೂ ಸಾಧ್ಯವಾಗದೆ ಅವರನ್ನು ನೋಡಿ-"ಮಿತ್ರರಿರಾ ನಿಮ್ಮ ಭಕ್ತಿಗೆ ಮೆಚ್ಚಿದೆನು. ಆದರೆ ನನ್ನಿಚ್ಛೆಯು ಪೂರೈಸಬೇಕಾಗಿದೆ. ನಿಮ್ಮ ಸಹೋದರರಿಗೂ ಉಪಕಾರ ಮಾಡಲು ಹೊರಟಿರುವೆನು. ಆದ್ದರಿಂದ ನೀವು ಚಿಂತಿಸಬೇಡಿರಿ. ನೀವೂ, ನಿಮ್ಮ ವಂಶಿಗಳೂ ಧನಧಾನ್ಯ ಸಮೃದ್ಧಿಯಿಂದ ಯಶೋಭರಿತರಾಗುವಿರಿ." ಎಂದು ಹರಸಿದಳು. ಆದರೆ ಸ್ತ್ರೀಯರೂ ಸೇರಿ ಕಾವೇರಿಯನ್ನು ಹೋಗಗೊಡದಿರಲು ಅವಳು ತನ್ನ ಬಲವನ್ನು ತೋರಿಸಬೇಕೆಂದು, ಭೋರ್ಗರೆಯುತ್ತಾ, ಪ್ರವಾಹವನ್ನು ಉಬ್ಬಿಸಿ ಮುಂದಕ್ಕೆ ಕಾಲಿಡಲು, ಸಲಿಲ ರಾಶಿಯು ವೇಗದಿಂದ ಅವರ ಕಡೆ ಹರಿದು ಅವರ ದೇಹವನ್ನು ಕತ್ತಿನವರೆಗೆ ಮುಳುಗಿಸಿ ಪ್ರವಾಹದ ಹೊಯ್ಲಿನಿಂದ ಅವರ ಸೀರೆಯ ನೆರಿಯು ಮುಂಗಡೆಯಿಂದ ಹಿಂಗಡೆಗೆ ತಿರುಗಿತು. ಆ ಪ್ರದೇಶಕ್ಕೆ ಬಲಮುರಿಯೆಂದು ಹೆಸರಾಯಿತು.

ಮುಂದೆ ನಡೆದು ಸ್ವಲ್ಪ ದೂರ ಹೋದನಂತರ ಅಗಸ್ತ್ಯನಿಂತೆಂದನು. "ಪ್ರಿಯೆ! ನೋಡದೋ ವ್ಯಾಘ್ರಪಾದಕ್ಷೇತ್ರವು. ಅಲ್ಲಿ ವ್ಯಾಘ್ರನು ಆಡಿದ ಮಾತಿಗೆ ತಪ್ಪದ ಹಸುವಿನ ಸತ್ಯಕ್ಕೆ ಮೆಚ್ಚಿ ತಾನೇ ನಾಶವಾದನು. ಇಲ್ಲೇ ಗುಹ್ಯಕರು ವಾಸಮಾಡಿಕೊಂಡಿರುವರು. ಅವರು ನಿತ್ಯವೂ ಶಿವನನ್ನೇ ಧ್ಯಾನಮಾಡುತ್ತಾ ಕಾಲಕಳೆಯುತ್ತಿರುವರು" ಆಗ ಗುಹ್ಯಕರು ಕಾವೇರಿಯನ್ನು ನೋಡಲೋಸುಗ ಹೆಂಡಿರು ಮಕ್ಕಳು ಸಮೇತ ಬಂದು ದೇವಿಯನ್ನು ಅರ್ಚಿಸಿ, ಬಹಳವಾಗಿ ಕೊಂಡಾಡಿದರು. ಅಷ್ಟರಲ್ಲಿ ಸೂರ್ಯನು ನಭೋಮಂಡಲದ ಮಧ್ಯದಲ್ಲಿ ಪ್ರಚಂಡವಾಗಿ ಶೋಭಿಸುತಿದ್ದನು.

ಇನ್ನೂ ಮುಂದೆ ಹೋಗಲು ವಹ್ನಿ ಪುಷ್ಕರಿಣಿ ಎಂಬ ಕ್ಷೇತ್ರವು ಕಾಣಿಸಿತು. ಅಗಸ್ತ್ಯನಾಗ--ಪ್ರಿಯೇ! ಇದೋ ವಾಸವಪುರವು ಸಮಿಾಪಿಸಿತು' ಹಿಂದೆ ಶುಕ್ರಾಚಾರ್ಯನು ಗಾಯತ್ರಿಯನ್ನುದ್ದೇಶಿಸಿ ತಪಸ್ಸು ಮಾಡಲು ಕಪಿಲಾಧೇನುವೂ ದೇವಸ್ತ್ರೀಯರೂ ತಪೋಭಂಗವನ್ನುಂಟು ಮಾಡಲು ಬಂದರು. ಆಗಲಾ ಶುಕ್ರಾಚಾರ್ಯನು ಸಿಟ್ಟುಗೊಂಡು ಘೋರ ಶಾಪವನ್ನಿತ್ತನು. ಅವನ ಶಾಪದಿಂದ ಧೇನುವು ಶಿಲೆಯಾಯಿತು. ದೇವಸ್ತ್ರೀಯರು ವೇಶ್ಯಾ ಸ್ತ್ರೀಯರಾದರು. ಅನಂತರ ಶುಕ್ರಾಚಾರ್ಯನು ತಪಃಸಿದ್ಧಿಯನ್ನು ಹೊಂದಿದನು. ಅಗೋ ಅಲ್ಲಿ ಕಾಣುವ ಶಿಲೆಯೇ ಕಪಿಲಾಧೇನುವು. ಅಲ್ಲಿ ತಪಸ್ಸುಮಾಡಿದವರಿಗೆ ಕಾರ್ಯಸಿದ್ಧಿಯು ಅತಿತ್ವರ್ಯದಲ್ಲಿಯೇ ಆಗುವುದು. ನೀನೂ ಅದಕ್ಕೆ ಪೂಜೆಮಾಡು"ಎಂದೆನಲು ಕಾವೇರಿಯು ಅತಿಭಕ್ತಿಯಿಂದ ವಿಧಿಪ್ರಕಾರ ಪುಜೆಯನ್ನು ಮಾಡಿದಳು. ಎಲ್ಲರೂ ಅನಂತರ ಮುಂದೆ ನಡೆದರು. ಆಗಲಾ ಓರ್ವ ಯುವತೀ ಮಣಿಯು ಸರ್ವಾಲಂಕಾರ ಭೂಷಿತಳಾಗಿ ಮುಕುಳಿತ ಹಸ್ತಳಾಗಿ ನಿಂತುಕೊಂಡಿದ್ದಳು. ಅವಳು ಕಾವೇರಿಯನ್ನು ಕಂಡಕೂಡಲೆ ದಂಡ ಪ್ರಣಾಮವನ್ನು ಮಾಡಿ-"ತಾಯೇ! ನನ್ನ ಜನ್ಮವಿಂದಿಗೆ ಸಫಲವಾಯಿತು. ನಾನು ಹೇಮಾವತಿಯೆಂಬ ನಾಗಕನ್ನಿಕೆಯು. ನಾನು ಕೌಮಾರ್ಯಾವಸ್ಥೆಯಲ್ಲಿಯೇ ನನ್ನ ಈ ಆಯುಷ್ಯವನ್ನು ಕಳೆದು ಭೂಲೋಕದ ಜನರಿಗೆ ಉಪಕಾರವನ್ನು ಮಾಡಬೇಕೆಂದೆಣಿಸಿ, ಬ್ರಹ್ಮನನ್ನು ಕುರಿತು ತಪಸು ಮಾಡಲು ಆತನು ಪ್ರಸನ್ನನಾಗಿ ನೀನು ನದಿಯಾಗಿ ಕಾವೇರಿಯನ್ನು ಸೇರಿ ಲೋಕೋತ್ತರವಾದ ಯಶಸ್ಸನ್ನು ಪಡೆಯೆಂದು ವರವನಿತ್ತನು. ನಾನು ಅಂದಿನಿಂದ ನದಿಯಾಗಿ ನಿನ್ನ ಬರವನ್ನೇ ಎಳಸಿ ಕಾದುಕೊಂಡಿದ್ದೆನು. ನನ್ನನ್ನು ನಿನ್ನ ಜತೆಯಲ್ಲಿಯೇ ಕರದೊಯ್ಯಬೇಕು'' ಎಂದು ಬೇಡಿಕೊಂಡಳು. ಕಾವೇರಿಯು ಅವಳನ್ನಪ್ಪಿಕೊಂಡು ಸಂತೋಷದಿಂದ ತುಂಬಿ ತನ್ನೊಡನೆ ಕರಕೊಂಡು ಮುಂದೆ ಸಾಗಿದಳು.

ಸ್ವಲ್ಪ ಮುಂದೆ ಬಕ ಮಂಡೂಕಗಳ ಧ್ವನಿಯಿಂದ ಗಂಭೀರವಾಗಿಯೂ ಅಂದವಾದ ತಾವರೆ ಹೂಗಳಿಂದ ರಮಣೀಯವಾಗಿಯೂ ಸ್ವಚ್ಛ ತಿಳಿನೀರಿನಿಂದ ಕೂಡಿ ಮನೋಹರವಾಗಿಯೂ ಶೋಭಿಸುತಿದ್ದ ಒಂದಾನೊಂದು

ಸರೋವರವು ಕಾಣಿಸಿತು. ಕಾವೇರಿಯಾ ಸರೋವರವನ್ನು ನೋಡಿ ವೈಮರೆತು ಮತ್ಸ್ಯಗಳ ನಲಿದಾಟವನ್ನು ನೋಡುತ್ತಾ ಸ್ವಲ್ಪ ಹೊತ್ತು ನಿಂತುಬಿಟ್ಟಳು. ಆಗ ಅಗಸ್ತ್ಯನು–"ಲೋಪಾಮುದ್ರೆಯೇ! ಇದು ವಿಶೇಷ ತೀರ್ಥವು. ಮಹಾ ಶ್ರೇಷ್ಠವಾದುದು. ಹಿಂದೆ ಸೀತಾ ರಾಮ ಲಕ್ಷ್ಮಣರು ರಾವಣ ಸಂಹಾರದ ನಂತರ ಪುಷ್ಪಕವಿಮಾನವನ್ನೇರಿ ಹಿಂದಿರುಗಿಬರುತ್ತಿರಲು ಮಲಯಾಚಲವು ಸಮೀಪಿಸಿತು. ಆಗ ಮಧ್ಯಾಹ್ನ ವಾಗಿತ್ತು. ಅಲ್ಲಿಯೇ ವಿಮಾನವನ್ನಿಳಿಸಿ ಅವರೆಲ್ಲರೂ ಸ್ನಾನ ಸಂಧ್ಯಾ ವಂದನಾದಿ ಕರ್ಮಗಳನ್ನು ಪೂರೈಸಿದರು ಆಗ ರಾಮನು ಶಿವಪೂಜೆ ಯನ್ನು ಮಾಡಲು ಶಿವಲಿಂಗವಿಲ್ಲದಿರಲು ಹನುಮಂತನನ್ನು ಕರೆದು– "ಆಂಜನೇಯನೇ! ನೀನೀಗಲೇ ಕಾಶಿಗೆ ಹೋಗಿ ಒಂದು ಲಿಂಗವನ್ನು ತರಬೇಕು" ಎಂದು ಆಜ್ಞಾಪಿಸಿದನು. ಹನುಮಂತನು ಒಡನೆ ವಾಯು ವನ್ನು ಭೇದಿಸಿ ಹಾರಿಹೋದನು. ಅಷ್ಟರಲ್ಲಿ ಮಧ್ಯಾಹ್ನವು ಕಳೆದು ಸೂರ್ಯನು ಪಶ್ಚಿಮಾಭಿಮುಖನಾದನು. ಆದರೂ ಹನುಮಂತನ ಬರವೇ ಕಾಣಲಿಲ್ಲ. ಆದ್ದರಿಂದ ರಾಮನು ಹಸಿವನ್ನು ತಡೆಯಲಾರದೆ, ಶಿವಲಿಂಗವನ್ನು ತರುವಾಗ ಇನ್ನಷ್ಟು ಹೊತ್ತಾಗುವುದೆಂದೆಣಿಸಿ ಮಳಲ ಲಿಂಗವನ್ನು ಮಾಡಿ, ಪೂಜಾದಿ ವಿಧಿಗಳನ್ನು ಮುಗಿಸಿ ಭೋಜನವನ್ನು ತೀರಿಸಿ ಕುಳಿತುಕೊಂಡನು. ಆಗ ಹನುಮಂತನು ಶಿವಲಿಂಗಸೊಡನೆ ಅಲ್ಲಿ ಬಂದಿಳಿದನು. ಆದರೆ ಶಿವಪೂಜೆಯು ಆಗಿಹೋಗಿದ್ದುದರಿಂದ ಹನುಮಂತನಿಗೆ ತಡೆಯಲಾರದ ಸಿಟ್ಟುಬಂತು. ಆಗ ಅವನು ಮಲಯಾ ಚಲನನ್ನು ತನ್ನ ಬಾಲದಲ್ಲಿ ಸುತ್ತಿ, ಸೀತಾರಾಮರಿದ್ದೆಡೆಗೆ ಅದನ್ನೆತ್ತಿ ಕೊಂಡು ಬರಬೇಕೆಂದೆಣಿಸಲು ರಾಮನು ತಡೆದು, ಆ ಮಳಲ ಲಿಂಗವನ್ನು ಕಿತ್ತುಬಿಸುಟು ಕಾಶಿಯ ಲಿಂಗವನ್ನು ಪ್ರತಿಷ್ಠೆಮಾಡುವೆನೆಂದು ವಾಗ್ದಾನ ಮಾಡಿದನು. ಹಾಗೆಯೇ ಆಗಲೆಂದೊಪ್ಪಿ ಹನುಮಂತನು ಆ ಮಳಲ ಲಿಂಗವನ್ನು ಕಿತ್ತು ಬಿಸಾಡಲು ಪ್ರಯತ್ನಿಸಲು ಅದು ಸಾಧ್ಯವಾಗ ದಾಯಿತು. ಅನಂತರ ಅದರ ಸುತ್ತು ತನ್ನ ಬಾಲಬೀಸಿ ಅದನ್ನೆತ್ತಲು ಪ್ರಯತ್ನಿಸಿದರೂ ಮಳಲ ಲಿಂಗವು ಬಾರದೆ, ಪರ್ವತಶಿಖರದಂತೆ ಬೆಳೆ ಯಿತು. ಆಂಜನೇಯನದನ್ನು ನೋಡಿ ತನ್ನ ಹುಚ್ಚುತನಕ್ಕೆ ಪಶ್ಚಾತ್ತಾಪ

ಪಟ್ಟು ಆ ಲಿಂಗಕ್ಕೆ ಅಭಿಷೇಕವನ್ನು ಮಾಡಿದನು. ಆ ಅಭಿಷೇಕದ ತೀರ್ಥವೇ ಹರಿದು ಬಂದು ಇಲ್ಲಿ ಸರೋವರವಾಗಿ ನಿಂತಿದೆ. ನೀನದನ್ನು ಸ್ವೀಕರಿಸು. ಇದೇ ಲಕ್ಷ್ಮಣ ತೀರ್ಥವು. ಸಕಲ ತೀರ್ಥಗಳಲ್ಲಿ ಶ್ರೇಷ್ಠ ವಾದುದು. ಕಾವೇರಿಯು ಅದನ್ನು ಅತ್ಯಾದರದಿಂದ ಸ್ವೀಕರಿಸಿ ತನ್ನ ನದಿಗೆ ಸೇರಿಸಿಕೊಂಡಳು.

ತದನಂತರ ಶ್ರೀನಿವಾಸಕ್ಷೇತ್ರವು ಫಲ ಪುಷ್ಪಾದಿಗಳಿಂದ ನಿಬಿಡವಾದ ಉದ್ಯಾವನಗಳಿಂದ ಕಂಗೊಳಿಸುತಿದ್ದುದನ್ನು ಅವರು ಕಂಡರು. ಮೈತ್ರಾ ವರುಣಿಯು ಆ ಕ್ಷೇತ್ರವನ್ನು ಕಂಡೊಡನೆ-"ಪ್ರಿಯೇ! ಅದೇ ಶ್ರೀನಿವಾಸ ಕ್ಷೇತ್ರವು. ಅಲ್ಲೀ ಶ್ರೀನಿವಾಸನು ವಾಸಮಾಡುತ್ತಿರುವನು. ಹಿಂದೆ ನಾನಲ್ಲಿಯೇ ತಪಸ್ಸುಮಾಡಿ ಅಣಿಮಾದಿ ಸಿದ್ಧಿಗಳನ್ನು ಪಡೆದೆನು. ನೀನವನ ಪಾದವನ್ನು ತೊಳೆದರೆ ಮಹಾಪುಣ್ಯವು ಲಭಿಸುವುದು" ಎಂದನು. ಆ ಮಾತಿನಂತೆಯೇ ಕಾವೇರಿಯು ತನ್ನ ಸಲಿಲ ರಾಶಿಯುನ್ನು ಇಬ್ಭಾಗಿಸಿ, ಉಬ್ಬಿ ಶ್ರೀನಿವಾಸನ ಪಾದಗಳನ್ನು ತೊಳೆದು ಪೂರ್ವ ಪಶ್ಚಿಮವಾಹಿನಿ ಯಾಗಿ ಹರಿದು, ಪುನಃ ಒಟ್ಟುಗೂಡಿಸಿ ಮುಂದೆ ನಡೆದಳು.

ಕೆಲವು ಯೋಜನ ದೂರಹೋದ ನಂತರ ಮನೋಹರವಾದ ವಟ ವೃಕ್ಷಾದಿಗಳ ಸಮೂಹವೂ, ತಿಳಿನೀರಿನಿಂದ ಕೂಡಿದ್ದ ಉದ್ದವಾದ ಸರೋವರವೂ ಅವರಿಗೆ ಕಾಣಿಸಿದವು. ಸರೋವರದ ಸಮೀಪಕ್ಕೆ ಹೋದಕೂಡಲೆ, ವಿದ್ಯುಚ್ಛಕ್ತಿಯಂತೆ ಪ್ರಭೆಯನ್ನು ಸುರಿಸುತ್ತಿದ್ದ ನಾರೀ ಮಣಿಯೊಬ್ಬಳು ಸರೋವರದಿಂದೆದ್ದು ಬಂದು ಕಾವೇರಿಗೆ ನಮಸ್ಕರಿಸಿ ದೇವಿಯೇ ನಾನು ಕಪಿಲೆಯು, ನಾಗಕನ್ನಿಕೆಯು-ನಾನು ಭೂಲೋಕದಲ್ಲಿ ಅಳಿವಿಲ್ಲದೆ ಚಿರಂಜೀವಿಯಾಗಿರುವ ಸಮುದ್ರರಾಜನನ್ನು ವರಿಸಬೇಕೆಂದು ಇಚ್ಛಿಸಿ, ವರುಣನನ್ನು ಕುರಿತು ತಪಸ್ಸುಮಾಡಲು ಆತನು ಒಲಿದು ಕಾವೇರಿಯು ಸಂಗಾತ ನೀನು ಬಂದರೆ, ನಿನ್ನ ಮನೋಭೀಷ್ಟವು ನೆರವೇರು ವುದು ಎಂದು ಹೇಳಿ ಅದೃಶ್ಯನಾದನು. ಅನಂತರ ನಾನಿಲ್ಲಯೇ ನಿನ್ನನ್ನು ಕಾದಿದ್ದೆನು. ನನ್ನನ್ನು ವರುಣನಿಗರ್ಪಿಸುವ ಭಾರವು ನಿನ್ನದಾಗಿದೆ "ಎಂದು ಹೇಳಲು ಕಾವೇರಿಯು-"ತಂಗೀ ಮಹಾಸಂತೋಷವು ನೀನು

ಹೊರಡು" ಎಂದಳು. ಕಪಿಲೆಯು ಕಾವೇರಿಯ ಜತೆಯಲ್ಲಿ ಕಲೆತಳು. ಎಲ್ಲರೂ ಮುಂದೆ ನಡೆದರು.

ಸ್ವಲ್ಪದೂರ ಹೋಗುತ್ತಲೇ ಬ್ರಹ್ಮರಾಕ್ಷಸನೊಬ್ಬನು ಧಾವಿಸಿ ಬಂದು, ಕಾವೇರಿಯ ತೀರ್ಥವನ್ನು ಕುಡಿದು ನಲಿದು ಹೊರಳಾಡಿದನು. ಆಗ ದಿವ್ಯ ತೇಜಸ್ಸಿನ ವಿಮಾನವೊಂದು ದೇವಲೋಕದಿಂದಿಳಿಯಿತು. ಕೂಡಲೆ ಬ್ರಹ್ಮರಾಕ್ಷಸನ ಶರೀರದಿಂದ ಪ್ರಕಾಶಮಾನವಾದ ಆತ್ಮನು ಹೊರಟು ವಿಮಾನದಲ್ಲಿ ಕುಳಿತುಕೊಂಡು, ಕಾವೇರಿಯನ್ನು ಬಹು ವಿಧವಾಗಿ ಸ್ತುತಿಸಿ ಸ್ವರ್ಗಲೋಕಕ್ಕೆ ತೆರಳಿದನು. ಕಾವೇರಿಯುದನ್ನು ನೋಡಿ ತನ್ನಿನಿಯ ನೊಡನೆ ಅದೇನೆಂದು ಕೇಳಲು ಅಗಸ್ತ್ಯನು-"ಪ್ರಿಯೇ ಆ ಬ್ರಹ್ಮರಾಕ್ಷಸನು ಹಿಂದೆ ಕಣ್ವರಿಸಿಯ ಶಿಷ್ಯನಾಗಿದ್ದನು. ತನ್ನ ಕರ್ಮದದೆಸೆಯಿಂದ ಈ ರೀತಿಯಲ್ಲಿ ಬ್ರಹ್ಮರಾಕ್ಷಸನಾಗಿ ಪ್ರಾಣವನ್ನು ತ್ಯಜಿಸಬೇಕಾಯಿತು" ಎಂದನು. ಕಾವೇರಿಯಾಗ ಅವನ ಕಥೆಯನ್ನು ಸಂಪೂರ್ಣವಾಗಿ ವಿವರಿಸಬೇಕು ಎಂದು ಕೇಳಿಕೊಳ್ಳಲು ಅಗಸ್ತ್ಯನಿಂತೆಂದನು-"ರಮಣಿಯೇ! ಇಲ್ಲೇ ಕಣ್ವಾಶ್ರಮವಿರುವುದು. ಹಿಂದೆ ವ್ಯಾಘ್ರಕೇತು ಎಂಬ ರಾಜನು ಕಣ್ವರಿಸಿಗೆ ಐವತ್ತು ಗ್ರಾಮಗಳನ್ನು ದಾನವಾಗಿ ಕೊಟ್ಟಿದ್ದನು. ಆ ಗ್ರಾಮಗಳ ಮೇಲ್ವಿಚಾರಣೆಗೆ ವಸು ಎಂಬ ಶಿಷ್ಯನನ್ನು ನಿಯಮಿಸಿದನು. ವಸುವು ಕಣ್ವನನ್ನು ವಂಚಿಸಿ, ಆ ಗ್ರಾಮಗಳ ಆದಾಯವನ್ನು ದ್ಯೂತಾದಿ ಗಳಿಗೆ ಉಪಯೋಗಿಸಿಕೊಂಡು ಗುರುದ್ರೋಹಕ್ಕೀಡಾದನು. ಅವನ ಗುರುದ್ರೋಹದ ಪಾಪನಿವೋಚನೆಗೆ ದಾರಿಕಾಣದೆ ಅಳಿಯಲು, ಅನೇಕ ನರಕಯಾತನೆಗಳನ್ನನುಭವಿಸಿ, ಬ್ರಹ್ಮರಾಕ್ಷಸನಾಗಿ ಹುಟ್ಟಿ ಕಡೆಗೆ ವೃಷಳ ನಾದನು. ಆತನು ಪುಣ್ಯವಶದಿಂದ ಒಂದು ದಿನ ಕಣ್ವನನ್ನು ಕಂಡು ಪೂರ್ವಜನ್ಮ ಸ್ಮೃತಿಯುಂಟಾಗಲು, ಅವನನ್ನು ಸ್ತುತಿಸಿ ತನ್ನ ಯಾತನೆ ಗಳಿಗೆ ಪರಿಹಾರವನ್ನು ಕೇಳಲು, ಕಾವೇರಿಪಾನದಿಂದ ಸದ್ಗತಿಯನ್ನು ಪಡೆಯುವೆ ಎಂದು ಆತನ ಗುರುವು ಹೇಳಲು ಆತನಿಲ್ಲಿಯೇ ನಿನ್ನನ್ನು ನಿರೀಕ್ಷಿಸಿಕೊಂಡಿದ್ದನು. "ನಿನ್ನ ಜಲಪಾನದಿಂದ ಆವನು ಮುಕುತಿಯ ನ್ನೈದಿದನು." ಆ ಕಥೆಯನ್ನು ಕೇಳಿ ಮಂದಿಯೆಲ್ಲವೂ ಹರ್ಷಭರಿತ ರಾಗಿ ಮುಂದೆ ನಡೆದರು. ಆಗ ಅಷ್ಟದಳಪದ್ಮದಂತಿದ್ದ ಪರ್ವತಗಳೂ

ಅವುಗಳ ಮಧ್ಯದಲ್ಲಿದ್ದ ಈಶ್ವರನ ಲಿಂಗವೂ ಕಾಣಿಸಿದವು. ಅಗಸ್ತ್ಯನ "ಪ್ರಾಣಪ್ರಿಯೇ" ಅದೇ ತ್ರಿಮುಕುಟಕ್ಷೇತ್ರವು. ಅಲ್ಲಿ ತ್ರಿಮೂರ್ತಿಗಳು ನೆಲಸಿರುವರು. ಅಗೋ ಅದೇ ಅಷ್ಟದಳಪದ್ಮವು. ಅಲ್ಲಿ ಕೃತ್ತಿವಾಸನು ನೆಲಸಿರುವನು. ಅಲ್ನೋಡು, ವಹ್ನಿಯರ್ಕಪುಷ್ಕರಿಣಿಗಳು ನೆಲಸಿರುವವು. ಅವುಗಳ ತೀರ್ಥದೊಡನೆ ಕಲೆತು ಈ ನಂಜುಂಡೇಶ್ವರನಿಗೆರಗಿ ಮುಂದಾಗು" ಎಂದೆನಲು ಕಾವೇರಿಯೂ ಆವಳ ಪರಿವಾರವೂ ಹಾಗೆಯೇ ಮಾಡಿ ಮುಂದುವರಿದರು. ಆಗ ಗಜಾರಣ್ಯಕ್ಷೇತ್ರವು ಸಮಿಾಪಿಸಿತು. ಅಗಸ್ತ್ಯನು ಅದನ್ನು ನೋಡಿ-"ಗಜಾರಣ್ಯದ ಕಥೆಯು ಮಹಾ ವಿಶೇಷವಾದುದು. ಪ್ರಿಯೇ ನೀನದನ್ನು ಕೇಳಬೇಕು "ಎಂದೆನಲು ಕಾವೇರಿಯು ಹಾಗೆಯೇ ಆಗಲಿ" ಎಂದಳು. ಆಗ ಅಗಸ್ತ್ಯನು-ಪ್ರಿಯೇ! ಪೂರ್ವದಲ್ಲಿ ಸೋಮದತ್ತನೆಂಬ ಬ್ರಾಹ್ಮಣನು ಸಂಸಾರ ಜಿಜ್ಞಾಸೆಯನ್ನು ಕಳೆಯಲು ಕಾಶಿಯಲ್ಲಿ ತಪಸ್ಸುಮಾಡಿದನು. ಶಿವನು ಅವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ-"ವಿಪ್ರನೇ ನೀನು ದಕ್ಷಿಣಾಪಥದ ಋಚೀಕನಾಶ್ರಮದಲ್ಲಿ ತಪಸ್ಸು ಮಾಡಿದರೆ ನಿನಗೆ ಇಷ್ಟಸಿದ್ಧಿಯಾಗುವುದು" ಎಂದು ಹೇಳಿ ಮಾಯವಾದನು. ಹಾಗೆಯೇ ಅವನು ಶಿಷ್ಯರೊಡನೆ ಹೊರಟು ವಿಂಧ್ಯಾಚಲವನ್ನು ದಾಟಿ ಒಂದಾನೊಂದು ಘೋರಾರಣ್ಯವನ್ನು ಪ್ರವೇಶಿಸಲು ಮದ್ದಾನೆಗಳು ಅವರನ್ನು ಹಿಡಿದು ಸೀಳಿ ಕೊಂದುಬಿಟ್ಟವು. ಅವರೆಲ್ಲರೂ ತದನಂತರ ಗಜಗಳಾಗಿ ಜನ್ಮವೆತ್ತಿ ಅಲೆದಾಡುತ್ತ ಬಂದು, ಪೂರ್ವ ಜನ್ಮ ಸ್ಮರಣೆಯಿಂದ ದಕ್ಷಿಣಾಪಥದ ಋಚೀಕನಾಶ್ರಮದ ಬಳಿ ನೆಲಸಿದವು. ಅಲ್ಲಿಯೇ ಒಂದು ಪೊದರಿನಲ್ಲಿ ಒಂದು ಶಿವಲಿಂಗವಿದ್ದಿತು ಅದನ್ನು ಕಂಡು ಆನೆಗಳು ನಿತ್ಯವೂ ಸೊಂಡಿಲಲ್ಲಿ ನೀರನ್ನು ತುಂಬಿ, ತಂದು, ಆ ಪೊದರಿಗೆರೆದು ಪಕ್ಕದ ಸರೋವರದಲ್ಲಿ ಬೆಳೆಯುತ್ತಿದ್ದ ತಾವರೆಗಳನ್ನೆತ್ತಿ ತಂದು ಲಿಂಗವನ್ನರ್ಚಿಸುತ್ತಿದ್ದವು. ಇದನ್ನು ಬೇಡರು ನೋಡಿ ಶಿವಲಿಂಗದ ಗುರ್ತುತಿಳಿಯದೆ ಮದ್ದಾನೆಗಳನ್ನು ಕತ್ತರಿಸಲು ಸುಲಭವಾಯಿತೆಂದೆಂದು, ಆ ಗುಂಪನ್ನೇ ಕೊಡಲಿಗಳಿಂದ ಕಡಿದು ಸಂಹರಿಸಿದರು. ಆಗ ಕೊಡಲಿಯೊಂದು ಕೈಜಾರಿ ಆ ಪೊದರಿಗೆ ಬೀಳಲು ರಕ್ತವು ಧಾರೆಯಾಗಿ ಹರಿಯಿತು. ಆದನ್ನು ಬೇಡರು ನೋಡಿ ಭೀತರಾಗಿ

ಶಿವನನ್ನು ಪ್ರಾರ್ಥಿಸಲು—"ಅದೋ ಪೊದರಿನಲ್ಲಿ ಶಿವಲಿಂಗವಿರುವುದು. ಅದನ್ನು ಪೂಜಿಸಿದರೆ ರಕ್ತಸ್ರಾವವು ನಿಲ್ಲುವುದು" ಎಂಬ ಆಕಾಶ ವಾಣಿಯು ಕೇಳಿಸಿತು. ಒಡನೆ ಆ ಬೇಡರೆಲ್ಲರೂ ಏಕಾಗ್ರಚಿತ್ತದಿಂದ ಶಿವನನ್ನು ಧ್ಯಾನಿಸಿ ಶಿವಲಿಂಗವನ್ನು ಆರಾಧಿಸಲು ರಕ್ತಸ್ರಾವವು ಥಟ್ಟನೆ ನಿಂತಿತು. ಗಜಜನ್ಮವೆತ್ತಿದ್ದ ಮುನಿಯೂ ಆತನ ಶಿಷ್ಯರೂ ದೇಹವನ್ನು ತ್ಯಜಿಸಿ ಸ್ವರ್ಗಲೋಕಕ್ಕೆ ಹೋದರು" ಎಂದನು. ಕಾವೇರಿಯು ಗಜಾ ರಣ್ಯದ ಕಥೆಯನ್ನು ಕೇಳಿ ಆನಂದಿತಳಾಗಿ ಆ ಶಿವಲಿಂಗವನ್ನು ಪೂಜಿಸಿ ಮುಂದುವರಿದಳು.

ಕಾವೇರಿದೇವಿಯು ಸ್ವಲ್ಪ ದೂರ ಹೋಗಲು ಮೇರುಪರ್ವತದಂತೆ ಶೋಭಿಸುತ್ತಿದ್ದ ಒಂದಾನೊಂದು ಪರ್ವತಶ್ರೇಣಿಯು ವ್ಯೆದೋರಿತು. ಅಗಸ್ತ್ಯನದನ್ನು ಕಂಡೊಡನೆಯೇ—"ಮನೋರಮೆಯೇ, ಇದೋ ಬ್ರಹ್ಮ ಸೃಷ್ಟಿಯು ಆ ಪರ್ವತದ ಬುಡದವರೆಗಿರುವುದು. ಅನಂತರ ವಿಶ್ವಾಮಿತ್ರ ಸೃಷ್ಟಿಯು ಇರುವುದು. ಇಗೋ! ಇದೇ ಮಧ್ಯರಂಗವು. ಮುಂದೆ ದೊಡ್ಡ ಹಳ್ಳವಿರುವುದು. ಪೂರ್ವದಲ್ಲಿ ಇಂದ್ರನು ತಿಮಿರಾಸುರನನ್ನು ವಜ್ರಾಯುಧದಿಂದ ಸಂಹರಿಸಲು ಆ ರಾಕ್ಷಸನು ಇಲ್ಲಿಯೇ ಧೊಪ್ಪನೆ ಕೆಳಗೆ ಬಿದ್ದನು. ಆಗ ಆ ದೇಹವು ಭೂಗರ್ಭವನ್ನು ಸೀಳಿ ಒಂದು ದೊಡ್ಡ ಹಳ್ಳವನ್ನು ಮಾಡಿತು. ನೀನಿಲ್ಲಿ ಜಾಗ್ರತೆಯಿಂದಿಳಿಯಬೇಕು" ಎಂದನು. ಪತಿಯ ಮಾತುಗಳನ್ನು ಕೇಳಿ ಕಾವೇರಿಯು ಬಲು ಎಚ್ಚರಿಕೆ ಯಿಂದ ಆ ಪರ್ವತದ ಕಿಬ್ಬಿಯನ್ನಿಳಿಯಲು, ಅವಳ ತೀರ್ಥರಾಶಿಯು ತಿಮಿರಾಸುರನ ದೇಹವು ಮಾಡಿದ ಹಳ್ಳವನ್ನು ತುಂಬಿತು. ಆಗ ದಿವ್ಯ ದೇಹಧಾರಿಯಾದ ಗಂಧರ್ವನೊಬ್ಬನು ಮೇಲಕ್ಕೆದ್ದು "ತಾಯೇ! ನಿನ್ನ ಪಾದಸ್ಪರ್ಶದಿಂದ ನಾನಿಂದು ಕೈವಲ್ಯಪದವಿಯನ್ನು ಪಡೆದೆನು. ಹಿಂದೆ ಇಂದ್ರನ ವಜ್ರಾಯುಧಕ್ಕಾಹುತಿಯಾಗಿಲ್ಲಿ ಬಿದ್ದು ಭೂಗರ್ಭದ ಬೆಂಕಿ ಯಲ್ಲಿ ಬೇಯುತ್ತಾ ನರಕಯಾತನೆಯನ್ನನುಭವಿಸುತಿದ್ದೆನು. ಇಂದು ಆ ನರಕಯಾತನೆಗಳಿಂದ ಪಾರಾಗಿ ಮುಕ್ತಿಯನ್ನು ಪಡೆದೆನು" ಎಂದು ಹೇಳುವಷ್ಟರಲ್ಲಿ ದೇವಲೋಕದ ದಿವ್ಯ ವಿಮಾನವೊಂದು ಬರಲು ಅದನ್ನೇರಿ ಸ್ವರ್ಗಲೋಕಕ್ಕೆ ಪಯಣಬೆಳಸಿದನು.

ದೇವಪರಿವಾರವು ಮುಂದೆ ಸಾಗಿತು. ಕಾವೇರಿಯು ತನ್ನ ಸಖಿಯರೊಡನೆ ಸರಸವಾಡುತ್ತಾ, ಅಗಸ್ತ್ಯನನ್ನು ಪ್ರೇಮಮಯವಾಕ್ಕುಗಳಿಂದ ಸಂತೋಷಪಡಿಸುತ್ತಾ ಗಂಭೀರತೆಯಿಂದ ನಡೆದು ಮುಂದೆ ಸಾಗಿದಳು. ಆಗ ಮುಂದೆ ಮರಗಿಡಗಳು, ಪೈರುಪಚ್ಚೆಗಳಿಲ್ಲದೆ ಬೆಂಗಾಡಾಗಿ ಮನಸ್ಸಿಗೆ ಅಸಹ್ಯವನ್ನುಂಟುಮಾಡುವಂತಹ ಪ್ರದೇಶವು ಅವಳಿಗೆ ಕಾಣಿಸಿತು. ಆ ಪ್ರದೇಶದಲ್ಲಿ ಪ್ರಾಣಿಗಳು ಹೇಗೆ ಜೀವಿಸುವವೆಂದು ತನ್ನ ಪತಿಯನ್ನು ಕೇಳಲು ಅವನು-"ರಮಣಿಯೇ ಇದು ಕುರೂಪಿಗಳಾದ ನಾಸ್ತಿಕರ ವಾಸಸ್ಥಳವು, ಕರ್ಮಾನುಬಂಧದಿಂದ ಇಲ್ಲಿ ನರಕಯಾತನೆಯನ್ನು ಅವರು ಅನುಭವಿಸುತ್ತಿರುವರು. ಅವರು ಹಿಂದಿನ ಜನ್ಮದಲ್ಲಿ ಶಿವೋಪಾಸಕರಾಗಿದ್ದ ಶಿವಗಣಗಳು. ಒಂದು ದಿನ ಅವರು ತುಂಬಿದ ಸಭೆಯಲ್ಲಿ ಜಗದಂಬೆಯೊಡನೆ ಧಿಕ್ಕರಿಸಿ ಮಾತಾಡಲು ಅವಳು ಕೋಪಗೊಂಡು ಮದೋನ್ಮತ್ತರಾದ ಗಣಗಳೇ! ಶಿವಭಕ್ತರೆಂಬ ಹೆಮ್ಮೆಯಿಂದ ನನ್ನನ್ನು ಅಲಕ್ಷಿಸಿ ಮಾತಾಡಿದಿರಿ. ನೀವು ದಕ್ಷಿಣಾಪಥದ ಬೆಂಗಾಡು ಪ್ರದೇಶದಲ್ಲಿ ಕೃಷ್ಣವರ್ಣದ ಮೈಬಣ್ಣದಿಂದ ಕುರೂಪಿಗಳಾಗಿ ಜನಿಸಿರಿ'' ಎಂದು ಶಾಪವನ್ನಿತ್ತಳು. ಆಗಲಾ ಶಿವಗಣಗಳು ಬೆದರಿ ಶಿವನನ್ನು ಮರೆಹೋಗಲು ಭಕ್ತಪರಾಧೀನನಾದ ಮಹೇಶ್ವರನಾಗ-ಭಕ್ತರೇ! ನೀವು ಕೆಲವು ಕಾಲ ಭೂಲೋಕದಲ್ಲಿ ಪಾರ್ವತಿಯ ಶಾಪದಂತೆ ದಕ್ಷಿಣಾಪಥದ ಬೆಂಗಾಡಿನಲ್ಲಿ ವಾಸಮಾಡಿರಿ. ಆಗ ವಿಷ್ಣುಜಾತೆಯಾದ ಕಾವೇರಿಯಲ್ಲಿಗೆ ಬರುವಳು. ಯಾವಾಗ ಕವೇರತನಯಳು ನಿಮ್ಮ ದೇಶವನ್ನು ಸೇರುವಳೋ, ಯಾವಾಗ ಅವಳ ಪತಿಯಾದ ಅಗಸ್ತ್ಯನು ನನ್ನ ಲಿಂಗವನ್ನು ಅಲ್ಲಿ ಸ್ಥಾಪಿಸುವನೋ ಆಗ ನಿಮ್ಮ ಶಾಪವಿಮೋಚನೆಯಾಗಿ ನೀವು ನನ್ನನ್ನು ಸೇರುವಿರಿ; ಅಲ್ಲದೆ ನೀವು ವಾಸಮಾಡುವ ಬೆಂಗಾಡು ಪ್ರದೇಶವು ಫಲಪುಷ್ಪ ಭರಿತವಾಗಿ ಸುಭಿಕ್ಷದಿಂದ ಮೆರೆಯುವುದು" ಎಂದು ಹರಸಿದನು. ಅನಂತರ ಆ ಗಣಗಳೆಲ್ಲಾ ಇಲ್ಲಿ ಜನ್ಮವೆತ್ತಿದವು. ಅಗೋ! ಅಲ್ಲಿ ತಂಡತಂಡವಾಗಿ ಈ ಕಡೆಗೆ ಬರುತ್ತಿರುವವು'' ಎಂದೆನ್ನುವಷ್ಟರಲ್ಲಿ ಸಾಗರದಂತೆ ಗಂಭೀರವಾದ ಶಬ್ದವನ್ನು ಮಾಡುತ್ತಾ ಜನಸಮುದಾಯವೊಂದು ಓಡಿಬರುತ್ತಿತ್ತು. ಕತ್ತಲೆಯಂತೆ ಕರಿಬಣ್ಣದಿಂದೊಪ್ಪುತ್ತಿದ್ದ ಜನರು ಆಕಾಶ

ವನ್ನು ಭೇದಿಸುವಂತೆ ಮಹಾ ಕೋಲಾಹಲವನ್ನುಂಟುಮಾಡುತ್ತಾ ಬಂದು, ಕಾವೇರಿಯು ಒಯ್ಯುತ್ತಿದ್ದ ತೀರ್ಥರಾಶಿಯಲ್ಲಿ ಹೊರಳಾಡಿ ಯಥೇಚ್ಛವಾಗಿ ಕುಡಿದು ಮಹೋಲ್ಲಾಸದಿಂದ ಮೆರೆದರು. ಆಗ ಅಗಸ್ತ್ಯನು ಒಂದು ಲಿಂಗವನ್ನು ಅಲ್ಲೇ ಸ್ಥಾಪಿಸಲು, ಅದನ್ನವರು ಕಂಡು, ಪೂರ್ವಜನ್ಮ ಸ್ಮರಣೆಯುವರಿಗೊಡನೆಯೇ ಬಂದು, ಆ ಲಿಂಗವನ್ನವರು ಅರ್ಚಿಸಲು ಕೈಲಾಸಗಿರಿಯಿಂದ ವಿಮಾನಗಳು ಬಂದುವು. ಅವನ್ನೇರಿ, ಆ ಗಣಗಳೆಲ್ಲವೂ ಕಾವೇರಿಯುನ್ನು ಹೊಗಳಿ ಶಿವನ ಸನ್ನಿಧಾನಕ್ಕೆ ಹೊರಟು ಹೋದವು.

ಮುಂದೆ ಬಯಲು ಪ್ರದೇಶವಿದ್ದುದರಿಂದ ಕಾವೇರಿಯು ತನ್ನ ಗತಿಯನ್ನು ಬದಲಾಯಿಸಿ ಮಂದಹಾಸದಿಂದ ಮಂದಗಮನೆಯಾಗಿ ನಡೆದಳು. ಆಗ ದೇವದೇವೇಶನಾದ ಶ್ರೀರಂಗನಾಥನು ತನ್ನ ಮಾತಿನಂತೆ ನಿಜಕ್ಷೇತ್ರದಲ್ಲಿ ಕಾದು ನಿಂತಿದ್ದನು. ನಾರದಾದಿ ಮಹರ್ಷಿಗಳು ಶ್ರೀರಂಗನ ಸೇವಾ ನಿರತರಾಗಿ ಸಮೀಪವೇ ನಿಂತಿದ್ದರು. ಪಕ್ಕದಲ್ಲಿ ಚಂದ್ರಪುಷ್ಕರಿಣಿಯು ಉತ್ತಮವಾದ ತಿಳಿನೀರಿನಿಂದ ಮೆರೆಯುತ್ತಾ ರಂಗನಾಥನನ್ನು ಪ್ರತಿಬಿಂಬಿಸುತಲಿತ್ತು. ಕಾವೇರಿಯು ಉಲ್ಲಾಸದಿಂದ ನಡೆದು ತನ್ನ ಜನ್ಮದಾತನನ್ನು ಕಂಡಳು. ಆನಂದೋತ್ಸಾಹದಿಂದ ಮೆರೆದಳು. ರಂಗನಾಥನಾದರೋ, ತಿಳಿನೀರಿನಿಂದಾವೃತಳಾಗಿ, ಸೂರ್ಯಪ್ರಭೆಯನ್ನು ಧಿಕ್ಕರಿಸುವಂತಹ ರೂಪಯುತಳಾಗಿ ಮಂದಗಾಮಿನಿಯಾಗಿ ಬರುತಿದ್ದ ಕಾವೇರಿಯನ್ನು ದೂರದಿಂದಲೇ ಕಂಡು ಸಂತೋಷಾತಿಶಯದಿಂದ ನಲಿದಾಡಿದನು. ಶ್ರೀ ಲಕ್ಷ್ಮಿಯೂ ಅವನ ಎಡ ಪಾರ್ಶ್ವದಲ್ಲೇ ನಿಂತು ತನ್ನ ಮಗಳ ಚೆಲುವನ್ನು ಮನಸ್ಸಿನಲ್ಲಿಯೇ ವರ್ಣಿಸುತ್ತಾ ಅತ್ಯಾನಂದಭರಿತಳಾಗಿದ್ದಳು. ದೇವ ದುಂದುಭಿಗಳ ಮಂಜುಳ ಧ್ವನಿಯೂ, ಗಂಧರ್ವರ ಗಾಯನವೂ ಅಪ್ಸರೆಯರ ನರ್ತನವೂ ಮುನಿಗಳ ವಂದನಾಪೂರ್ವಕವಾದ ಸ್ತೋತ್ರಗಳೂ ಶ್ರೀರಂಗನಾಥನಿಗೆ ಇಂಪನ್ನು ಬೀರಿದುವು. ಕಾವೇರಿಯನ್ನು ಹಿಂಬಾಲಿಸಿ ಬರುತಿದ್ದ ದೇವತೆಗಳ ಪರಿವಾರವನ್ನೂ ಮಹರ್ಷಿಗಳನ್ನೂ ಆನಂದೋತ್ಸಾಹದಿಂದ ಮೆರೆಯುತಿದ್ದ ಮಗಳನ್ನೂ ಅಳಿಯನನ್ನೂ ಕಂಡು ಶೇಷಶಾಯಿಯು ಅತ್ಯಾನಂದವನ್ನು ಹೊಂದಿ ಜಯಘೋಷವನ್ನು

ಮಾಡಿದನು. ಕಾವೇರಿಯು ಅಗಸ್ತ್ಯನೊಡನೆ ಶ್ರೀರಂಗನಾಥನ ಮತ್ತು ಶ್ರೀ ಲಕ್ಷ್ಮಿಯ ಪಾದಗಳಿಗೆರಗಿ, ವಿಧಿಪೂರ್ವಕವಾಗಿ ಪೂಜೆಮಾಡಿದರು. ದೇವವೃಂದವೆಲ್ಲವೂ ಅವನನ್ನು ಆರಾಧಿಸಿತು. ಆಗಲಾ ಕಾಂತಿಮಯ ನಾದ ಪರಮಾತ್ಮನು ಭಕ್ತರನ್ನೂ ತನ್ನ ಮಗಳನ್ನೂ ಅಳಿಯನನ್ನೂ ಹರಸಿ ಕಾವೇರಿಯನ್ನು ಕುರಿತು-ಮಗಳೇ! ನಿನ್ನಿಂದ ಭೂಲೋಕವು ದೇವ ಲೋಕ ಸಮಾನವಾಯಿತು. ನಿನ್ನ ಪುಣ್ಯತೀರ್ಥದಿಂದ ಧರಣಿಯು ಪವಿತ್ರಳಾದಳು. ನಿನ್ನ ತೀರ್ಥವನ್ನು ಸೇವಿಸಿದ ಪಶು ಪಕ್ಷಿಮನುಷ್ಯಾದಿ ಜೀವಿಗಳು ಮೋಕ್ಷವನ್ನು ಪಡೆದವು. ನಿನ್ನ ತೀರ್ಥವು ಹರಿಯುವ ಪ್ರದೇಶವೆಲ್ಲವೂ ಫಲಪುಷ್ಪಭರಿತವಾಗಿ ಜನಸ್ತೋಮದಿಂದ ಶೋಭಿಸು ತ್ತಿರುವುದು. ಪುಣ್ಯವಂತೆಯಾದ ನೀನು ಚಿರಂಜೀವಿಯಾಗಿ ಸದಾಕಾಲ ನನ್ನ ಭಕ್ತರನ್ನು ಪೋಷಿಸು. ನಿನ್ನ ಪಾದದೆಡೆಯಲ್ಲಿ ನೆಲಸಿದ ಜನರಿಗೆ ದುರ್ಭಿಕ್ಷವು ತೋರದಿರಲಿ" ಎಂದು ಹರಸಿದನು. ಶ್ರೀ ಲಕ್ಷ್ಮಿಯೂ, "ಮಗಳೇ ನಿನ್ನ ಭಕುತರೆಲ್ಲಾ ಸಂಪತ್ತಿನಿಂದ ಮೆರೆಯಲಿ, ನಿನ್ನನ್ನು ಸೇವಿಸುವ ಜನರಿಗೆ ದಾರಿದ್ರ್ಯವೆಂಬುದು ತೋರದಿರಲಿ" ಎಂದು ಹರಸಿ ತನ್ನ ಕಾಂತನೊಡನೆ ಮಾಯವಾದಳು. ಮುನಿಗಳೆಲ್ಲರೂ ಆಗ ನಲಿದಾ ಡಿದರು. ದೇವತೆಗಳು ಜಯಘೋಷವನ್ನೆಬ್ಬಿಸಿದರು. ಕಾವೇರಿಯು ತಾನಾಗ ತನ್ನ ದೇಹವನ್ನೆರಡಾಗಿ ಭಾಗಿಸಿ ರಂಗನಾಥನಿಗೆ ಪ್ರದಕ್ಷಿಣೆ ಗೈದು, ಮುಂದೆ ನಡೆದು ಚಂದ್ರಪುಷ್ಕರಣಿಯ ಮಹಿಮೆಯನ್ನು ವರ್ಣಿಸ ಬೇಕೆಂದು ಅಗಸ್ತ್ಯನನ್ನು ಕೇಳಿಕೊಂಡಳು.

ಕುಂಭಸಂಭವನಾಗ ಸಂತೋಷದಿಂದ ಇಂತೆಂದನು. ಪ್ರಿಯೇ ಪೂರ್ವದಲ್ಲಿ ಚಂದ್ರನು ತನ್ನ ಮಾವ ದಕ್ಷಬ್ರಹ್ಮನು ಕೊಟ್ಟ ಶಾಪದಿಂದ ಸಂಭವಿಸಿದ ಕ್ಷಯರೋಗವನ್ನು ನಿವಾರಿಸಿಕೊಳ್ಳಲು ಈ ಪುಷ್ಕರಿಣಿಯ ಬಳಿ ವಿಷ್ಣುವನ್ನು ಕುರಿತು ತಪಸ್ಸುಮಾಡಿದನು. ಅವನ ಘೋರ ತಪಸ್ಸಿಗೆ ವಿಷ್ಣುವು ಮೆಚ್ಚಿ, ಮೈದೋರಿ-"ಚಂದ್ರನೇ! ನಿನ್ನ ಮಾವನು ಕೊಟ್ಟ ಶಾಪ ವನ್ನು ತಪ್ಪಿಸಲು ಬ್ರಹ್ಮನಿಗೂ ಅಸಾಧ್ಯವು. ಆದರೆ ನೀನು ಹದಿನೈದು ದಿನಗಳಿಗೊಮ್ಮೆ ವೃದ್ಧಿಯನ್ನು ಹೊಂದು. ಇನ್ನು ಹದಿನೈದು ದಿನ ಕ್ಷಯ

ವನ್ನು ಹೊಂದು" ಎಂದು ವರವನ್ನಿತ್ತನು. ಅಂದಿನಿಂದ ಇಲ್ಲಿಗೆ ಚಂದ್ರ ಪುಷ್ಕರಿಣಿಯೆಂದು ಹೆಸರಾಯಿತು.

ಆ ಕಥೆಯನ್ನು ಕೇಳಿ ಲೋಪಾಮುದ್ರೆಯು ಸಂತುಷ್ಟಳಾಗಿ "ಪ್ರಿಯನೇ ಶ್ರೀರಂಗನಾಥನು ಇಲ್ಲಿ ಹೇಗೆ ನೆಲಸಿದನು?" ಎಂದು ಪ್ರಶ್ನೆ ಮಾಡಿದಳು. ಅದಕ್ಕಾ ವೈತ್ರಾವರುಣಿಯು ಮುನ್ನ ಪಾರ್ವತಿಪರಮೇಶ್ವರರು ಈ ಸ್ಥಳದ ನೈಸರ್ಗಿಕ ಸೌಂದರ್ಯವನ್ನು ನೋಡಲು ಇಲ್ಲಿಗೆ ಬಂದಿದ್ದರು. ಆಗ ನಾರದನು ಬಂದು ಪಾರ್ವತಿಯೊಡನೆ ಜಗದಂಬೆಯೇ ಈ ಪ್ರದೇಶವು ನಾಟ್ಯವಾಡಲು ಬಲು ಚೆನ್ನಾಗಿದೆ. ಈಶ್ವರನು ನಟರಾಜನು ಗಂಧರ್ವ ಶಾಸ್ತ್ರಗಳನ್ನು ಚೆನ್ನಾಗಿ ಬಲ್ಲವನು. ಅವನು ನಾಟ್ಯವಾಡಿದಂತೆ ಈರೇಳು ಲೋಕಗಳಲ್ಲಿಯೂ ಯಾರೂ ಆಡರು. ಆ ನಾಟ್ಯವನ್ನು ನೀನೆಂದೂ ನೋಡಿಲ್ಲವು. ಈ ಪ್ರದೇಶದಲ್ಲಿ ಅವನ ನಾಟ್ಯವನ್ನು ನೋಡು" ಎಂದು ಹೇಳಿದನು. ಅದನ್ನು ಕೇಳಿ ಸರ್ವಮಂಗಳೆಯು ಶಿವನೊಡನೆ ನಾಟ್ಯವಾಡಬೇಕೆಂದು ಹಠ ಹಿಡಿದಳು. ಆಗ ಶಿವನು ದಾರಿ ಕಾಣದೆ ಹಾಗೆಯೇ ಆಗಲೆಂದು ಒಪ್ಪಿಕೊಂಡು ವಿಶ್ವಕರ್ಮನನ್ನು ಕರೆಯಿಸಿ ನಾಟ್ಯರಂಗವನ್ನೇರ್ಪಡಿಸಬೇಕೆಂದು ಆಜ್ಞೆಯನ್ನಿತ್ತನು. ನಿಮಿಷಾರ್ಧದಲ್ಲಿ ವಿಶ್ವಕರ್ಮನು ನಾಟ್ಯರಂಗವನ್ನೇರ್ಪಡಿಸಿದನು. ಅನಂತರ ಶಿವನು ಬ್ರಹ್ಮ ವಿಷ್ಣು, ನಂದಿ, ಶಾರದೆ, ತುಂಬುರರನ್ನು ಕರೆಯಿಸಿ ತಕ್ಕ ಗಾಯನ ಮಾಡಬೇಕೆಂದು ಹೇಳಿದನು. ಕೂಡಲೇ ಬ್ರಹ್ಮನು ತಾಳ ಹಾಕಲಾರಂಭಿಸಿದನು. ವಿಷ್ಣುವು ತೆರೆ ಹಿಡಿದನು, ನಂದಿಯು ಮದ್ದಳೆ ಬಡಿದನು, ಶಾರದೆಯು ವೀಣೆ ಬಾರಿಸಿದಳು, ಶಿವನಾಗ ತಾಂಡವ ನೃತ್ಯವನ್ನಾಡಿದನು. ಪಾರ್ವತಿಯು ಅದನ್ನೋಡಿ ಸಂತೋಷದಿಂದ ಶಿವನನ್ನು ಅಪ್ಪಿಕೊಂಡಳು. ಅಂದಿನಿಂದ ಚಂದ್ರಪುಷ್ಕರಿಣಿ ಪ್ರದೇಶಕ್ಕೆ ರಂಗಕ್ಷೇತ್ರವೆಂದು ಹೆಸರಾಯಿತು. ಚಂದ್ರನು ವಿಷ್ಣುವನ್ನು ಪ್ರಾರ್ಥಿಸಿದುದರಿಂದ ವಿಷ್ಣುವೂ ಇಲ್ಲಿಯೇ ನೆಲಸಿದನು ಎಂದು ಹೇಳಿದನು.

ಕಾವೇರಿಯು ಆ ಕತೆಯನ್ನು ಕೇಳಿ ಆನಂದಿತಳಾಗಿ ಮುಂದೆ ನಡೆದು ಮಧ್ಯಾರ್ಜುನೀಯ ಪ್ರದೇಶವನ್ನು ಸೇರಿದಳು. ಅಗಸ್ತ್ಯನೂ ಕಾವೇರಿಯೂ, ಸಖಿಯರೊಡನೆ ಆ ಪ್ರದೇಶದ ರಮಣೀಯತೆಯನ್ನು ಕಣ್ಣಾರೆ

ನೋಡಿ ಹರ್ಷಭರಿತರಾದರು. ಆಗ ಅದರ ಮಧ್ಯದಲ್ಲಿ ಒಂದು ತಿಳಿಗೊಳವು ಕಾಣಿಸಿತು. ಅಗಸ್ತ್ಯನದನ್ನು ನೋಡಿ,–"ಪ್ರಿಯೇ! ಅದೇ ಕುಂಭಕೋಣ ಕ್ಷೇತ್ರವು. ಹಿಂದೆ ವಿಷ್ಣುವು ಯಾವಾಗಲೂ ಅವತಾರವನ್ನೆತ್ತುತ್ತಾ ಭೂಲೋಕದಲ್ಲಿಯೇ ಕಾಲಕಳೆಯಲಾರಂಭಿಸಿದನು. ಆಗ ಅವನ ಅಗಲಿಕೆಯನ್ನು ಸಹಿಸಲಾರದೆ ಲಕ್ಷ್ಮಿಯು ಬೇಸರಪಟ್ಟು ಈ ಪ್ರದೇಶದಲ್ಲಿ ಅಡಗಿಕೊಂಡಿದ್ದಳು. ವಿಷ್ಣುವು ಅನಂತರ ಅವಳನ್ನು ಹುಡುಕಿ ಕಂಡು, ಸಮಾಧಾನಪಡಿಸಿ ಅವಳನ್ನು ಪುನಃ ವೈಕುಂಠಕ್ಕೆ ಕರದೊಯ್ದನು. ಅಂದಿನಿಂದ ಈ ಪ್ರದೇಶವು ಧನಧಾನ್ಯ ಸಮೃದ್ಧಿಯಿಂದ ತುಂಬಿ ತುಳುಕುವುದು ಎಂದು ಹೇಳಿದನು.

ತದನಂತರ ಕಾವೇರಿಯು ತನ್ನ ನೀರಿನ ರಾಶಿಯನ್ನು ವಿಭಾಗಿಸಿ ಸಮುದ್ರ ರಾಜನನ್ನು ನೋಡುವ ಉತ್ಸುಕದಿಂದ ವೇಗವಾಗಿ ನಡೆದಳು. ಕೆಲವು ಯೋಜನ ದೂರ ನಡೆದ ನಂತರ ವೀಚಿಗಳ ಘೋಷವು ಕೇಳಿಸಿತು. ಕಾವೇರಿಯೂ, ಅಗಸ್ತ್ಯನೂ, ಕನಕಾ, ಲಕ್ಷಣಾ, ಹೇಮಾವತಿ ಕಪಿಲೆಯರೂ ಆನಂದಾತಿಶಯದಿಂದ ಕುಣಿದಾಡಿದರು. ಅವರ ಬರುವಿಕೆಯನ್ನೇ ನಿರೀಕ್ಷಿಸಿಕೊಂಡಿದ್ದ ವರುಣನು ಅವರನ್ನು ಕರತರಲು ತಾನೇ ನಡುದಾರಿಗೆ ಬಂದು, ಕಾವೇರಿಯನ್ನು ಬಹುವಿಧವಾಗಿ ಸ್ತುತಿಸಿ, ಮಹಾ ವಿಜೃಂಭಣೆಯಿಂದ ತನ್ನರಮನೆಗೆ ಕರೆದೊಯ್ದನು. ಸಮುದ್ರರಾಜನಿಗೆ ತನ್ನ ತೀರ್ಥವನ್ನೆಲ್ಲಾ ಅರ್ಪಿಸಿ ತನ್ನ ಸಖಿಯರ ಪರಿಚಯ ಮಾಡಿಕೊಟ್ಟಳು. ಅನಂತರ ಕಪಿಲೆಯ ಕೈಹಿಡಿದು ವರುಣನ ಪಕ್ಕದಲ್ಲಿ ನಿಲ್ಲಿಸಿ ಕಾವೇರಿಯು "ವರುಣನೇ ಇದೋ ಈ ಬಾಲೆಯು ನಿನ್ನನ್ನು ವರಿಸಬೇಕೆಂಬ ಹಠದಿಂದ, ಅನೇಕ ಕಷ್ಟನಷ್ಟಗಳನ್ನು ಲಕ್ಷಿಸದೆ ನನ್ನೊಡನೆ ಬಂದಿರುವಳು. ಈಕೆಯನ್ನು ಸ್ವೀಕರಿಸು" ಎಂದು ಹೇಳಿ ಅವಳನ್ನು ವರುಣನಿಗೊಪ್ಪಿಸಿದಳು. ಕೂಡಲೆ ಶುಭಮುಹೂರ್ತದಲ್ಲಿ ಸಮುದ್ರ ರಾಜನಿಗೂ ಕಪಿಲೆಗೂ ಲಗ್ನವಾಯಿತು! ಭೂರಿಭೋಜನಗಳಾದುವು; ದೇವತೆಗಳೆಲ್ಲರೂ ವಿಧವಿಧವಾದ ಭಕ್ಷ್ಯಗಳನ್ನು ತಿಂದುತೇಗಿದರು. ಬಳಿಕ ಕಾವೇರಿಯೂ ಅಗಸ್ತ್ಯನೂ ವರುಣನಿಗೆ ವಂದಿಸಿ ಹೊರಡಲಭಿಮುಖರಾದರು. ದೇವತೆಗಳೂ, ಮುನಿಗಳೂ, ಸಮುದ್ರರಾಜನಿಂದ ಬೀಳ್ಕೊ

ಟ್ಟವರಾಗಿ ತಂತಮ್ಮ ಸದನಗಳಿಗೆ ತೆರಳಿದರು. ಅಗಸ್ತ್ಯನು ಶಿವಲಿಂಗ ಗಳಲ್ಲೆಲ್ಲಾ ಶ್ರೇಷ್ಠವಾದ ಅಗಸ್ತ್ಯೇಶ್ವರನನ್ನು ಸಂಗಮಸ್ಥಳದಲ್ಲಿ ಪ್ರತಿಷ್ಠಿ ಸಿದನು. ಲೋಪಾಮುದ್ರೆಯು ತನ್ನ ಮಾತಿನಂತೆ ಅಗಸ್ತ್ಯನನ್ನಗಲದೆ, ಅವನೊಡನೆ ವಿಂಧ್ಯಾದ್ರಿಯ ಸಮೀಪ ದಂಡಕಾರಣ್ಯದಲ್ಲಿ ಆಶ್ರಮವನ್ನು ಹೂಡಿ ನೆಲಸಿದಳು. ಕನಕ ಸುಜ್ಯೋತಿಯರು ನಾಗಲೋಕಕ್ಕೆ ಹೊರಟು ಹೋದರು,

## ಸತ್ವಪರೀಕ್ಷೆ

ಒಂದುದಿನ ನಾರದ ಮಹರ್ಷಿಯು ಭೂಸಂಚಾರಮಾಡುತ್ತಾ ಗಂಗೆಯರಮನೆಯಲ್ಲಿಳಿದನು. ಜಾಹ್ನವಿಯಾ ಸುರಮುನಿಯನ್ನು ಯಥೋ ಚಿತವಾದ ಅತಿಥಿಸತ್ಕಾರಗಳಿಂದ ತೃಪ್ತಿಪಡಿಸಿ, ಸ್ವರ್ಣಪೀಠದಲ್ಲಿ ಕುಳ್ಳಿರಿಸಿ ಲೋಕದಲ್ಲಿ ವಿಶೇಷವಾರ್ತೆಯನ್ನರುಹಬೇಕೆಂದು ಕೇಳಿಕೊಂಡಳು. ಆಗ ನಾರದನು ಸರ್ವತೀರ್ಥಶ್ರೇಷ್ಠಳೆಂದೆನಿಸಿಕೊಂಡಿದ್ದ ಗಂಗೆಯ ಹೆಮ್ಮೆ ಯನ್ನು ಮುರಿಯಬೇಕೆಂದೂ ಕಾವೇರಿ ಮಹಿಮೆಯನ್ನು ಭೂಲೋಕದ ಲ್ಲೆಲ್ಲಾ ಪ್ರಶಂಸಿಸಬೇಕೆಂದೂ ನಿಶ್ಚಯಿಸಿ "ಭಾಗೀರಥಿಯೇ ಸತ್ಯಲೋಕ ದಲ್ಲಿ ವಿಶೇಷ ವಾರ್ತೆಯಿದೊಂದೇ" ಎಂದು ಹೇಳಿ ಸುಮ್ಮನಾದನು. ಆಗ ಗಂಗೆಯು "ಮುನಿವರ್ಯರೇ ತಾವು ನನ್ನ ಸಂಗಡ ತಮಾಷೆ ಮಾಡಬೇಡಿರಿ ಎಲ್ಲವನ್ನೂ ಹೇಳಿರಿ" ಎಂದು ಕೇಳಿಕೊಂಡಳು.

ನಾರದನಾ ಮಾತನ್ನು ಕೇಳಿ–ವಾರ್ತೆಯದು ವಿಶೇಷವಲ್ಲ ಆದರೂ ಸತ್ಯಲೋಕವೆಲ್ಲವೂ ಅದೊಂದೇ ವಿಷಯವನ್ನು ಹೇಳುತ್ತಿರುವುದು. ದಿನ ವೆಲ್ಲವೂ ಆ ಕಾವೇರಿಯ ಪ್ರಶಂಸೆಯೇ ಎಂದನು

ಗಂಗೆಯಾಗ ಆಶ್ಚರ್ಯಭರಿತಳಾಗಿ–ಏನಾ ಕಾವೇರಿ? ಎಂದು ಪ್ರಶ್ನಿಸಿ ದಳು.

ಅದಕ್ಕೆ ನಾರದನು–"ಅಹುದು ಆ ಕಾವೇರಿ ದಕ್ಷಿಣಾಪಥದಲ್ಲಿ ಅಗ ಸ್ತ್ಯನ ಪತ್ನಿಯಾದ ಕಾವೇರಿಯು ಲೋಕೋಪಕಾರಕ್ಕಾಗಿ ಪ್ರವಾಹವಾಗಿ ಹರಿದಿರುವಳು ಅವಳ ತೀರ್ಥವು ನಿನ್ನ ತೀರ್ಥಕ್ಕಿಂತಲೂ ಪವಿತ್ರವಾದು ದೆಂದು ಸತ್ಯಲೋಕವೆಲ್ಲಾ ಹೇಳುತ್ತಿರುವುದು"ಎಂದು ನಗುತ್ತಾ ಹೇಳಿದನು.

"ಆ ಸತ್ಯಲೋಕವನ್ನು ಸುಡು. ಅವರಿಗೆಲ್ಲಾ ಬುದ್ಧಿಭ್ರಮಣೆಯಾಗಿರಬೇಕು" ಎಂದು ಗಂಗೆಯು ಕೋಪೋದ್ರೇಕದಿಂದ ನುಡಿದಳು. ದಕ್ಷಿಣಾಪಥದ ಕಾವೇರಿಯು ತೀರ್ಥಶ್ರೇಷ್ಠಳೇ! ವಿಷ್ಣುವಿನ ಪಾದಸ್ಪರ್ಶದಿಂದ ಪಾವನಳಾಗಿ, ರುದ್ರನ ಜಟಾಧಾರಿಣಿಯಿಂದ ಪುನೀತಳಾಗಿ ಜಹ್ನುಮುನಿಯ ಮಗಳಾಗಿ ಸಗರ ಪುತ್ರರನ್ನು ಸ್ವರ್ಗಕ್ಕೆ ಕಳುಹಿದ ಗಂಗೆಯ ತೀರ್ಥಕ್ಕಿಂತ ಆ ದಸ್ಯುಗಳ ಮಲೆಸೀಮೆಯಲ್ಲಿ ಧ್ವನಿಸಿ ಶಿಲಾವಲ್ಕಲಗಳನ್ನು ಧರಿಸಿ ಅಸುರರ ಮಲದ್ವಾರಗಳ ಮುಖಾಂತರ ಹರಿದ ಆ ಕಾವೇರಿಯ ತೀರ್ಥವು ಶ್ರೇಷ್ಠವೇ ಛಿ! ಛಿ! ಆ ಸತ್ಯಲೋಕದ ಜನರಿಗೆ ಹವಿರ್ಭಾಗವನ್ನು ತಿಂದು ತಿಂದು ಬೊಜ್ಜು ಬೆಳೆದು ಕಣ್ಣುಕಾಣದಾಗಿದೆ."

ನಾರದ—'ಜಾಹ್ನವಿ! ನನ್ನ ಅಭಿಪ್ರಾಯವು ನಿನಗೆ ಗೊತ್ತೇ ಇದೆ. ಆದರೆ ಸತ್ಯಲೋಕದ ಮತವಂತಿರುವುದು. ನಿನ್ನ ಶ್ರೇಷ್ಠತೆಯನ್ನು ಇತ್ಯರ್ಥಪಡಿಸಿಕೊಳ್ಳುವ ಸಮಯವು ಬಂದಿರುವುದು. ನೀನೀಗಲೇ ಸತ್ಯಲೋಕಕ್ಕೆ ಹೋಗಿ ನಿನ್ನನ್ನು ಮರೆತಿರುವ ಆ ಬಿಡುಗಣ್ಣರನ್ನು ಎಚ್ಚರಿಸಿ, ನಿನ್ನ ಶ್ರೇಷ್ಠತೆಯನ್ನು ಪ್ರತಿಪಾದಿಸುವುದುತ್ತಮ.'

'ಹಾಗಾದರೆ ನಾನೀಗಲೇ ಹೊರಡುವೆನು' ಎಂದಂದು ಗಂಗೆಯು ಕೋಪದಿಂದಲೂ, ಆತುರದಿಂದಲೂ ಪುಳಕಿತಳಾಗಿ ಸತ್ಯಲೋಕಕ್ಕೆ ಹೋದಳು.

ನಾರದನು ತನ್ನ ಮನೋ ಇಂಗಿತವು ನೆರವೇರಿತೆಂದು ಆನಂದಪಡುತ್ತಾ, ದಂಡಕಾರಣ್ಯದ ಮಾರ್ಗವನ್ನು ಹಿಡಿದು, ಅಗಸ್ತ್ಯಾಶ್ರಮವನ್ನು ಸೇರಿದನು. ಮಹಾ ವಿಷ್ಣುಭಕ್ತನಾದ ನಾರದನನ್ನು ಕಂಡಕೂಡಲೆ ಅಗಸ್ತ್ಯನೂ, ಲೋಪಾಮುದ್ರೆಯೂ ಮುಂದೆ ಬಂದು ಅವನ ಪಾದಪದ್ಮಗಳನ್ನು ತೊಳೆದು, ಉಚಿತವಾದ ಪೀಠದಲ್ಲಿ ಕುಳ್ಳಿರಿಸಿ, ಮಧುಪರ್ಕಾದಿಗಳಿಂದ ತೃಪ್ತಿಪಡಿಸಿ ಅವನ ಸಂಗಡ ಸುಖಸಲ್ಲಾಪಗಳನ್ನಾಡುತ್ತ ಕುಳಿತುಕೊಂಡರು ಆಗ ನಾರದನು ಕಾವೇರಿಯನ್ನು ಸಂಬೋಧಿಸಿ—'ಎಲೌ ಜಗನ್ಮಾತೆಯೇ! ನಾನು ದಂಡಕಾರಣ್ಯದಲ್ಲಿ ಸಂಚರಿಸುತ್ತಿರುವಾಗ ಇತ್ತೀಚೆ ನಿನ್ನ ತೀರ್ಥಸ್ನಾನ ಮಾಡಿದೆನು, ಅದೇನೋ! ನನಗರಿಯದು. ಆ ತೀರ್ಥಸ್ನಾನ ಮಾಡಿದಕೂಡಲೆ ನನ್ನ ಹಸಿವು, ತೃಷೆ, ಬಳಲಿಕೆಯೆಲ್ಲಾ

ಮಾಯವಾದುವು. ನಿನ್ನ ತೀರ್ಥವು ಭೂಲೋಕದ ತೀರ್ಥಗಳಲ್ಲಿ ಶ್ರೇಷ್ಠವು. ಆದ್ದರಿಂದಲೇ ಸತ್ಯಲೋಕದಲ್ಲಿಯೂ ನಿನ್ನ ಹೆಸರು ದೇವತೆಗಳ ನಾಲಗೆಯ ತುದಿಯಲ್ಲಿರುವುದು. ಆದರೆ ಗಂಗೆಯು ತಾನೇ ಶ್ರೇಷ್ಠಳೆಂದೆನಿಸಿಕೊಳ್ಳಲು ಬ್ರಹ್ಮ ಸಭೆಗೆ ಹೋಗಿರುವಳು. ತಾಯೇ ಕಾವೇರಿಯೇ! ನಿನ್ನ ನಾಮವು ಪವಿತ್ರವಾದುದು. ನಿನ್ನ ಸಲಿಲವು ಪಾಪನಿವಾರಕವಾದುದು. ಆದರೂ ನಿನ್ನಲ್ಲಿ ಪ್ರೌಢಿಮೆ ಎಳ್ಳಷ್ಟೂ ಇಲ್ಲವು. ನೀನು ಬ್ರಹ್ಮಲೋಕಕ್ಕೆ ಹೋಗಿ ನಿನ್ನ ಶ್ರೇಷ್ಠತೆಯನ್ನು ಪ್ರದರ್ಶಿಸುವುದುತ್ತಮ" ಎಂದನು.

ನಾರದನ ಮಾತುಗಳನ್ನು ಕೇಳಿ ಲೋಪಾಮುದ್ರೆಯು ಪತಿಯ ಮೋರೆಯನ್ನು ನೋಡಲು ಅಗಸ್ತ್ಯನೂ ನಾರದನ ಅಭಿಪ್ರಾಯವು ಸಮ್ಮತವೆಂದು ಹೇಳಿದನು. ಕಾವೇರಿಯು ಅನಂತರ ನಿಜರಮಣನಾಜ್ಞೆಯನ್ನು ಕೈಗೊಂಡು ಬ್ರಹ್ಮಲೋಕಕ್ಕೆ ಹೋದಳು. ನಾರದನು ವೈಕುಂಠಕ್ಕೆ ತೆರಳಿದನು.

ಅತ್ತ ಗಂಗೆಯು ಕೋಪದಿಂದ ಕಣ್ಣುಗಳಲ್ಲಿ ಕಿಡಿಗಳನ್ನು ಕಾರುತ್ತಾ ಮಹಾ ವೇಗದಿಂದ ನಡೆದು ಬ್ರಹ್ಮಲೋಕವನ್ನು ಸೇರಿದಳು. ಬ್ರಹ್ಮನು ಜಾಹ್ನವಿಯನ್ನು ತಕ್ಕ ಸನ್ಮಾನದಿಂದ ಬರಮಾಡಿಕೊಂಡು ಉಚಿತವಾದ ಪೀಠವನ್ನಿತ್ತು ಸತ್ಕರಿಸಿ, ಬಂದ ವಿಚಾರವೇನೆಂದು ಕೇಳಿದನು. ಆಗ ಗಂಗೆಯು ಕಾರ್ಮುಗಿಲೊಡ್ಡು ಮಳೆ ಸುರಿಸುವಂತೆ ಮಹಾ ಪ್ರತಾಪದಿಂದ–"ನಿಮಗೆಲ್ಲರಿಗೇನು ಹುಚ್ಚು ಹಿಡಿದಿದೆಯೇ? ನೀವೆಲ್ಲಾ ಜ್ಞಾನಶೂನ್ಯರಾಗಿರುವಿರೇನು? ಲೋಕೇಶನಾದ ವಿಷ್ಣುವಿನ ಪಾದದಿಂದುದ್ಭವಿಸಿ ಈಶ್ವರನ ಜಟಾವಲ್ಕಲಗಳಿಂದಿಳಿದು, ಜಾಹ್ನವಿ ಮುನಿಯಾಶ್ರಮವನ್ನು ತೊಳೆದು, ಭಗೀರಥ ಪ್ರಾರ್ಥಿತೆಯಾಗಿ ಸಗರ ಪುತ್ರರನ್ನು ನಾಗಲೋಕಕ್ಕಟ್ಟಿ, ಭೂಲೋಕದ ಜನರಿಗೆಲ್ಲಾ ಪುಣ್ಯ ತೀರ್ಥವನ್ನಿತ್ತು, ಸ್ವರ್ಗಲೋಕಕ್ಕೆ ಅವರನ್ನು ಕಳುಹುತ್ತಿರುವ ನನ್ನ ಪವಿತ್ರತೆಯನ್ನು ತಿಳಿಯದೆ, ಬ್ರಾಹ್ಮಣ ಶೂನ್ಯವಾದ ದಂಡಕಾರಣ್ಯದಲ್ಲಿ ಜನ್ಮವೆತ್ತಿದ ಕಾವೇರಿಯನ್ನು ತೀರ್ಥಶ್ರೇಷ್ಠೆಯೆಂದೆನಲು ನಿಮಗೆ ನಾಲಿಗೆಯು ಹೇಗೆ ಬರುತ್ತಿರುವುದು? ನಿಮಗೆಲ್ಲಾ ಜ್ಞಾನಶೂನ್ಯವಾಗಿದೆಯೇ? ಎಂದು ಬಡಬಡನೆ ಹೇಳಿಬಿಟ್ಟಳು.

ಅದನ್ನು ಕೇಳಿ ಬ್ರಹ್ಮ ಸಭೆಯು ಬೆಪ್ಪಾಗಿ ಹೋಯಿತು. ಸಭಿಕರೆಲ್ಲರೂ ಒಬ್ಬರಮೊಗವನ್ನೊಬ್ಬರು ನೋಡುತ್ತಾ ನಿಶ್ಚೇಷ್ಟಿತರಾಗಿ ನಿಂತುಬಿಟ್ಟರು.

ಆಗ ಕಾವೇರಿಯು ಮಂದಗಮನೆಯಾಗಿ ಮಂದಸ್ಮಿತಳಾಗಿ ಅಲ್ಲಿ ತೋರಿದಳು. ಅವಳ ತೇಜೋಮಯವಾದ ಮುಖ, ಮಂದಹಾಸದ ನಗು, ಗಂಭೀರ ನಡೆಯು ಬ್ರಹ್ಮ ಸಭಿಕರಿಗೆ ನವಚೈತನ್ಯವನ್ನು ತುಂಬಿತು. ಬ್ರಹ್ಮನು ಅವಳನ್ನು ಕಂಡೊಡನೆಯೇ, ತನ್ನಾಸನದಿಂದಿಳಿದು ಬಂದು, ಸಭೆಗೆ ಕರದೊಯ್ದು ಉಚಿತಾಸನದಲ್ಲಿ ಗಂಗೆಯ ಪಕ್ಕದಲ್ಲಿಯೇ ಕುಳ್ಳಿರಿಸಿದನು. ಗಂಗೆಯ ಕೋಪಕ್ಕೆ ಆಗ ಆಜ್ಯಾಹುತಿಯನ್ನು ಕೊಟ್ಟಂತಾಯಿತು. ಅವಳು ಬಿರುಬಿರನೆ ಕಾವೇರಿಯನ್ನೊಮ್ಮೆ ನೋಡಿದಳು. ದೇವಸಭೆಯಿದನ್ನು ನೋಡಿ ಬೆದರಿತು.

ಬ್ರಹ್ಮನಾಗ ಕಾವೇರಿಗೆ–ಮಾದಾಯೇ! ನೀನು ಸಕಾಲದಲ್ಲಿ ಬಂದೊದಗಿದೆ. ಇದೋ ಈಕೆಯೇ ಜಾಹ್ನವಿಯು ಎಂದು ಗಂಗೆಯ ಪರಿಚಯ ಮಾಡಿಸಿದನು. ಭಾಗೀರಥಿಯು ಒಡನೆ ಸರಸಿಜೋದ್ಭವನನ್ನು ಕುರಿತು ಮುತ್ತಜ್ಜನೇ ಭೂಲೋಕವನ್ನೆಲ್ಲಾ ಸೃಷ್ಟಿಸಿದ ನಿನಗೆ ಭೇದಾಭೇದಗಳನ್ನೂ ತಾರತಮ್ಯಗಳನ್ನೂ ನಿರ್ಣಯಮಾಡಲು ಗೊತ್ತಿಲ್ಲವೇ? ಮೊನ್ನೆ ಜನಿಸಿದ ಕಾವೇರಿಯನ್ನು ಶ್ರೇಷ್ಠವೆಂದೆನಿಸುತ್ತಿಯೇ! ಇಲ್ಲವೇ ಅಮೃತ ಸದೃಶವಾದ ತೀರ್ಥವನ್ನೀಯುವ ಗಂಗೆಯು ಈಕೆಗಿಂತ ಕೀಳೆಂದೆನುತ್ತೀಯೋ? ಎಂದು ಪ್ರಶ್ನಿಸಿದಳು. ಸಭಿಕರಾದರೋ ತಂತಮ್ಮ ಮನಸ್ಸಿನಲ್ಲಿಯೇ, "ಜಾಹ್ನವಿಯು ಸುರಗಂಗೆಯು, ವಿಷ್ಣುಪಾದೋದ್ಭವೆಯು, ರುದ್ರ ಜಟಾವಾಸಿಯು; ಆದರೆ ಕಾವೇರಿಯು ವಿಷ್ಣುಜಾತೆಯು, ಆದಿಶಕ್ತಿಯು, ಜಗನ್ಮೋಹಿನಿಯು, ಎಂದೆಣಿಸಿ ತಂತಮ್ಮ ಅಭಿಪ್ರಾಯಗಳನ್ನು ಹೊರಗೆಡಹದೆ ಸೂತ್ರದ ಬೊಂಬೆಗಳಂತೆ ಕಮಲಾಸನನನ್ನೇ ನೋಡ ಹತ್ತಿದರು. ಕಮಲೋದ್ಭವನಾಗ ಚೆನ್ನಾಗಿ ಆಲೋಚಿಸಿ ಇಂತೆಂದನು. "ಎಲೌ ಗಂಗೆಯೇ ನಿನ್ನ ಮಾತುಗಳು ನನ್ನನ್ನು ಕಷ್ಟಹಾದಿಯಲ್ಲಿ ತಂದಿರಿಸಿದವು. ನೀನೆನ್ನ ಮಗಳು; ನಿನ್ನ ತೀರ್ಥವು ಶ್ರೇಷ್ಠವು; ನೀನು ತ್ರಿವಿಕ್ರಮನ ಚರಣದಲ್ಲುದ್ಭವಿಸಿದೆ; ಆ ವಿಷ್ಣು ಪಾದಾಂಗುಷ್ಠಾಭಿಸಂಗದಿಂದ ನೀನು ಪವಿತ್ರಳಾದೆ ನೀನೇ ಮಂದಾಕಿನಿಯೆಂದೆನಿಸಿ ಸಪ್ತರ್ಷಿ

ಗಳಿಂದಲೂ ಸುರ, ಗಂಧರ್ವ, ಯಕ್ಷ, ಕಿನ್ನರ, ಕಿಂಪುರುಷರಿಂದ ಸಂಸೇವ್ಯಳಾಗಿ ಪರಿಶೋಭಿಸಿದೆ. ನೀನೇ ಸಿತೆ, ಅಲಕನಂದೆ, ಚಕ್ಷುರ್ಭದ್ರೆ, ಭಾಗೀರಥಿ, ಜಾಹ್ನವಿ ಎಂಬ ನಾಮಗಳಿಂದ ಮೆರೆದೆ. ನಿನ್ನ ಕ್ಷೇತ್ರಗಳೆಲ್ಲಾ ಮಹಾಶ್ರೇಷ್ಠವಾದುವು. ಕಾಶಿಯು ಕೈಲಾಸಕ್ಕೆ ಸಮ. ಪ್ರಯಾಗವು ವೈಕುಂಠಕ್ಕೆ ಸಮ; ಶತಕೋಟಿ ತೀರ್ಥಗಳೆಲ್ಲವೂ ನಿನ್ನಲ್ಲೇ ಅಡಕವಾಗಿವೆ. ನಿನ್ನಲ್ಲಿ ತೀರ್ಥಸ್ನಾನ ಮಾಡಿದವರು ಕಲ್ಪಾಂತ ಸ್ವರ್ಗಸುಖವನ್ನನುಭವಿಸುವರು. ನಿನ್ನ ಸಲಿಲವು ಹರಿದು ಪವಿತ್ರವಾಡಿದ ವೃತ್ತಿಕೆಯನ್ನು ಸೇವಿಸಿದರೆ ಸ್ವರ್ಗವು ಲಭಿಸುವದು ನಿನ್ನ ಸಲಿಲರಾಶಿಯಲ್ಲಿ ಪ್ರಾಣವನ್ನು ಬಿಟ್ಟವರಿಗೆ ಪುನರ್ಜನ್ಮವೇ ಇಲ್ಲ. ಆದರೆ ಜಾಹ್ನವಿಯೇ! ಈ ಕಾವೇರಿಯು, ಆದಿ ಶಕ್ತಿಯು; ಆದಿ ಪ್ರಕೃತಿಯು; ಆದ್ದರಿಂದ ನಿನಗೂ ನನಗೂ ಮಾತೆಯು. ಸಮುದ್ರ ಮಥನಕಾಲದಲ್ಲಿ ಅಮೃತವನ್ನು ಮೋಹಿನೀರೂಪದಿಂದ ದೇವತೆಗಳಿಗಿಕ್ಕಿ, ನನಗೆ ಮಗಳಾಗಿ, ಅಯೋನಿಜೆಯಾದೀಕೆಯು ಲೋಪಾಮುದ್ರೆ ಎಂಬ ನಾಮದಿಂದ ಮೆರೆದಳು. ಆದ್ದರಿಂದ ಉಪಕಾರ ಬುದ್ಧಿಯಿಂದ ಅಪುತ್ರವಂತರಾದ ಕವೇರ ದಂಪತಿಗಳಿಗೆ ಮಗಳಾಗಿ ಕಾವೇರಿಯೆಂದೆನಿಸಿಕೊಂಡಳು. ತದನಂತರ ತಪಃಪ್ರಭಾವದಿಂದ ಹರಿಯನ್ನೂ ಈಶ್ವರನನ್ನೂ ಒಲಿಸಿಕೊಂಡು ಭೂಲೋಕದ ಜಂತು ಸಂತತಿಗಳಿಗೆಲ್ಲಾ ಉಪಕಾರಮಾಡಲು ಪ್ರವಾಹವಾಗಿ ಹರಿಯುವಂತಹ ಶಕ್ತಿಯನ್ನು ಅವರಿಂದ ಪಡೆದು, ಮುನಿಶ್ರೇಷ್ಠನೂ ರುದ್ರಾಂಶನೂ ಆದ ಅಗಸ್ತ್ಯನನ್ನು ವರಿಸಿ, ಲೋಕಾಭಿಮಾದಿತೆಯಾಗಿ, ನದಿಯಾಗಿ ಪ್ರವಹಿಸಿದಳು. ಅವಳ ನದಿಯ ತಡೆಯಲ್ಲಿ ಅಗಸ್ತ್ಯನು ಗಾವುದ ಗಾವುದಕ್ಕೂ ಶಿವಲಿಂಗಗಳನ್ನು ಪ್ರತಿಷ್ಠಿಸಿರುವನು. ಈಕೆಯೂ ಆದಿಶಕ್ತಿ, ಲೋಪಾಮುದ್ರೆ, ಕಾವೇರಿ, ಕಪಿಲೆಯೆಂಬ ನಾಮದಿಂದ ಮೆರೆಯುತ್ತಿರುವಳು.

"ಇವಳ ತೀರ್ಥವು ಭೂಲೋಕದಲ್ಲಿರುವ ತೀರ್ಥಗಳಿಗಿಂತ ಶ್ರೇಷ್ಠವಾದುದು. ಸಪ್ತ ತೀರ್ಥಗಳು ಇದರಲ್ಲಿ ನೆಲಸಿರುವವು. ಪರಮ ಪಾವನರಾದ ಋಷಿವರ್ಯರ ಪುಣ್ಯಾಶ್ರಮಗಳಿಗಾಗಿ ಹರಿದು, ನಾಗಕನ್ನಿಕೆಯರೊಡನೆ, ಸಮುದ್ರ ಸಂಗಮ ಮಾಡಿರುವಳು. ಸರ್ವ ತೀರ್ಥ

ಮಯುವಾದ ಮಣಿಕರ್ಣಿಕೆಯಿಂದುದ್ಭವಿಸಿ, ಪಾವನರಾದ ಭಗಂಡ, ವಸಿಷ್ಠ, ಹರಿಶ್ಚಂದ್ರ, ಕಣ್ವ, ಅರ್ಕ, ಭಾರದ್ವಾಜ ಮೊದಲಾದ ಮುನಿ ಶ್ರೇಷ್ಠರ ಆಶ್ರಮಗಳಲ್ಲಿ ಹೊರಳಿ ಶ್ರೀಮನ್ನಾರಾಯಣನ ಮಹಿಮೆಯ ಸ್ಥಳಗಳನ್ನು ಸುತ್ತಿ, ಸಮುದ್ರನನ್ನು ಸೇರಿದಳು. ಬ್ರಹ್ಮಕುಂಡ, ಭಗಂಡಾ ಶ್ರಮ, ಕನಕಾ ಸಂಗಮ, ಅಗರ್ತ ಪುಷ್ಕರಿಣಿ, ಲಕ್ಷ್ಮಣಾ ಸಂಗಮ, ಹೇಮಾವತಿ ಸಂಗಮ, ಶಂಖತೀರ್ಥ, ವಸಿಷ್ಠಾಶ್ರಮ, ಕಪಿಲಾ ಸಂಗಮ, ಮಧ್ಯರಂಗ, ಚಂದ್ರ ಪುಷ್ಕರಿಣಿ ಎಂಬ ಶ್ರೇಷ್ಠವಾದ ಕ್ಷೇತ್ರಗಳು ಕಾವೇ ರಿಯ ತಡಿಯಲ್ಲಿರುವವು. ಇವೆಲ್ಲವೂ ಕಾಶೀ ಪ್ರಯಾಗಾದಿ ಮಹಾ ಕ್ಷೇತ್ರಗಳಿಗಿಂತಲೂ ಮಿಗಿಲಾದುವುಗಳು. ಕಾಶಿಯಲ್ಲಿ ಸತ್ತರೆ ಮೋಕ್ಷ; ಬ್ರಹ್ಮಕುಂಡದಲ್ಲಿ ಮಿಂದರೆ ಕೈವಲ್ಯ; ನಿನ್ನಲ್ಲಿ ಮೃತ್ತಿಕೆ ತಿಂದರೆ ಪುನರ್ಜನ್ಮ ವಿಲ್ಲ. ಇವಳಲ್ಲಿ ತೀರ್ಥಪ್ರಸಾದ ಕೈಗೊಂಡರೆ ಪುನರ್ಜನ್ಮವು ಇರದು.

"ಗಂಗೆಯೇ ಇನ್ನೂ ಕೇಳು. ಇವಳಲ್ಲಿ ಬರೇ ಸ್ನಾನಮಾತ್ರದಿಂದ ಜನರು ಅಪರಿಷ್ಟಾರ್ಥಸಿದ್ಧಿಯನ್ನು ಪಡೆಯುವರು. ಭೂಲೋಕದ ಶಕ್ತಿ ಗಳಿವಳಲ್ಲಿ ಅಡಗಿರುವವು. ಇವಳ ತಲೆಯಲ್ಲಿ ಅನ್ನದಾನಮಾಡಿದವನು ಅತ್ಯಧಿಕವಾದ ಸಂಪತ್ತನ್ನು ಹೊಂದುವನಲ್ಲದೆ, ನನ್ನ ಲೋಕದಲ್ಲಿ ಸಾಯುಜ್ಯ ಪದವಿಯನ್ನು ಪಡೆಯುವನು. ಇವಳ ಬಳಿ ಪಿಂಡದಾನ ಮಾಡಿದರೆ ಪಿತೃಗಳು ನರಕದಲ್ಲಿದ್ದರೂ ಗಯಾ ಶ್ರಾದ್ಧ ಫಲವನ್ನು ಹೊಂದಿ, ಸ್ವರ್ಗಲೋಕಕ್ಕೆ ಹೋಗುವರು. ಅಲ್ಲದೆ ಸ್ತ್ರೀಯರು ಪುಂಸ್ತ್ವವನ್ನು ಹೊಂದುವರು. ಇವಳ ದಡದಲ್ಲಿದ್ದು ಸ್ನಾನಪಾನಾದಿಗಳನ್ನು ಕೈಕೊಳ್ಳದ ಹಿಂದು ಮುಂದು ಕೂದಲಿನವರೂ ಪಾಪಗಳನ್ನು ಕಳೆದು ಸ್ವರ್ಗಕ್ಕೆ ಹೋಗುವರು. ಪ್ರತಿ ವರ್ಷವೂ ರವಿಯು ತುಲಾರಾಶಿಯನ್ನು ಸೇರು ವಾಗಲೂ, ಚೈತ್ರ ಶುಕ್ಲ ಚತುರ್ದಶಿ, ವೈಶಾಖ ಶುಕ್ಲ ತೃತೀಯ ಮೊದ ಲಾದ ಪುಣ್ಯದಿನಗಳಲ್ಲಿಯೂ,ಮಹೋದಯ, ಅರ್ಧೋದಯ ಮೊದಲಾದ ಯೋಗ ಕಾಲಗಳಲ್ಲಿಯೂ ತ್ರಿಮೂರ್ತಿಗಳೂ, ದೇವತೆಗಳೂ, ಸುರ ಮುನಿಗಳೂ ತೀರ್ಥಗಳೊಡನೆ ಇವುಗಳಲ್ಲಿ ನೆಲಸುವರು. ಆಗ ಇವಳಲ್ಲಿ ಸ್ನಾನಪಾನಾದಿಗಳನ್ನು ಮಾಡಿ, ಪಿಂಡವನ್ನಿಟ್ಟರೆ, ಪಿತೃಗಳು ನರಕ ದಲ್ಲಿದ್ದರೂ ಸ್ವರ್ಗಲೋಕವನ್ನು ಸೇರುವರಲ್ಲದೆ ಅವರು ಪುನರ್ಜನ್ಮವನ್ನೇ

ಪಡೆಯುರು. ಅಷ್ಟಮಿಾ ರೇವತಿ ಯೋಗದಲ್ಲ ಇವಳಲ್ಲಿ ಸಹಸ್ರ ತೀರ್ಥಗಳು ನೆಲಸುವವು. ವೈಶಾಖ ಶುಕ್ಲ ತೃತೀಯದಲ್ಲಿ ಸಮುದ್ರರಾಜನು ಅಲ್ಲಿಗೆ ಸ್ನಾನಕ್ಕಾಗಿ ಬರುವನು. ಚೈತ್ರ ಶುಕ್ಲ ಚತುರ್ದಶಿಯಲ್ಲಿ ಅಲ್ಲಿಗೆ ಸಹ್ಯಾಚಲದ ದೇವತೆಗಳೆಲ್ಲಾ ತೀರ್ಥದಲ್ಲಿ ಮುಳುಗಲು ಬರುವರು. ವ್ಯತೀಪಾತಾದಿ ಯೋಗದಲ್ಲಿ ಸುರರು ಸ್ನಾನಕ್ಕೆ ಬರುವರು. ಷಷ್ಠೀ ಸಪ್ತಮಿಾ ಸಂಧಿಸಿದ ಪದ್ಮಕಯೋಗ, ದ್ವಾದಶೀ ಸೋಮವಾರ ಸೇರಿದ ಹರಿ ಶಂಕರ ಯೋಗ, ಅಮಾವಾಸ್ಯೆ, ಭಾನುವಾರ, ಶ್ರವಣ ನಕ್ಷತ್ರ ವ್ಯತೀಪಾತ ಒಟ್ಟುಗೂಡಿದ ಅರ್ಧೋದಯ ಮಹೋದಯ ಯೋಗಗಳಲ್ಲಿ ಸ್ನಾನ ಮಾಡಿದರೆ ಸಾಯುಜ್ಯ ಪದವಿಯು ಬರುವುದು. ತರ್ಪಣವನ್ನಿತ್ತರೆ ಪಿತೃಗಳಿಗೆ ಮೋಕ್ಷವು ಸಿಗುವುದು. ಗಂಗೆಯೇ ಹೆಚ್ಚೇನು ಹೇಳಲಿ? ಅನೇಕರ ಪಾಪವನ್ನು ಹೊತ್ತುಕೊಂಡಿರುವ ನೀನೂ ಇವಳಲ್ಲಿ ಮುಳುಗಿದರೆ ನಿಷ್ಕಲ್ಮಷಳಾಗುವಿ. ಆದ್ದರಿಂದ ಇವಳು ನಿನಗಿಂತಲೂ ಕಿರಿಯಳಾದರೂ ಭಕ್ತಿಯನ್ನು ತೋರಿಸಿ ಆದರಿಸು. ಎಲ್ಲಿ ಭಕ್ತಿ ತೋರಬೇಕೋ ಅಲ್ಲಿ ತೋರಲೇ ಬೇಕು. ಯಾರು ಮರ್ಯಾದೆಗೆ ಅರ್ಹರೋ ಅಂಥವರನ್ನು ಗೌರವಿಸಲೇ ಬೇಕು."

ಬ್ರಹ್ಮನ ಮಾತುಗಳನ್ನು ಕೇಳಿ ಆತನ ಸಭಿಕರು ಗಂಗೆಯು ಏನೆಂದು ಬಿಡುವಳೋ ಎಂದು ಆಲೋಚಿಸುತ್ತಾ ತಣ್ಣಗಾಗಿ ಹೋದರು. ಆದರೆ ಗಂಗೆಗೆ ಕೋಪವು ಬಾರದೆ ಹಸನ್ಮುಖಳಾದಳು. ಆಗ ಸಭಿಕರೆಲ್ಲರಿಗೆ ಧೈರ್ಯವು ಬಂತು. ಅಷ್ಟರಲ್ಲಿ ಮಂದಾಕಿನಿಯು—"ಪರಮಾತ್ಮನ ಲೀಲೆಯು ಅಗಾಧವಾದುದು." ಎಂದಂದು ಕಾವೇರಿಯನ್ನು ಕುರಿತು "ತಂಗೀ ನಿನ್ನ ಮಹಿಮೆಯನ್ನು ನನ್ನ ತಂದೆಯ ಬಾಯಿಂದಲೇ ಕೇಳಿ ಆನಂದಿತೆಯಾದೆನು. ನಿನ್ನ ದರ್ಶನ ಲಾಭದಿಂದ ನಾನಿಂದು ಪುಣ್ಯವಂತೆಯಾದೆನು. ತಾಯೇ ನನ್ನ ತಪ್ಪನ್ನು ಕ್ಷಮಿಸು" ಎಂದಳು. ಅವಳ ಮಾತುಗಳನ್ನು ಕೇಳಿ ಕಾವೇರಿಯು–"ಅಕ್ಕಾ, ನಿನ್ನ ಅಪರಾಧವೇನೂ ಇಲ್ಲವು. ನಾನು ನಿನಗಿಂತ ವಿಶೇಷವಾದ ಸನ್ಮಾನಕ್ಕೆ ಅರ್ಹಳಲ್ಲ" ಎಂದಳು. ಅನಂತರ ಗಂಗೆಯು ಕಾವೇರಿಯನ್ನು ಬಹುವಿಧವಾಗಿ ಸ್ತುತಿಸಿ, ಅವಳನ್ನು ತನ್ನ ಅರಮನೆಗೆ ಕರದೊಯ್ದು ಕೆಲವು ದಿನಗಳ

ತನಕ ಇರಿಸಿಕೊಂಡಳು. ಕಾವೇರಿಯು ಆಮೇಲೆ ಮಹಾ ಉಲ್ಲಾಸದಿಂದ ತನ್ನಾಶ್ರಮಕ್ಕೆ ಹಿಂದಿರುಗಿ ನಡೆದ ಸಂಗತಿಗಳೆಲ್ಲವನ್ನೂ ತನ್ನ ಪತಿಗೆ ತಿಳಿಸಿದಳು.

## ಉಪಸಂಹಾರ

ಹಿಮಾಲಯ ತಪ್ಪಲು. ಮನೋಹರವಾದ ಅರಣ್ಯವು ಗಗನವನ್ನು ಚುಂಬಿಸಲೆತ್ನಿಸುತಿದ್ದ ಅಶೋಕವೃಕ್ಷಗಳಿಂದಲೂ ತೋರಣಗಳಂತೆ ಹಬ್ಬಿಕೊಂಡಿದ್ದ ಲತೆಗಳಿಂದಲೂ ಶೋಭಾಯಮಾನವಾಗಿ ಒಪ್ಪುತಿದ್ದಿತು. ಬಡಗದಿಕ್ಕಿನಲ್ಲಿ ಹಿಮವಂತನು ಶ್ವೇತಾಂಬರನಾಗಿ, ಊರ್ಧ್ವ ಶಿರಸ್ಸಿನಿಂದ ಲೋಕೇಶನನ್ನು ಕುರಿತು ತಪಸ್ಸುಮಾಡುವಂತೆ ತೋರುತಿದ್ದನು. ಕೆಂಗದಿರನ ಎಳೆ ಕಿರಣಗಳು ಗಂಗೆಯ ಸಲಿಲರಾಶಿಯನ್ನಪ್ಪಿ, ತಮ್ಮ ಕೆಂಪಾದ ಅಧರಮುದ್ರೆಯನ್ನೊತ್ತಲು ಆ ಸಲಿಲರಾಶಿಯು ಉರಿಯುತ್ತಿದ್ದ ಕಾಡ್ಗಿಚ್ಚಿನಂತೆ ತೋರುತಿದ್ದಿತು.

ಆ ಕೃಷ್ಣವರ್ಣೆಯಾದರೂ ಸುಲಕ್ಷಣೆಯಾದ, ತೇಜೋಭರಿತೆಯಾದರೂ ಲಜ್ಜಾವತಿಯಾದ ಓರ್ವ ತರುಣಿಮಣಿಯು ಮಂದಗಾಮಿನಿಯಾಗಿ ಯಾರನ್ನೋ ಹುಡುಕುತ್ತಾ ಗಂಗೆಯ ತಡಿಯಲ್ಲಿ ಕಾಣಿಸಿಕೊಂಡಳು. ಬಹಳ ಹೊತ್ತಿನ ವರೆಗೆ ಅಲ್ಲೆಲ್ಲಾ ಅಲೆದಾಡಿದಳು. ಆದರೂ ಅವಳು ಹುಡುಕುತಿದ್ದ ವ್ಯಕ್ತಿಯು ಅವಳ ಕಣ್ಣಿಗೆ ಬಿದ್ದಂತೆ ತೋರಲಿಲ್ಲ. ಸೂರ್ಯನ ಕಿರಣಗಳಾಗ ಬೆಂಕಿಯಂತೆ ಉರಿಯನ್ನು ಕಾರಲು ಮೊದಲಿಟ್ಟವು. ಆಗ ಓರ್ವ ಬಾಲೆಯು ಮಹಾ ವೇಗದಿಂದ ಆ ಕಡೆ ನಡೆದುಬಂದಳು. ಅವಳ ದೇಹಕಾಂತಿಯು ಸೂರ್ಯನ ತೇಜಸ್ಸನ್ನಡಗಿಸುವಂತಿತ್ತು. ಅವಳ ಮುಖವು ಚಂದ್ರಬಿಂಬವನ್ನು ಧಿಕ್ಕರಿಸುವಂತಿತ್ತು. ಅವಳ ಉಲ್ಲಾಸವು ಬಣ್ಣಿಸಲಸದಳವಾಗಿತ್ತು.

ಮೊದಲೇ ಪರಿಚಿತಳಾದ ಕೃಷ್ಣವರ್ಣದ ಸ್ತ್ರೀವ್ಯಕ್ತಿಯು ಆ ಯುವತಿಯನ್ನು ನೋಡಿ–'ಗಂಗಾ, ಇಷ್ಟು ಹೊತ್ತಿನವರೆಗೆ ನಿನ್ನನ್ನು ಹುಡುಕುತಿದ್ದುದಾಯಿತು. ಇದೇನೇ! ನಿನ್ನನ್ನು ಕಾಣಲೇ ಇಲ್ಲವಲ್ಲ! ನೀನೆಲ್ಲಿದ್ದೆ! ಎಂದು ಕೇಳಿದಳು.

ಆದಕ್ಕೆ ಗಂಗೆಯು-"ಯಮುನಾ, ನಾನೇನು ಹೇಳಲಿ. ಪಾಪಾತ್ಮರೆಲ್ಲರೂ ನನ್ನಲ್ಲಿ ಸ್ನಾನಮಾಡಿ ತಮ್ಮ ಪಾಪವನ್ನು ನನ್ನಲ್ಲೇ ಬಿಡುವರು. ಜಹ್ನು ಮುನಿಯಿಂದ ಉಪ್ಪೋಷಿತೆಯಾಗಿ ಪಾತಾಳ ಲೋಕವನ್ನು ಹೊಕ್ಕು, ಸಗರ ಪುತ್ರರ ಭಸ್ಮವನ್ನು ತೇಲಿಸಿ, ಅವರನ್ನೆಲ್ಲಾ ಸ್ವರ್ಗಕ್ಕೆ ಕಳುಹಿಸುವುದರಿಂದ ನನ್ನ ಶಕ್ತಿಗುಂದಿಹೋಗಿದೆ. ಆದ್ದರಿಂದ ಅನ್ಯರ ಪಾಪವನ್ನು ಭಸ್ಮಮಾಡುವ ಚೈತನ್ಯವು ನನ್ನಲ್ಲಿಲ್ಲದಿರುವುದರಿಂದ ನನ್ನ ಭಕುತರ ಪಾದದ ಹೊರೆಯನ್ನು ನೀನೇ ಹೊರಬೇಕಾಗಿ ಬಂತು. ಆ ಕಾರಣ ನಾನು ಕಲ್ಮಷಭರಿತೆಯಾಗಿ, ಕಾಡು ಜನರಂತೆ ಕೃಷ್ಣ ವರ್ಣದಿಂದ ವಿಕಾರ ಸ್ವರೂಪಳಾಗಿ ತೋರುತಿದ್ದೆನು. ನನ್ನ ರೂಪವನ್ನು ನಾನು ನೋಡಿ ಅಸಹ್ಯಪಟ್ಟು, ನಿಮಗೆಲ್ಲರಿಗರಿಯದಂತೆ ಲೋಕ ಜನನಿಯೂದ ಕಾವೇರಿಯ ಪುಣ್ಯ ತೀರ್ಥದಲ್ಲಿ ಸ್ನಾನಮಾಡಿ ಆ ಪಾಪದ ಹೊರೆಯನ್ನು ಕಳೆಯಲು ಹೊರಟುಹೋಗಿದ್ದೆನು. ನನ್ನ ಮೈಯ್ಯಲ್ಲಂಟಿಕೊಂಡಿದ್ದ ಪಾಪವೆಲ್ಲವೂ, ಆವಳ ತೀರ್ಥ ಸ್ಪರ್ಶದಿಂದ ಭಗ್ನಾವಶೇಷವಾಗಿ ಹೋದುವು. ಇಂದು ಅವಳ ತೀರ್ಥದಲ್ಲಿ ಸ್ನಾನಮಾಡಿ, ಅವಳ ಸಂದರ್ಶನಮಾಡಿ ಬರುವಾಗ ಕಾಲ ವಿಳಂಬವಾಗಿ ಹೋಯಿತು" ಎಂದಳು.

ಅದನ್ನು ಕೇಳಿ ಯಮುನೆಯು ಆಶ್ಚರ್ಯಭರಿತಳಾಗಿ, ಕಾವೇರಿಯ ಚರಿತ್ರೆಯನ್ನೆಲ್ಲಾ ಹೇಳೆಂದು ಕೇಳಿಕೊಳ್ಳಲು ಗಂಗೆಯು ಬ್ರಹ್ಮನು ಹೇಳಿದುದೆಲ್ಲವನ್ನು ಆದಿಯಿಂದ ಅಂತ್ಯದ ವರೆಗೆ ಹೇಳಿದಳು. ಯಮುನೆಯೂ ಆವಳ ಸಂಗಾತಿಯಾದ ಸರಸತಿಯೂ ಆ ಕಥೆಯನ್ನು ಕೇಳಿ ಆನಂದಭರಿತರಾಗಿ ತಾವೂ ಕಾವೇರಿ ದರ್ಶನಕ್ಕೆ ಹೊರಟುಹೋದರು.

## —* ಸ್ವೀಕಾರ *—

1. ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕರಿಂದ ಗಣಿಸಿ ಪರಿಶೋಧಿಸಲ್ಪಟ್ಟ ಸುಜ್ಞಾನಾಮೃತ ಕಾರ್ಯಾಲಯದಿಂದ ಪ್ರಕಟಿಸಲ್ಪಟ್ಟ ಪ್ರಮಾಥಿ ಸಂವತ್ಸರದ ಪಂಚಾಂಗವನ್ನು ಅತ್ಯಾದರದಿಂದ ಸ್ವೀಕರಿಸುತ್ತೇವೆ.

2. ಗ್ರಂಥಮಾಲೆಯು ಮೇಲಿನ ಅಭಿಮಾನದಿಂದ ಕಳುಹಿಸಿದ—"ವರ್ತಕಧುರೀಣ"ದ ಫೆಬ್ರವರಿ ಸಂಚಿಕೆಯು ಕೈಸೇರಿರುತ್ತದೆ.

# کتب خانہ

## جامعۂ عثمانیہ

۱۔ اراکین مجلس اعلیٰ، مجلس رفقا، مجلس انتظامی
مجالس شعبہ جات نصاب پانچ کتابیں ایک ماہ تک اپنے پاس رکھ سکینگے
۲۔ اساتذۂ جامعۂ عثمانیہ و کلیہ جات ملحقہ و گزیٹڈ عہدہ داران جامعہ
اور اراکین دارالترجمہ تین کتابیں ایک ماہ تک اپنے پاس رکھ سکینگے۔
۳۔ طیلسانین رجسٹر شدہ دو کتابیں بی۔ اے۔ اور انٹرمیڈیٹ
کے طلبہ تین کتابیں ایم۔ اے، ایل ایل۔ بی و تحقیقاتی جماعتوں کے
طلبہ پانچ کتابیں دو ہفتہ تک اپنے پاس رکھ سکینگے۔
۴۔ مدت مقررہ پر کتابیں واپس نہ ہوں تو طلبہ سے بحساب
ایک آنہ یومیہ فی کتاب جرمانہ لیا جائیگا۔
۵۔ بشرط موقع کتابیں کرر جاری کی جاسکینگی مگر اس غرض
کے لئے کتب خا ... لانا لازم ہے۔
۶۔ کتابیں ... پر ذمہ داری
عائد ہوگی۔
۷۔ کتابوں